ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 17 ಏಪ್ರಿಲ್ 21-27, 1997 ಬೆಲೆ ರೂ. 2.00

ಛೀಮಾರಿ ಹಾಕಿಸಿಕೊಂಡವರಿಗೆ ಹೆಗಡೆಯವರ ವಕಾಲತ್ತು!

ನಿಗಮ, ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಸಾರ್ವಜನಿಕ ಹಣದ ಲೂಟಿ

ಎನ್.ಕೆ.ಉಪಾಧ್ಯಾಯ

ಮುಖ್ಯಮಂತ್ರಿ ಜೆ.ಎಚ್. ಪಟೇಲರು ರಾಜ್ಯದಲ್ಲಿರುವ ಮೂವತ್ತೆರಡು ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸಿದ್ದಾರೆ. ಕೆಲವು ಶಾಸಕರು, ಕೆಲವರು ಜನತಾದಳದ ಕಾರ್ಯಕರ್ತರು ಇದರಲ್ಲಿ ಸೇರಿದ್ದಾರೆ. ಈ ನಿಗಮ ಮಂಡಳಿ ಅಧ್ಯಕ್ಷರಿಗೆ ರಾಜ್ಯ ಮಂತ್ರಿ ಸ್ಥಾನ ಇರುತ್ತದೆ. ಆ ಮಂತ್ರಿಗೆ ಲಭ್ಯವಾಗುವ ಸುಸಜ್ಜಿತ ಮನೆ, ಕಚೇರಿ, ಕಾರು, ಸಿಪಾಯಿ, ಟಿಎ-ಡಿಎ, ಟೆಲಿಫೋನ್ ಮೊದಲಾದ ಎಲ್ಲಾ ತರದ ಸವಲತ್ತುಗಳು ಇವರೆಲ್ಲರಿಗೂ ಲಭ್ಯ. ತಮ್ಮ ನಿಗಮಕ್ಕೆ ಸಂಬಂಧ ಪಟ್ಟ ವಿಷಯಗಳ ಕುರಿತು ಅಭ್ಯಾಸ ಮಾಡಲು ಇವರುಗಳೆಲ್ಲಾ ಇಡೀ ದೇಶದಲ್ಲಿಯೂ ಹಾಗೆಯೇ ವಿದೇಶಗಳಿಗೂ ಸರಕಾರಿ ಖರ್ಚಿನಲ್ಲೇ ಪ್ರವಾಸ ಕೈಗೊಂಡು ದೇಶ-ವಿದೇಶ ಪ್ರಯಾಣದ ಸುಖಭೋಗಿಸ ಬಹುದು. ದೇಶ-ವಿದೇಶಗಳ ಸೌಂದರ್ಯ ಕಣ್ಣ ತುಂಬ ಕಂಡು ಬರಬಹುದು. ಅಂದರೆ ಈ ನಿಗಮ-ಮಂಡಳಿಗಳ ಅಧ್ಯಕ್ಷರಿಗಾಗಿ ಸರಕಾರ ತನ್ನ ಖಜಾನೆಯಿಂದ ಕೋಟ್ಯಾವಧಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ರಾಜ್ಯ ಹಣಕಾಸು ಬಿಕ್ಕಟ್ಟಿನಲ್ಲಿರುವಾಗ ನಿಗಮ-ಮಂಡಳಿಗಳಿಗೆ ಅಧ್ಯಕ್ಷನ್ನು ನೇಮಿಸುವ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಪ್ರಜೆಗಳ ಮುಂದಿದೆ. ಬಡವರಿಗೆ, ಕೊಳಚೆ ಪ್ರದೇಶದವರಿಗೆ ತಲೆಯ ಮೇಲೆ ಸೂರು ಇಲ್ಲ, ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಸರಿಯಾದ ಶಾಲಾ ಕೊಠಡಿಗಳಿಲ್ಲ, ಕೂತು ಅಭ್ಯಾಸ ಮಾಡಲು ಮುದ್ದು ಮಕ್ಕಳಿಗೆ ಬೆಂಚಿನ ವ್ಯವಸ್ಥೆ ಬಿಡಿ ಚಾಪೆಯಂಥವುಗಳ ವ್ಯವಸ್ಥೆಯೂ ಇಲ್ಲ. ಕೊಳಚೆ ಪ್ರದೇಶಗಳು ರೋಗಾಣುಗಳ ತಾಣವಾಗಿಯೇ ಉಳಿದಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರ ಬಹಿರ್ದೆಶೆಗಾಗಿ ಏನೂ ವ್ಯವಸ್ಥೆಯಿಲ್ಲದೆ ಮರ್ಯಾದೆ ಉಳಿಸಿಕೊಳ್ಳುವುದೂ ಅಸಾಧ್ಯವಾದ ಪರಿಸ್ಥಿತಿ ಇದೆ. ಕುಡಿಯಲು ನೀರಿಲ್ಲ, ರೋಗ ನಿವಾರಣೆಗೆ ಮದ್ದಿಲ್ಲ. ಬಡ ಜನರೆಲ್ಲ ಇಂಥ ಗಂಭೀರ ಸಮಸ್ಯೆಗಳನ್ನೆದುರಿಸುತ್ತಿರುವಾಗ, ಅವುಗಳಿಗೆ ಪರಿಹಾರ ಒದಗಿಸಲು ಸಂಪನ್ಮೂಲದ ಕೊರತೆಯ ನೆವವನ್ನು ಸರಕಾರ ಮುಂದಿಡುತ್ತಿರುವಾಗ ನಿಗಮ-ಮಂಡಳಿಗಳಿಗೆ ಅಧ್ಯಕ್ಷರುಗಳನ್ನು ನೇಮಿಸುವ ಕ್ರಮ ಯಾರಿಗೆ ಸಮಾಧಾನಕರವಾಗಿದೆಂಬುದನ್ನು ಜೆ.ಎಚ್.ಪಟೇಲರು ವಿವರಿಸ ಬಲ್ಲರೇ? ತನ್ನ ಈ ಕ್ರಮವನ್ನು ಸಮರ್ಥಿಸಿಕೊಳ್ಳಬಲ್ಲರೇ? ಅದು ಸಾಧ್ಯವಾಗದ ಮಾತು.

ಕೇಂದ್ರದ ಸ್ಥಿತ್ಯಂತರಗಳು, ದೇವೇಗೌಡರ ಸರಕಾರದ ಪತನದಿಂದ ರಾಜ್ಯದಲ್ಲಿಯ ತಮ್ಮ ಸರಕಾರದ ಹಾಗೆಯೇ ಜನತಾದಳದ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ತಡೆಹಿಡಿಯಲು ಈ ಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಿದರೆ ತಪ್ಪಾಗಲಾರದು.

ದೇವೇಗೌಡರ ೩೫ ಜನ ಮಂತ್ರಿ ಮಂಡಲದ ಬದಲಾಗಿ, ಜೆ.ಎಚ್.ಪಟೇಲರು ಎಲ್ಲರನ್ನೂ ಸಂತುಷ್ಟಗೊಳಿಸುವ ಉದ್ದೇಶದಿಂದ ೪೫ ಜನರ ಜಂಬೋಜೆಟ್ ಮಂತ್ರಿ ಮಂಡಲವನ್ನು ರಚಿಸಿಯೂ ತಮ್ಮ ಪಕ್ಷದೊಳಗೆ ಬಂಡಾಯ ಎದುರಿಸಬೇಕಾಯಿತು. ಮಂತ್ರಿ ಮಂಡಲದ ಪುನರ್ರಚನೆಗಾಗಿ ಒತ್ತಡ ಬರಲಾರಂಭಿಸಿದಾಗ, ತಮ್ಮ ಪಕ್ಷದೊಳಗೆ ಆಂತರಿಕ ಸಮಸ್ಯೆಯ ಪರಿಹಾರಕ್ಕಾಗಿ ಮಂತ್ರಿ ಮಂಡಲದ ಪುನರ್ರಚನೆಯ ಮತ್ತು ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಉಪಾಯ ಹುಡುಕಲಾಯಿತು. ದಿಲ್ಲಿಯ ಸ್ಥಿತ್ಯಂತರ ಅದನ್ನು ಮುಂದೂಡಿತು. ಈಗ ದೇವೇಗೌಡರು ಪ್ರಧಾನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಒಳಗೊಳಗೇ ಬುಸುಗುಟ್ಟುತ್ತಿದ್ದ ಭಿನ್ನಾಭಿಪ್ರಾಯ ಕವಲೊಡೆದು ಪಕ್ಷ ಒಡೆಯಬಾರದೆಂಬ ಉದ್ದೇಶದಿಂದ ಮುಖ್ಯಮಂತ್ರಿ ಜೆ.ಎಚ್.ಪಟೇಲರು ಈ ಕ್ರಮ ಕೈಗೊಂಡಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೆಯೇ ಇತರ ಎಡ ಪಕ್ಷಗಳು ಕೇಂದ್ರ ಹಾಗೂ ಅಖಿಲಭಾರತ ಮಟ್ಟದಲ್ಲಿ ಬಿಜೆಪಿಯನ್ನು ಸೋಲಿಸಿ, ಕಾಂಗ್ರೆಸ್

ಪುಟ 2 ನೋಡಿ

ಕೊನೆಗೂ ಕಾಂಗ್ರೆಸ್(ಐ) ಅಧ್ಯಕ್ಷರು ಕೇಂದ್ರದಲ್ಲಿ ಸರಕಾರ ರಚಿಸುವ ತಮ್ಮ ದಾವೆಯನ್ನು ಹಿಂತೆಗೆದುಕೊಂಡರು. ಅವರ ಹಿಂದಿನ ಪತ್ರದಿಂದಾಗಿ ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರಕಾರವನ್ನು ಬಿಜೆಪಿಯೊಡಗೂಡಿ ಇಳಿಸಿ ದೇಶವನ್ನು ಅನಗತ್ಯವಾಗಿ ರಾಜಕೀಯ ಅಸ್ಥಿರತೆಯತ್ತ ತಳ್ಳಿದ ಮುಜುಗರದಿಂದ ಪಾರಾಗಲು ಕಾಂಗ್ರೆಸ್ ಮುಖಂಡರು ಪ್ರಯತ್ನಿಸಬೇಕಾಗಿ ಬಂದಿತ್ತು. ಇಂತಹ ಪ್ರಯತ್ನದ ಭಾಗವಾಗಿ ಸಂಯುಕ್ತ ರಂಗ ತನ್ನ ಮುಖಂಡರನ್ನು ಬದಲಿಸಿದರೆ ಅದು ಮತ್ತೊಮ್ಮೆ ಸರಕಾರ ರಚಿಸಲು ತಾನು ಬೆಂಬಲ ನೀಡುವುದಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿತು. ಆದರೆ ಸಂಯುಕ್ತ ರಂಗ ಇಷ್ಟಕ್ಕೇ ಒಪ್ಪಲಿಲ್ಲ. ಸರಕಾರ ರಚಿಸುವುದಾಗಿ ಕಾಂಗ್ರೆಸ್(ಐ) ರಾಷ್ಟ್ರಪತಿಗಳಿಗೆ ನೀಡಿದ ಪತ್ರವನ್ನು ಹಿಂತೆಗೆದುಕೊಳ್ಳಬೇಕೆಂದು ವಿಶೇಷವಾಗಿ ಎಡಪಕ್ಷಗಳು ದೃಢ, ತತ್ವಬದ್ಧ ನಿಲುವು ತಳೆದವು. ಸಂಯುಕ್ತ ರಂಗ ದೇವೇಗೌಡರ ಸ್ಥಾನದಲ್ಲಿ ಬೇರೊಬ್ಬ ಮುಖಂಡರನ್ನು ಆರಿಸಿದ ಮೇಲೆ ಹಾಗೆ ಮಾಡುವುದಾಗಿ ಕಾಂಗ್ರೆಸ್ ಮುಖಂಡರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಕೊನೆಗೆ ಮಣಿಯಲೇ ಬೇಕಾಗಿ ಬಂದಿದೆ.

ಇದರಿಂದ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಕಳೆದ ವರ್ಷದ ಮಹಾ ಚುನಾವಣೆಗಳಲ್ಲಿ ಜನತೆ ನೀಡಿದ ಆದೇಶವನ್ನು ಪರಿಪಾಲಿಸುವ ಸಂಯುಕ್ತ ರಂಗ ಸರಕಾರದ ರಚನೆಯ ಪ್ರಯತ್ನ ಮತ್ತೆ ಆರಂಭವಾಗಿದೆ. ಇನ್ನೊಂದೆಡೆ ಕೆಲವು ಪ್ರಾದೇಶಿಕ ಪಕ್ಷಗಳನ್ನು ಪುಸಲಾಯಿಸಿ ತಾನೇ ಸರಕಾರ ರಚಿಸುವ ಮತ್ತೊಂದು ಪ್ರಯತ್ನವೂ ಸಫಲವಾಗದ ಬಿಜೆಪಿ ಮುಖಂಡರಿಂದ ಸಂಯುಕ್ತರಂಗ ಸರಕಾರ ರಚನೆಯಾಗದಂತೆ ತಡೆಯುವ ಪ್ರಯತ್ನಗಳೂ ಸಾಗಿದ್ದು ಇದರ ಫಲಿತಾಂಶ ಈ ಸಂಚಿಕೆ ಓದುಗರ ಕೈ ಸೇರುವ ವೇಳೆಗೆ ಸ್ಪಷ್ಟವಾಗಿರುತ್ತದೆ.

ಹೆಗಡೆಯವರ ಇಂಗಿತವೇನು?

ಈ ನಡುವೆ ಇತ್ತೀಚೆಗೆ ಬೆಂಗಳೂರಿನಲ್ಲಿ ರಾಷ್ಟ್ರೀಯ ರಾಜಕೀಯ ವಿದ್ಯಮಾನಗಳ ಕುರಿತು ಸುದೀರ್ಘ ಹೇಳಿಕೆಯನ್ನು ಕೊಟ್ಟ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇಡೀ ದೇಶದಲ್ಲೇ ಎಲ್ಲಾ ವಿಭಾಗದ ಜನರಿಂದ ಛೀಮಾರಿಗೆ ಒಳಗಾದ ಶ್ರೀಮಾನ್ ಕೇಸರಿಯವರ ನೇತೃತ್ವದ ಕಾಂಗ್ರೆಸ್ ಪಕ್ಷದ ವಕ್ತಾರರಾಗಿ ವರ್ತಿಸಿದ್ದಾರೆ. ಇಡೀ ದೇಶವು ಕಾಂಗ್ರೆಸ್ಸನ್ನು 5 ವರ್ಷದ ಭ್ರಷ್ಟ ಕೋಮುವಾದಿಗಳತ್ತ ವಾಲಿಕೊಂಡಿದ್ದ ಹಾಗೂ ಸಾಮ್ರಾಜ್ಯಶಾಹಿಗಳಿಗೆ ದೇಶದ ಆರ್ಥಿಕದ ಮುಕ್ತ ಲೂಟಿಗೆ ಅವಕಾಶ ಮಾಡಿಕೊಟ್ಟ ಆಡಳಿತೆಯನ್ನು ತಿರಸ್ಕರಿಸಿರುವಾಗ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇದೀಗ ಕಾಂಗ್ರೆಸ್ ನೇತೃತ್ವದ ಅಥವಾ ಕಾಂಗ್ರೆಸ್ ಪ್ರಮುಖ ಪಾತ್ರ ವಹಿಸುವಂತಹ ಸರಕಾರವನ್ನು ಕೇಂದ್ರದಲ್ಲಿ ಅಪೇಕ್ಷಿಸಿ ಎಲ್ಲರಿಗೂ(ಯಾರೂ ಅವರ ಸಲಹೆ ಕೇಳದಿದ್ದರೂ!)ಮುಕ್ತ ಸಲಹೆ ನೀಡುತ್ತಿದ್ದಾರೆ. ಅಲ್ಲದೆ, ಅದೇ ಉಸಿರಿನಲ್ಲಿ ದೇಶದ ನಾಲ್ಕು ಎಡಪಕ್ಷಗಳ, ಅದರಲ್ಲೂ ಸಿಪಿಐ(ಎಂ) ಪಕ್ಷದ ತತ್ವಬದ್ಧ ರಾಜಕೀಯ ನಿಲುವನ್ನು ತೀವ್ರವಾಗಿ ಅವರು ಖಂಡಿಸಿದ್ದಾರೆ. ಇಂದರ ಹಿಂದಿರುವ ಅವರ ಇಂಗಿತವೇನು? ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಹಾಗೂ ರಾಜ್ಯ ಕಾರ್ಯದರ್ಶಿಗಳೂ ಆದ ಪಿ.ರಾಮಚಂದ್ರರಾವ್ ಖಾರವಾಗಿ ಪ್ರಶ್ನಿಸಿದ್ದಾರೆ.

ಜಗತ್ತಿನ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ದೇಶದ ಗುತ್ತೇದಾರಿ ಸಂಸ್ಥೆಗಳು ಅಪೇಕ್ಷಿಸುವಂತ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಅಪೇಕ್ಷಿಸುವುದು ದೇಶದಲ್ಲಿ ಎರಡು ಸಮಾನ ಆರ್ಥಿಕ ನೀತಿಗಳನ್ನು ಅನುಸರಿಸುವ ಪಕ್ಷಗಳ ಸುತ್ತ ಧ್ರುವೀಕರಣವನ್ನು. ಅವರೆಲ್ಲರ ಅಭಿಪ್ರಾಯದ ಪ್ರಕಾರ ಭಾರತದಲ್ಲೂ ಇಂಗ್ಲೆಂಡಿನಂತೆ ಅಮೇರಿಕಾದಂತೆ ಎರಡು ಬಂಡವಾಳಶಾಹಿಗಳ ನೇತೃತ್ವದ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಪಕ್ಷಗಳು ಬೆಳೆದು ಬರಬೇಕೆಂಬುದಾಗಿದೆ. ಅವರ ಲೆಕ್ಕದ ಪ್ರಕಾರ ಕಾಂಗ್ರೆಸ್ಸು ಅವುಗಳಲ್ಲಿ ಒಂದು ಪಕ್ಷವಾಗಿರಬೇಕು ಮತ್ತು ಇನ್ನೊಂದು ಪಕ್ಷ ಭಾರತೀಯ ಜನತಾ ಪಕ್ಷ(ಬಿಜೆಪಿ) ಆಗಿರಬೇಕು. ಇದು ಹೆಗಡೆಯವರ ನಿಜ ಇಂಗಿತ ಎಂಬುದು ಅವರ ಹೇಳಿಕೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ಸ್ಪಷ್ಟವಾಗುತ್ತದೆ ಎಂದು ಸಿಪಿಐ(ಎಂ) ವಕ್ತಾರರು ಹೇಳುತ್ತಾರೆ.

ಎಡಪಕ್ಷಗಳ ಬಗ್ಗೆ ಅವರು ಕುಪಿತರಾಗಿರುವುದು ಏಕೆ?

ಇಂತಹ ಒಂದು ಧ್ರುವೀಕರಣಕ್ಕೆ ತೀವ್ರ ಅಡ್ಡಿಯಾಗಿರುವುದು ಇಂದು ಎಡಪಕ್ಷಗಳು, ಅದರಲ್ಲೂ ಸಿಪಿಐ(ಎಂ) ಪಕ್ಷವು ಕಷ್ಟ ಪಟ್ಟು ಒಟ್ಟು ಸೇರಿಸಿದ ಹಾಗೂ ದೇಶವನ್ನು ಉತ್ತಮ ರೀತಿಯಲ್ಲಿ 10 ತಿಂಗಳುಗಳಲ್ಲಿ ಆಳಿದ ಸಂಯುಕ್ತ ರಂಗ ಎಂದಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಸಂಯುಕ್ತ ರಂಗವನ್ನು ಒಡೆಯುವ ತಂತ್ರವನ್ನೇ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶ್ರೀಮಾನ್ ಕೇಸರಿಯವರು ಮಾಡಿ, ದೇವೇಗೌಡರ ನೇತೃತ್ವದ ಸರಕಾರವನ್ನು ಕ್ಷುಲ್ಲಕ ಕಾರಣಗಳಿಗಾಗಿ ಕೆಳಗಿಳಿಸಿದುದು ಎಂದು ಅಭಿಪ್ರಾಯಪಡುತ್ತಾರೆ.

ಪುಟ 8 ನೋಡಿ

ಕೊಚ್ಚಿಯಲ್ಲಿ ಸಿಐಟಿಯು ಅಖಿಲ ಭಾರತ ಸಮ್ಮೇಳನ

ದೇಶದ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಯಾದ ಸಿಐಟಿಯುವಿನ 9ನೇ ಅಖಿಲ ಭಾರತ ಸಮ್ಮೇಳನ ಕೇರಳದ ಕೊಚ್ಚಿಯಲ್ಲಿ ಇದೇ ಏಪ್ರಿಲ್ 21ರಿಂದ 26ರವರೆಗೆ ನಡೆಯುತ್ತಲಿದೆ. ಕರ್ನಾಟಕದ85618 ಸಿಐಟಿಯು ಸದಸ್ಯರನ್ನು ಪ್ರತಿನಿಧಿಸುವ 78 ಪ್ರತಿನಿಧಿಗಳೂ ಸೇರಿದಂತೆ ದೇಶದೆಲ್ಲೆಡೆ ಯಿಂದ ಬರುವ 2500 ಕಾರ್ಮಿಕ ಪ್ರತಿನಿಧಿಗಳು ದೇಶದ, ಕಾರ್ಮಿಕ ವರ್ಗದ ಪ್ರಸ್ತುತ ಸಮಸ್ಯೆಗಳನ್ನು ಪ್ರಶ್ನೆಗಳನ್ನು ಕುರಿತಂತೆ, ಆಮೂಲಾಗ್ರ ಚರ್ಚೆ ನಡೆಸಿ ತೀರ್ಮಾನಗಳಿಗೆ ಬರಲಿದ್ದಾರೆ. ಅಲ್ಲದೆ ದಕ್ಷಿಣಾ ಆಫ್ರಿಕಾ, ಇಟಲಿ, ಶ್ರೀಲಂಕಾ, ಬಾಂಗ್ಲಾದೇಶ್, ಬ್ರಿಟನ್, ಕಝಾಕಿಸ್ತಾನದಿಂದ ವಿದೇಶೀ ಪ್ರತಿನಿಧಿಗಳು, ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ(ಡಬ್ಲ್ಯು.ಎಫ್.ಟಿ.ಯು) ಮತ್ತು ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ)ದ ಪ್ರತಿನಿಧಿಗಳನ್ನು ಈ ಸಮ್ಮೇಳನಕ್ಕೆ ಆಹ್ವಾನಿಸಲಾಗಿದೆ.

ಏಪ್ರಿಲ್ 20ರಂದು ಅಖಿಲ ಭಾರತ ದುಡಿಯುವ ಮಹಿಳೆಯರ ಸಮಾವೇಶ ನಡೆಯಲಿದ್ದು ಇದರಲ್ಲಿ ಕರ್ನಾಟಕದ 30 ಪ್ರತಿನಿಧಿಗಳೂ ಸೇರಿದಂತೆ 300 ಪ್ರತಿ ನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಕೇರಳ ರಾಜ್ಯ ಈ ಸಮ್ಮೇಳನಕ್ಕೆ ಈಗಾಗಲೇ ಸಜ್ಜುಗೊಂಡಿದೆ. ಏಪ್ರಿಲ್ 6ರಂದು ಸಿಐಟಿಯುಗೆ ಸೇರಿದ ಕಾರ್ಮಿಕ ಸಂಘಗಳು "ಧ್ವಜ ದಿನ" ಆಚರಿಸಿ 9ನೇ ಸಮ್ಮೇಳನದ ಅಧಿಕೃತ ಪ್ರಕಟಣೆ ನೀಡಿದವು. ರಾಜ್ಯದೆಲ್ಲೆಡೆ ಕಾರ್ಮಿಕ ಸಂಘಗಳು ಅಲಂಕೃತ ಕಚೇರಿಗಳು, ವಿವಿಧ ಜಂಕ್ಷನ್‌ಗಳು, ಹುತಾತ್ಮರ ಸ್ತಂಭಗಳಲ್ಲಿ ಸಿಐಟಿಯು ಬಾವುಟವನ್ನು ಹಾರಿಸಿದರು. ಅದಕ್ಕೆ ಮೊದಲು ಹಲವೆಡೆ ಜಾಥಾಗಳು ನಡೆದವು.

ಸಮ್ಮೇಳನ ನಡೆಯುವ ಕೊಚ್ಚಿಯಲ್ಲಿ "ಸಾಮುದ್ರಿಕ ಓಟ"ದ ಒಂದು ವಿಶೇಷ ಕಾರ್ಯಕ್ರಮ ನಡೆಯಿತು. ಸಮ್ಮೇಳನದ ಸ್ಥಳವಾದ ಕಲೂರು ಅಂತರ್‍ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಈ ಓಟ ಮುಕ್ತಾಯಗೊಂಡಿತು.

CITU IXth ALL INDIA CONFERENCE, COCHIN. '97 APRIL 21-26
UNITY AND STRUGGLE

"ಹಿಂದಿನ ಪ್ರಯೋಗಗಳಿಗಿಂತ ಪ್ರೌಢವಾದ ಒಂದು ಅನುಭವ"

ಎನ್ನುತ್ತಾರೆ ಮಾಜಿ ಪ್ರಧಾನಿ ವಿ.ಪಿ.ಸಿಂಗ್



"ಸಂಯುಕ್ತ ರಂಗ ಇನ್ನಷ್ಟು ಬಲಗೊಳ್ಳಲಿದೆ. ದೇಶ ಕಲಿಯುವ ಪ್ರಕ್ರಿಯೆಯಲ್ಲಿದೆ, ನಾವೆಲ್ಲಾ ಕಲಿಯುವ ಪ್ರಕ್ರಿಯೆಯಲ್ಲಿದ್ದೇವೆ" ಎಂದಿದ್ದಾರೆ ಪ್ರಸ್ತುತ ರಾಜಕೀಯ ಸನ್ನಿವೇಶದ ಬಗ್ಗೆ ಕೇಳಿದಾಗ ಮಾಜಿ ಪ್ರಧಾನ ಮಂತ್ರಿ ವಿ.ಪಿ.ಸಿಂಗ್‌ರವರು. ೧೯೯೦ರಲ್ಲಿ ಬಿಜೆಪಿ ಅಧ್ಯಕ್ಷರ ರಕ್ತಸಿಂಚಿತ ಕೋಮುವಾದಿ ರಥವನ್ನು ತಡೆದು ದೇಶವನ್ನು ರಕ್ಷಿಸಲು ತನ್ನ ಸರಕಾರವನ್ನೇ ಬಲಿಗೊಡಲು ಹಿಂಜರಿಯದ ಮಾಜಿ ಪ್ರಧಾನಿಯೊಂದಿಗೆ ಇಂಗ್ಲೀಷ್ ಪಾಕ್ಷಿಕ "ಫ್ರಂಟ್‌ಲೈನ್" ನಡೆಸಿದ ಸಂದರ್ಶನದ ಕೆಲವು ಭಾಗಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.

ಈಗಿನ ಸನ್ನಿವೇಶ ಮತ್ತು ಭವಿಷ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು?

◗ ಅಸ್ಥಿರವಾಗಿದೆ, ಬಹಳ ಅಸ್ಥಿರವಾಗಿದೆ. ಮುಖ್ಯಪ್ರಶ್ನೆ: ಯಾರಿಗೆ ಈಗ ಚುನಾವಣೆ ಬೇಕಾಗಿದೆ? ಇದಕ್ಕಿಂತ ಹೆಚ್ಚು ಹೇಳಬಯಸುವುದಿಲ್ಲ. ಆದರೆ ಇದು ಹಿಂದಿನ ಪ್ರಯೋಗಗಳಿಗಿಂತ ಒಂದು ಹೆಚ್ಚು ಪ್ರೌಢವಾದ ಅನುಭವ. ಹಿಂದಿನ ಪ್ರಯೋಗಗಳತ್ತ ಹಿಂತಿರುಗಿ ನೋಡಿ. 1979ರಲ್ಲಿ ಮೊದಲ ಸಮ್ಮಿಶ್ರ ಸರಕಾರ ಅಂಗಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿಂದಾಗಿ ಬಿದ್ದು ಹೋಯಿತು. 1990ರಲ್ಲಿ ಬಿಜೆಪಿಯಿಂದಾಗಿ, ಅದು ಬೆಂಬಲವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದ್ದರಿಂದ ಸರಕಾರ ಬಿದ್ದು ಹೋಯಿತು. ಜನತಾದಳ ಮೊದಲು ಒಡೆದಿರಲಿಲ್ಲ. ಪತನದ ನಂತರ ಒಡೆಯಿತು. ಈಗ ಮತ್ತೆ 1997ರಲ್ಲಿ ಸಂಯುಕ್ತ ರಂಗ ಸರಕಾರ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡದ್ದರಿಂದ ಬಿತ್ತು. ಎರಡು ರಾಷ್ಟ್ರೀಯ ಪಕ್ಷಗಳು ಸಂಸತ್ತಿನಲ್ಲಿ ಸಂಯುಕ್ತ ರಂಗದ ಸೋಲಿಗೆ ನೆರವಾದವು. ಸಂಯುಕ್ತರಂಗ ಸರಕಾರ ಆಂತರಿಕ ಕಿತ್ತಾಟದಿಂದ ಬೀಳಲಿಲ್ಲ. ಆದ್ದರಿಂದ ಸಮ್ಮಿಶ್ರ ಸರಕಾರದ ಭಾಗೀದಾರರನ್ನು ದೂಷಿಸುವುದು ಸರಿಯಲ್ಲ. ಏನೇ ಆಗಲಿ, ಕೇವಲ ತಾತ್ಕಾಲಿಕ ಅಗತ್ಯಕ್ಕಾಗಿ ರಚಿಸಿದ ರಂಗಗಳಿಗೂ, ಅದಕ್ಕಿಂತ ಹೆಚ್ಚಿನ ಕಾರಣಕ್ಕಾಗಿ ಅಂದರೆ ಪ್ರಶ್ನೆಗಳು ಮತ್ತು ಧೋರಣೆಗಳ ಮೇಲೆ ಒಟ್ಟು ಸೇರಿ ಉಂಟಾಗುವ ರಂಗಗಳಿಗೂ ಇರುವ ವ್ಯತ್ಯಾಸವನ್ನು ಯಾರಾದರೂ ಕಾಣಬಹುದು.

ಇತರ ಪಕ್ಷಗಳು ಸರಕಾರ ರಚಿಸುವ ಬಗ್ಗೆ ಮಾತುಗಳಿವೆ. ನೀವೇನನ್ನುತ್ತೀರಿ?

◗ ಇತರರಿಗೆ, ಬಿಜೆಪಿಯಂತವರಿಗೆ ಅಷ್ಟು ಸಂಖ್ಯೆ ಎಲ್ಲಿದೆ? ಇನ್ನು ರಾಷ್ಟ್ರೀಯ ಸರಕಾರದ ಬಗ್ಗೆ ಹೇಳುವುದಾದರೆ ಒಂದು ಸಮಾನ ಹಿತಾಸಕ್ತಿಯಿಲ್ಲದೆ ಇಂತಹ ಸರಕಾರದ ರಚನೆಯಾದರೂ ಹೇಗೆ ಸಾಧ್ಯ?

ಮಧ್ಯಂತರ ಚುನಾವಣೆ ನಡೆದರೆ ಏನಾಗುತ್ತದೆ?

◗ ಮಧ್ಯಂತರ ಚುನಾವಣೆ ಬಯಸುವವರು ಯಾರಾದರೂ ಇದ್ದಾರೆಯೇ? ಮಧ್ಯಂತರ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋತು ಸುಣ್ಣವಾಗುವ ಅಪಾಯ ಬರಬಹುದು. ನಾವು ನಮ್ಮ ಪ್ರಭಾವದ ಪ್ರದೇಶಗಳನ್ನು ಉಳಿಸಿಕೊಳ್ಳುತ್ತೇವೆ. ಬಿಜೆಪಿ ಉತ್ತರ ಭಾರತದ ಕೆಲವು ಹಿಂದಿ ಭಾಷಿಕ ಪ್ರದೇಶಗಳಲ್ಲಿ ಪಶ್ಚಿಮ ಭಾರತದ ಕೆಲವು ಭಾಗಗಳಲ್ಲಿ ಸ್ವಲ್ಪ ಮಟ್ಟಿಗೆ ಪಡೆಯಬಹುದು. ಆದರೂ ಬಿಜೆಪಿಗೆ ಅಗತ್ಯ ಸಂಖ್ಯೆ ಪಡೆಯಲು ಸಾಧ್ಯವೇ?

ಪ್ರಾದೇಶಿಕ ಪಕ್ಷಗಳ ಬೆಳವಣಿಗೆಯನ್ನು ನೀವು ಹೇಗೆ ಕಾಣುತ್ತೀರಿ?

◗ ಅದೊಂದು ಬಹಳ ಸಕಾರಾತ್ಮಕವಾದ ಬೆಳವಣಿಗೆ. ಅದೀಗ ವಾಸ್ತವ ಸಂಗತಿ. ಒಟ್ಟಾರೆಯಾಗಿ ದೇಶದ ಹಿತ ಅದರಲ್ಲಿದೆ. ಅವರಲ್ಲಿ ಒಂದು ಸಾಧನೆಯ ಭಾವನೆಯಿದೆ. ದಿಲ್ಲಿ ಬಹಳ ದೂರವಿಲ್ಲ ಎಂಬ ಭಾವನೆಯದು. ಅವರು ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುತ್ತಿದ್ದಾರೆ. ಅವರ ದನಿಗ ಕಿವಿಗೊಡಲಾಗುತ್ತಿದೆ.

ನೀವು ಇದು ಸಮ್ಮಿಶ್ರ ಸರಕಾರಗಳ ಯುಗ ಎಂದಿದ್ದೀರಿ?

◗ ಹೌದು. ಅದು ಹಾಗೆಯೇ ಉಳಿಯುತ್ತದೆ. ರಾಷ್ಟ್ರೀಯ ದೃಶ್ಯವನ್ನು ನೋಡಿ. ನಾನು ರಾಷ್ಟ್ರೀಯ ರಂಗದ ಮಾತನಾಡಿದಾಗ ಹಲವರು ನಗೆಯಾಡಿದರು. ಈಗ ಬಿಜೆಪಿ ಕೂಡಾ ಹರ್ಯಾಣ ವಿಕಾಸ್ ಪಾರ್ಟಿಯಲ್ಲಿ ತನ್ನ ಭಾಗೀದಾರನನ್ನು ಕಾಣಬೇಕಾಯಿತು. ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಯೊಂದಿಗೆ ಕೈಜೋಡಿಸಬೇಕಾಯಿತು. ಕಾಂಗ್ರೆಸ್‌ನಂತಹ ಪಕ್ಷಗಳಿಗೂ ಇದೊಂದು ರಾಜಕೀಯ ವಾಸ್ತವತೆ. ಎಡಪಕ್ಷಗಳ ವಿಭಿನ್ನ ಅನುಭವಗಳ ಮೂರ್ತ ಪ್ರಯೋಗವನ್ನು ನೋಡಬೇಕು, ಪರಿಶೀಲಿಸಬೇಕು. ಅದೊಂದು ಕಲಿಯುವ, ಪ್ರೌಢತೆ ಗಳಿಸುವ ಪ್ರಕ್ರಿಯೆ.

ಕಾಂಗ್ರೆಸ್ ಒಡೆಯುತ್ತಿದೆಯೇ?

◗ ಅದು ಒಡೆಯಬೇಕು ಎಂದು ನಾನು ಬಯಸುವುದಿಲ್ಲ. ಆದರೆ ಇದ್ದಕ್ಕಿದ್ದಂತೆ ಬೆಂಬಲ ಹಿಂತೆಗೆದುಕೊಂಡದ್ದರಿಂದ ಅಂತಹ ಒತ್ತಡ ಇದೆ. ಮತ್ತು ಚುನಾವಣೆ ತಪ್ಪಿಸುವ ಬಯಕೆಯೂ ಸಾರ್ವತ್ರಿಕವಾಗಿದೆ. ಇದಕ್ಕಿಂತ ಹೆಚ್ಚೇನೂ ನಾನು ಹೇಳಬಯಸುವುದಿಲ್ಲ.

ಸಂಯುಕ್ತ ರಂಗದಲ್ಲಿ ಒಡಕುಗಳಿವೆಯೇ?

◗ ಇದು ರಂಗಕ್ಕೆ ಒಂದು ದೊಡ್ಡ ಪರೀಕ್ಷೆ. ಇದೀಗ ಪ್ರಾದೇಶಿಕ ಪಕ್ಷಗಳ ಬೆಂಬಲ ಪಡೆದಿರುವ ಹೆಚ್ಚು ಪ್ರೌಢವಾದ ರಂಗ.

ಎಡರಂಗ ಪ್ರಯೋಗಗಳಿಗೆ ಬಗ್ಗೆ ನೀವು ಹೇಳಿದಿರಿ.

◗ ಅವುಗಳಿಂದ ಕಲಿಯಬೇಕಾದದ್ದಿದೆ. ವಿಶೇಷವಾಗಿ ಪಶ್ಚಿಮ ಬಂಗಾಳದ ಪ್ರಯೋಗದಿಂದ. ಸಂಯುಕ್ತ ರಂಗ ಇದುವರೆಗಿನ ಎಲ್ಲಾ ರಂಗಗಳ ಪ್ರಯೋಗಗಳಿಗಿಂತ ಕಲಿತು ಹೆಚ್ಚು ಸಮರ್ಥವಾಗಿ, ಹೆಚ್ಚು ಸಹಕಾರವಿರುವ ಹಾಗೂ ಹೆಚ್ಚು ಧೋರಣೆ-ಆಧಾರಿತವಾದ ರಂಗವಾಗಬೇಕು.

ಸಂಯುಕ್ತ ರಂಗಕ್ಕೆ ನಿಮ್ಮ ಸಂದೇಶ?

ಅದು ಒಗ್ಗಟ್ಟಾಗಿರಬೇಕು-ಇದು ಬಹಳ ಮಹತ್ವದ ಸಂಗತಿ. ಒಂದು ಇನ್ನೂ ಬಲಿಷ್ಟವಾದ ರಂಗದ ಮುನ್ನೋಟ ನನ್ನದು. ದೇಶ ಕಲಿಯುವ ಪ್ರಕ್ರಿಯೆಯಲ್ಲಿದೆ, ನಾವೆಲ್ಲಾ ಕಲಿಯುವ ಪ್ರಕ್ರಿಯೆಯಲ್ಲಿದ್ದೇವೆ.

..ಸಾರ್ವಜನಿಕ ಹಣದ ಲೂಟಿ

ಪುಟ 1ರಿಂದ

ಬದಿಗಿಟ್ಟು, ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಒಟ್ಟು ಗೂಡಿಸಿ, ಭದ್ರವಾದ ಎಡ ಜಾತ್ಯಾತೀತ ಪರ್ಯಾಯ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಿ, ಅದನ್ನು ಬಲಪಡಿಸುವ ಪ್ರಯತ್ನದಲ್ಲಿರುವಾಗ ಕರ್ನಾಟಕದಲ್ಲಿಯೂ ಆ ಕ್ರಮ ಬಲಗೊಳ್ಳುವಂತೆ ಮಾಡದೆ, ಜೆ.ಹೆಚ್.ಪಟೇಲರು ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಕ್ರಮ ಕೈಗೊಂಡಿದ್ದಾರೆ. ಈ ಕ್ರಮ ಸರಿಯಲ್ಲೆಂದೇ ಹೇಳಬೇಕಾಗುತ್ತದೆ. ಕಾಂಗ್ರೆಸ್,ಬಿಜೆಪಿ ಅಲ್ಲದೇ ರಾಮಕೃಷ್ಣ ಹೆಗಡೆಯವರು ರಾಜ್ಯದ ಜನತಾದಳ ಸರಕಾರದ ಮೇಲೆ ಆಕ್ರಮಣ ನಡೆಸಿ ಅದನ್ನು ದುರ್ಬಲಗೊಳಿಸುವ ಪ್ರಯತ್ನದಲ್ಲಿರುವಾ ಗ ಜೆ.ಎಚ್.ಪಟೇಲ ಸರಕಾರ ತನ್ನ ಒಳ್ಳೆಯ ಆಡಳಿತೆಯ ಮೂಲಕ ಜನರ ಹಾಗೆಯೇ ಜಾತ್ಯಾತೀತ ಪುರೋಗಾಮಿ ಶಕ್ತಿಗಳ ಬೆಂಬಲ ಪಡೆದು ತನ್ನ ತಳಪಾಯವನ್ನು, ಪ್ರಭಾವವನ್ನು ಹೆಚ್ಚಿಸಿಕೊಳ್ಳದೆ, ರಾಜ್ಯದ ಜನರ ಅಭಿವೃದ್ಧಿ ಕಾರ್ಯಗಳಿಗೆ ಅತ್ಯಾವಶ್ಯ ಅವಶ್ಯಕತೆಗಳ ಪೂರೈಕೆಗೆ ಹಣ ಖರ್ಚು ಮಾಡುವುದಕ್ಕೆ ಹೊರೆಯಾಗಿ ಬಿಡುವಂತ ಈ ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಹವ್ಯಾಸಿ, ಅಸಮರ್ಥನೀಯ ಪಟೇಲರ ಸರಕಾರದ ವಿರುದ್ಧ ಭಿನ್ನಮತೀಯ ಚಟುವಟಿಕೆ ನಡೆಸಿದ್ದ ಶಾಸಕರುಗಳನ್ನು ಮತ್ತೆ ಕಡೆಗಣಿಸಲಾಗಿದೆ. ಮಾತ್ರವಲ್ಲ ದೇವೇಗೌಡರ ಪರವಿದ್ದವರಿಗೆ ಇಲ್ಲಿ ಪ್ರಾಧಾನ್ಯತೆ ಕೊಡಲಾಗಿದೆಯೆಂಬ ಆರೋಪವಿದೆ. ಅಲ್ಲದೆ, ಚಾರಿತ್ರ ಹೀನರಿಗೆ ಅಧಿಕಾರ ಸ್ಥಾನ ಕೊಡಲಾಗಿದೆಯೆಂಬ ಆರೋಪವೂ ಇದೆ. ಗೃಹ ನಿರ್ಮಾಣ ಮಂಡಳಿಗೆ ಶಿವರಾಮೇ ಗೌಡರನ್ನು ನೇಮಕ ಮಾಡಿರುವುದನ್ನು ಯಾರೂ ಸಮರ್ಥಿಸಲಾರರು. ಇವರ ಮೇಲೆ ಕೊಲೆ ಸಂಬಂಧಪಟ್ಟಂತೆ ಹಲವಾರು ಕ್ರಿಮಿನಲ್ ಕೇಸುಗಳಿದ್ದು, ಗೃಹಮಂತ್ರಿಯಂಥ ಜವಾಬ್ದಾರಿಯುತ ಮಂತ್ರಿಗೆ ಅಂಥವರನ್ನು ನೇಮಿಸಿರುವುದು ಖಂಡನೀಯವೇ ಸರಿ. ಒಂದೆಡೆ ಮಂತ್ರಿಗಳ ವಿದೇಶ ಪ್ರವಾಸದ ಹೊರೆ ಮತ್ತೊಂದು ಕಡೆ ಈ ಅಧ್ಯಕ್ಷರುಗಳ ಭಾರ ಬಡವರನ್ನು ಯಾವ ನರಕಕ್ಕೆ ತಳ್ಳುತ್ತದೆ. ಈ ಕ್ರಮವನ್ನು ಸಹಿಸಲು ಸಾಧ್ಯವೇ?

ಲಪಟಾವಣೆಗೆ ಇನ್ನೊಂದು ಉದಾಹರಣೆ

ವಿಜಯ ಬ್ಯಾಂಕ್ ಹಗರಣ

ನಮ್ಮ ದೇಶದಲ್ಲಿ ಅತೀ ಶ್ರೀಮಂತರು ಇನ್ನಷ್ಟು ಶ್ರೀಮಂತರಾದುದು ಹೇಗೆ ಎಂದು ಅವಲೋಕಿಸಿದರೆ ಕನಿಷ್ಟ ನಾಲ್ಕು ಕಾರಣಗಳನ್ನು ನೀಡಬಹುದು.

1. ಆಳುವ ವರ್ಗಗಳು ಅನುಸರಿಸಿದ ಆರ್ಥಿಕ ನೀತಿಗಳಿಂದಾಗಿ

2. ಕೈಗಾರಿಕೋದ್ಯಮಿಗಳು, ಎಸ್ಟೇಟುಗಳ ಮಾಲಿಕರು ಮತ್ತು ದೊಡ್ಡ ಜಮೀನ್ದಾರರು ತಮ್ಮ ಕೈ ಕೆಳಗೆ ಕೆಲಸ ಮಾಡುತ್ತಿರುವವರಿಗೆ ಸರಿಯಾದ ವೇತನ ಮತ್ತು ಕೂಲಿಯನ್ನು ನೀಡದೆ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವುದರಿಂದ.

3. ಸರಕಾರಕ್ಕೆ ಸಲ್ಲಬೇಕಾದ ತೆರಿಗೆಗಳನ್ನು ನೀಡದಿರುವುದರಿಂದ.

4. ಕೆಲವೊಂದು ಭ್ರಷ್ಟ ರಾಜಕೀಯ ವ್ಯಕ್ತಿಗಳು, ಶ್ರೀಮಂತ ಕೈಗಾರಿಕೋದ್ಯಮಿಗಳು ಮತ್ತು ಸರಕಾರಿ ಕ್ಷೇತ್ರದ ಉನ್ನತ ಅಧಿಕಾರಿಗಳು ಸೇರಿ ನಡೆಸಿದ ಹಲವಾರು ಹಗರಣಗಳಿಂದ.

ಶೇರು ಹಗರಣ, ಲಂಚ ಪ್ರಕರಣ, ಟೆಲಿಕಾಂ ಹಗರಣ, ಸಕ್ಕರೆ ಹಗರಣ, ಹವಾಲಾ ಹಗರಣ-ಹೀಗೆ ಹತ್ತಾರು ಹಗರಣಗಳಲ್ಲಿ 10,200 ಕೋಟಿ ರೂ. ಸೇರಿದೆ ಎಂದು ಲೋಕಸಭೆಯಲ್ಲಿ ಸಿಬ್ಬಂದಿ ಖಾತೆ ಸಹಾಯಕ ಸಚಿವ ಬಾಲಸುಬ್ರಮಣ್ಯಂ ಲಿಖಿತ ಉತ್ತರದಲ್ಲಿ ತಿಳಿಸಿರುತ್ತಾರೆ. ಅಂದರೆ 1997-98 ರ ಬಜೆಟ್ಟಿನಲ್ಲಿ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಮೀಸಲಾಗಿಟ್ಟ ಹಣಕ್ಕಿಂತಲೂ ಹೆಚ್ಚು ಹಣ ಹಗರಣಗಳಲ್ಲಿ ಸೇರಿಕೊಂಡಿದೆ ಅನ್ನುವುದನ್ನು ಗಮನಿಸಿದರೆ ಈ ದೇಶದ ಕೆಲವೇ ಕೆಲವು ಶ್ರೀಮಂತರು ದೇಶದ ಸಂಪತ್ತನ್ನು ಹೇಗೆ ಕೊಳ್ಳೆ ಹೊಡೆಯುತ್ತಿದ್ದಾರೆ ಎಂದು ಸ್ಪಷ್ಟವಾಗುತ್ತದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರಧಾನ ಕಛೇರಿ ಹೊಂದಿರುವ ವಿಜಯ ಬ್ಯಾಂಕಿನಲ್ಲಿ 117 ಕೋಟಿ ರೂ. ಹಗರಣ ಬೆಳಕಿಗೆ ಬಂದಿದೆ.

ಈ ಎಲ್ಲಾ ಹಗರಣಗಳಲ್ಲಿ ಕಾಂಗ್ರೆಸ್ ಪಕ್ಷದ ಹಲವಾರು ಮತ್ತು ಬಿಜೆಪಿಯ ಕೆಲವು ಪ್ರಮುಖ ಮುಖಂಡರ ಹೆಸರುಗಳು ಬೆಳಕಿಗೆ ಬಂದಿವೆ. ಜನತಾದಳಕ್ಕೆ ಸೇರಿದ ಕೆಲವು ವ್ಯಕ್ತಿಗಳೂ ಇದರಿಂದ ಹೊರತಾಗಿಲ್ಲ.

ಜನ ಸಾಮಾನ್ಯರಿಗಾಗಿ ದುಡಿಯುವ ಕಮ್ಯುನಿಸ್ಟ್ ಪಕ್ಷಗಳ ನೇತಾರರು ಮಾತ್ರ ಈ ಎಲ್ಲ ಹಗರಣಗಳಿಂದ ದೂರ ಉಳಿದಿದ್ದಾರೆ.

ವಿಜಯ ಬ್ಯಾಂಕಿನ ಹಗರಣ ನಡೆದದ್ದು 1987 ರಲ್ಲಿ. ಯಾವುದೇ ಅಪ್ಲಿಕೇಶನ್ ಇಲ್ಲದೆ, ಪಿ.ಜೆ.ಪೈಪ್ಸ್ ಅಂಡ್ ವೆಸಲ್ಸ್ ಪ್ರೈ.ಲಿ. ಅನ್ನುವ ಖಾಸಗೀ ಕಂಪೆನಿಯೊಂದಕ್ಕೆ ರೂ. 80ಕೋಟಿ ಹಣವನ್ನು ಬ್ಯಾಂಕಿನ ಅಂದಿನ ಅಧ್ಯಕ್ಷ ಸದಾನಂದ ಶೆಟ್ಟಿಯವರು ನೀಡಿದ್ದು ಮಾತ್ರವಲ್ಲದೆ, ಅದಕ್ಕೆ ಸಾಕಷ್ಟು ಗ್ಯಾರಂಟಿಯನ್ನು ಪಡೆದಿಲ್ಲ ಅನ್ನುವುದು ಸೋಜಿಗದ ಸಂಗತಿ. ಈ ಹಣದ ಒಟ್ಟು ಮೊತ್ತ ಇದೀಗ 117 ಕೋಟಿ ರೂ. ದಾಟಿದೆ.

ಈ ಅವ್ಯವಹಾರದ ಬಗ್ಗೆ ಬ್ಯಾಂಕ್ ನೌಕರರಿಗೆ ಮೊದಲೇ ತಿಳಿದಿತ್ತು ಎಂದು ನಂಬಲಾಗಿದೆ. ಅದನ್ನು ಬೆಳಕಿಗೆ ತಂದಲ್ಲಿ ಬ್ಯಾಂಕಿಂಗ್ ರೆಗ್ಯೂಲೇಷನ್ ಆಕ್ಟ್‌ನ ಅಡಿಯಲ್ಲಿ ಶಿಸ್ತು ಕ್ರಮ ಎದುರಿಸ ಬೇಕಾಗುತ್ತದೆ. ಉನ್ನತ ಅಧಿಕಾರಿಗಳು ಭ್ರಷ್ಟಚಾರದಲ್ಲಿ ಮುಳುಗಿದ್ದರೂ, ಈಗಿರುವ ಶ್ರೀಮಂತರ ಪರ ಕಾನೂನುಗಳಿಂದಾಗಿ ನೌಕರರು ಕೈ ಕಟ್ಟಿ ಕುಳಿತು ಕೊಳ್ಳುವಂತಾಗಿದೆ. ಅದರ ವಿರುದ್ಧ ಯಾವುದೇ ಚಕಾರ ಎತ್ತುವಂತಿಲ್ಲ.

ಆದರೂ ಇತ್ತೀಚಿಗೆ ಬಿಇಎಫ್ಐ ಮೊದಲಾದ ಬ್ಯಾಂಕ್ ನೌಕರರ ಸಂಘಟನೆಗಳು, ಕೊಟ್ಟ ಸಾಲವೆಂದು ಪರಿಗಣಿಸಲ್ಪಟ್ಟ ರೂ. 1. ಕೋಟಿಗಿಂತಲೂ ಜಾಸ್ತಿ ಬಾಕಿ ಉಳಿದಿರುವ ಸಂಸ್ಥೆಗಳ ಹೆಸರುಗಳನ್ನು ಬಹಿರಂಗ ಗೊಳಿಸಬೇಕೆಂದು ಒತ್ತಾಯಿಸಿವೆ. ಆದರೆ ಇದುವರೆಗೂ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರಕಾರವಾಗಲೀ, ರಿಸರ್ವ್ ಬ್ಯಾಂಕ್ ಆಗಲೀ ಯಾವದೇ ಕ್ರಮ ಕೈಗೊಂಡಿಲ್ಲ.

ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರಕಾರವು ಸಿಪಿಐ(ಎಂ) ಮತ್ತಿತರ ಪಕ್ಷಗಳ ಒತ್ತಾಯದ ಮೇರೆಗೆ ಸಿಬಿಐಗೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡಿದುದರ ಫಲವಾಗಿ ವಿಜಯ ಬ್ಯಾಂಕ್ ಹಗರಣ ಬೆಳಕಿಗೆ ಬಂದಿದೆ.

ವಿಜಯ ಬ್ಯಾಂಕ್ ಹಗರಣ-ದೊಡ್ಡ ಸಮುದ್ರದಲ್ಲಿನ ಬೊಗಸೆ ನೀರಿನಷ್ಟು ಮಾತ್ರ. ಬ್ಯಾಂಕಿಂಗ್ ಉದ್ದಿಮೆಯಲ್ಲಿ ಕೊಟ್ಟ "ಕೆಟ್ಟ ಸಾಲ" ಎಂದು ಪರಿಗಣಿಸಲ್ಪಟ್ಟ ಮೊತ್ತ 45.000 ಕೋಟಿ ರೂ. ಗಳಿಗೂ ಹೆಚ್ಚು. ಈ ಸಾಲದ ಶೇಕಡಾ 25 ರಷ್ಟನ್ನು ಶ್ರೀಮಂತರಿಗೆ ನೀಡಿದ್ದು, ಬಡ ಬಗ್ಗರಿಗೆ ನೀಡಿದ ಸಾಲಗಳ ಪೈಕಿ ವಾಪಸು ಬರದಿರುವುದು ಶೇ 5 ರಷ್ಟು ಮಾತ್ರ.

ಇದೇ ವಿಜಯಾ ಬ್ಯಾಂಕ್ ಕುರಿತು 2 ವರ್ಷಗಳ ಹಿಂದೆಯಷ್ಟೇ ಇನ್ನೊಂದು ಹಗರಣ ಬೆಳಕಿಗೆ ಬಂದಿತ್ತು. ಅಂದು ಕೇಂದ್ರದಲ್ಲಿ ಕಾಂಗ್ರೆಸ್(ಐ) ಹಣಕಾಸು ರಾಜ್ಯ ಸಚಿವರಾಗಿದ್ದ ಚಂದ್ರಶೇಖರ್ ಮೂರ್ತಿಯವರು ತಮ್ಮ ಪತ್ನಿಯ ಹೆಸರಿನಲ್ಲಿ ಪಡೆದಿದ್ದ ಸಾಲ 16 ಲಕ್ಷ ರೂ. ಗಳಷ್ಟಿದ್ದರೂ ಕೇವಲ 8 ಲಕ್ಷ ರೂ. ಮಾತ್ರ ಬ್ಯಾಂಕಿಗೆ ವಾಪಸು ಮಾಡಿ ಬಾಕಿ 8 ಲಕ್ಷ ರೂ. ಮನ್ನಾ ಮಾಡಿದ ವರದಿ ಮರೆ ಮಾಚುವಷ್ಟರಲ್ಲಿ ಇನ್ನೊಂದು ದೊಡ್ಡ ಹಗರಣ ಬೆಳಕಿಗೆ ಬಂದಿದೆ.

ಈ ಹಗರಣದಲ್ಲಿ ಕಾಂಗ್ರೆಸ್ ಮುಖಂಡರ ಕೈವಾಡವಿಲ್ಲದಿಲ್ಲ. ಆಳುವ ಸರಕಾರದ ಕೃಪಾಕಟಾಕ್ಷದಲ್ಲಿ ಇಷ್ಟು ದೊಡ್ಡ ಮೊತ್ತದ ಸಾಲವನ್ನು ನೀಡಲು ಉನ್ನತ ಬ್ಯಾಂಕ್ ಅಧಿಕಾರಿಗಳಿಗೆ ಧೈರ್ಯ ಬರುವುದಿಲ್ಲ. ಆದ್ದರಿಂದಲೇ ಸದಾನಂದ ಶೆಟ್ಟಿಯವರ ಬಗ್ಗೆ ಲೋಕಸಭೆಯಲ್ಲಿ ಸದಸ್ಯರೊಬ್ಬರು ಪ್ರಶ್ನೆ ಕೇಳಿದಾಗ ಅಂದು ಹಣಕಾಸು ಸಚಿವರಾಗಿದ್ದು ಇಂದು ರಾಜ್ಯ ಸಭಾ ಸದಸ್ಯರಾಗಿರುವ ಕಾಂಗ್ರೆಸ್ ಪಕ್ಷದ ಜನಾರ್ಧನ ಪೂಜಾರಿಯವರು ಕಸಿವಿಸಿಗೊಂಡರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಕುಂಬಳ ಕಾಯಿ ಕದ್ದವರಾರೆಂದು ಕೇಳಿದಾಗ ಕಳ್ಳನೋರ್ವ ತನ್ನ ಭುಜವನ್ನು ನೋಡಿದಂತೆ!

ಬ್ಯಾಂಕುಗಳ ರಾಷ್ಟ್ರೀಕರಣಕ್ಕಾಗಿ ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳು ತೀವ್ರ ಹೋರಾಟ ನಡೆಸಿದವು. ಬ್ಯಾಂಕ್ ನೌಕರರ ಸಂಘಟನೆಗಳೂ ಮುಷ್ಕರ ಇತ್ಯಾದಿ ನಡೆಸಿ ಒತ್ತಡ ತಂದುದರ ಫಲವಾಗಿ ಬ್ಯಾಂಕುಗಳ ರಾಷ್ಟ್ರೀಕರಣವಾಯ್ತು. ರಾಷ್ಟ್ರೀಕರಣಾದ ನಂತರ ಗ್ರಾಮೀಣ ಪ್ರದೇಶದಲ್ಲಿ ಶಾಖೆಗಳನ್ನು ತೆರೆದು ಮಧ್ಯಮ ವರ್ಗದ ರೈತರಿಗೆ ಅಲ್ಪ ಸ್ವಲ್ಪ ಅನುಕೂಲ ಸಿಕ್ಕಿದ್ದರೂ ರಾಷ್ಟ್ರೀಕರಣದ ಪೂರ್ಣ ಲಾಭ ಜನ ಸಾಮಾನ್ಯರಿಗೆ ದೊರೆತಿಲ್ಲ. ಬದಲಾಗಿ ಬೆರಳೆಣಿಕೆಯಷ್ಟು ಕೈಗಾರಿಕೋದ್ಯಮಿಗಳು ಬಹುಪಾಲು ಬ್ಯಾಂಕು ಸಾಲವನ್ನು ತಮ್ಮದಾಗಿಸಿಕೊಂಡಿದ್ದಾರೆ.

ರಾಷ್ಟ್ರೀಕೃತ ವಿಜಯ ಬ್ಯಾಂಕ್ ಇತ್ತೀಚೆಗೆ ಮಂಡಿಸಿದ ಅಂಕಿ - ಅಂಶದ ಪ್ರಕಾರ ತಾನು ನೀಡಿದ 3273.31 ಕೋಟಿ ರೂ. ಸಾಲಗಳಲ್ಲಿ ರೂ. 1480.69 ಕೋಟಿಯನ್ನು(ಶೇ 45 ಕ್ಕಿಂತಲೂ ಜಾಸ್ತಿ) ಕೇವಲ 376 ಕಂಪನಿಗಳಿಗೆ ನೀಡಿದೆ. ಇದರಲ್ಲಿ 397.67 ಕೋಟಿ ರೂಗಳನ್ನು ಕೇವಲ 13 ಕಂಪನಿಗಳಿಗೆ ನೀಡಿದ್ದು ಕೆಲವು ಕಂಪನಿಗಳು ಒಂದೇ ವಾಣಿಜ್ಯ ಮನೆತನಕ್ಕೆ ಸೇರಿದವುಗಳಾಗಿವೆ. ಅದೇ ಸಂದರ್ಭದಲ್ಲಿ 4,96,311 ಜನರಿಗೆ ರೂ. 25,000 ಮತ್ತು ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀಡಿದ ಒಟ್ಟು ಸಾಲ ರೂ. 433.51 ಕೋಟಿ ರೂ. ಮಾತ್ರ. ಅಂದರೆ ಸರಾಸರಿ ಒಬ್ಬ ವ್ಯಕ್ತಿಗೆ ರೂ. 8650 ಮಾತ್ರ ಸಾಲ ನೀಡಲಾಗಿದೆ.

ಅಂದರೆ ಒಟ್ಟು ಸಾಲಗಾರರಲ್ಲಿ ಶೇ 86.6 ಜನರಿಗೆ ಶೇ13.2 ರಷ್ಟು ಸಾಲ ಸಿಕ್ಕಿದರೆ ಶೇ 0.1 ಜನರಿಗೆ ಶೇಕಡಾ45. 2 ರಷ್ಟು ಸಾಲ ಸಿಕ್ಕಿದೆ. ಹಾಗಿದ್ದರೆ ರಾಷ್ಟ್ರೀಕರಣವಾದ ನಂತರವೂ ಸರಕಾರಿ ಬ್ಯಾಂಕುಗಳ ಸಾಲ ನೀಡಿಕೆ ಯಾವ ಕಡೆ ಸಾಗುತ್ತಿದೆ ಎನ್ನುವುದು ಸ್ಪಷ್ಟ.

ರಾಷ್ಟ್ರೀಕೃತ ಬ್ಯಾಂಕುಗಳ ನೀತಿಯಲ್ಲಿ ಆಮೂಲಾಗ್ರ ಬದಲಾವಣೆಗಾಗಿ ಪ್ರಚಾರ ಮತ್ತು ಹೋರಾಟ ನಡೆಸುವುದು ಅಗತ್ಯವಿದೆ. ಅದೇ ಸಂದರ್ಭದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳನ್ನು ರಕ್ಷಿಸಿ ಇನ್ನಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ದು ಜನ ಸಾಮಾನ್ಯರ ಒಲುಮೆಗೆ ಒಳಗಾಗಬೇಕಾಗಿದೆ. ಈ ನಿಟ್ಟಿನಲ್ಲಿ ಸರಕಾರದ ಧೋರಣೆಯಲ್ಲಿ ಆಮೂಲಾಗ್ರ ಬದಲಾವಣೆಗಾಗಿ ಒತ್ತಡ ತರುವುದು ಅತೀ ಅವಶ್ಯ.

– ಬಾಲಕೃಷ್ಣ

ಬೀಡಿಕಾರ್ಮಿಕರ ಕನಿಷ್ಟ ಕೂಲಿ : ಉಚ್ಚ ನ್ಯಾಯಾಲಯದಿಂದ ಹೊಸ ಆದೇಶ

ರಾಜ್ಯ ಸರಕಾರ ನವೆಂಬರ್ 96 ರಿಂದ ಬೀಡಿ ಕಾರ್ಮಿಕರ ಕನಿಷ್ಠ ಕೂಲಿ 36.85 ಪೈಸೆ ಮೂಲವೇತನ ನಿಗದಿ ಪಡಿಸಿತ್ತು. 1513 ಸೂಚ್ಯಂಕದ ಮೇಲೆ 3 ಪೈಸೆ ದರದಲ್ಲಿ ತುಟ್ಟಿಭತ್ಯೆಯನ್ನು ಸೇರಿಸಿ ನವೆಂಬರ್ 96 ರಿಂದ ಮಾರ್ಚ್ 97 ರ ವರೆಗೆ ರೂ. 42.46 ಮತ್ತು ಏಪ್ರಿಲ್ 97 ರಿಂದ ರೂ. 46.54 ಪ್ರತಿ ಸಾವಿರ ಬೀಡಿಗೆ ಕೊಡಬೇಕಿತ್ತು. ಮಾಲೀಕರ ಅರ್ಜಿಯ ಮೇರೆಗೆ ಈ ಪ್ರಕಟಣೆಯನ್ನು ತಡೆ ಹಿಡಿಯಲಾಗಿತ್ತು.

ಈ ದಿನ ಉಚ್ಚ ನ್ಯಾಯಾಲಯ ತಡೆಯಾಜ್ಞೆಯನ್ನು ಬದಲಾಯಿಸಿ ಮೂಲ ವೇತನ ರೂ. 36.85 ಮುಂದುವರಿಸಿರುವುದಲ್ಲದೆ ತುಟ್ಟಿಭತ್ಯೆಯ ದರವನ್ನು ತಾತ್ಕಾಲಿಕವಾಗಿ 2.50 ಪೈಸೆ ಮಾಡಿ ಆಜ್ಞೆ ಹೊರಡಿಸಿದೆ. ಕನಿಷ್ಠ ಕೂಲಿಯ ಹೆಚ್ಚಳ ನವೆಂಬರ್ 96 ರಿಂದ ಜಾರಿಗೆ ಬರಬೇಕಾಗಿದ್ದದ್ದು 21 ಜನವರಿ 1997 ರಿಂದ ಜಾರಿಗೊಳಿಸಲಾಗಿದೆ. 21 ಜನವರಿ 97 ರಿಂದ 31 ಮಾರ್ಚ್ 97 ರ ವರೆಗ ಈಗಾಗಲೇ ನೀಡಿದ ವೇತನ ಅಲ್ಲದೆ ರೂ. 5.39 ಹೆಚ್ಚಳ ನೀಡಿ ಪ್ರತಿದಿನ 42.52 ರೂ. ದರದಲ್ಲಿ ನೀಡಬೇಕಾಗಿದೆ. ಏಪ್ರಿಲ್ 1ನೇ ತಾರೀಖಿನಿಂದ ಸಾವಿರ ಬೀಡಿಯ ಕೂಲಿ 44.92 ರೂ. ಕೊಡಬೇಕಿದೆ ಎಂದು ಸಿಐಟಿಯು ತಿಳಿಸಿದೆ.

ಬಸ್ ಸೌಲಭ್ಯಕ್ಕಾಗಿ ಒತ್ತಾಯಿಸಿ ಡಿವೈಎಫ್ಐನಿಂದ ರಸ್ತೆ ತಡೆ

ತಿಪ್ಪಗೊಂಡನಹಳ್ಳಿ: ಬೆಂಗಳೂರು-ಮಾಗಡಿ ರಸ್ತೆಯಲ್ಲಿ ನೂರಾರು ಖಾಸಗಿ ಬಸ್‌ಗಳು ಓಡಾಡುತ್ತವೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸುವ ಜಲಾಶಯ ಹೊಂದಿರುವ ತಿಪ್ಪಗೊಂಡನಹಳ್ಳಿಯಲ್ಲಿ ಬಸ್ ಸೌಕರ್ಯವಿಲ್ಲದೆ ಅಲ್ಲಿಯ ಜನತೆ ತುಂಬಾ ತೊಂದರೆಗೀಡಾಗಿದ್ದರು. ಕಳೆದ ಒಂದು ವರ್ಷದಿಂದ ಜನರ ಪರವಾಗಿ ಸಾರಿಗೆ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಅಧಿಕಾರಿಗಳು ಜನವರಿ 17 ರಂದು ಸರಕಾರದ ಆದೇಶ ಹೊರಡಿಸಿದ್ದರು. ನೂರಾರು ಬಸ್ಸುಗಳನ್ನು ಹೊಂದಿರುವ ಖಾಸಗಿ ಮಾಲೀಕರು ಈ ಆದೇಶವನ್ನು ಉಲ್ಲಂಘಿಸಿದರು. ಮಾಲೀಕರ ನೀತಿಯನ್ನು ಪ್ರತಿಭಟಿಸಿ ಬಸ್ ಸೌಲಭ್ಯ ನೀಡಬೇಕೆಂದು ಒತ್ತಾಯಿಸಿ ಏಪ್ರಿಲ್-5 ರಂದು ಸುಮಾರು 3 ಗಂಟೆಗಳ ಕಾಲ ರಸ್ತೆ ತಡೆ ನಡೆಸಲಾಯಿತು. ಈ ಪ್ರದೇಶದ ಸುತ್ತಲಿರುವ ಹಳ್ಳಿಗಳಿಂದ 500 ಕ್ಕೂ ಹೆಚ್ಚು ಜನರು ಮತ್ತು ಮಹಿಳೆಯರು ಭಾಗವಹಿಸಿದ್ದರು. ಈ ದಿನದಂದು ಈ ಮಾರ್ಗದ ಎಲ್ಲಾ ಬಸ್‌ಗಳು ಓಡಾಡಲಿಲ್ಲ.

ಈ ಸಂದರ್ಭದಲ್ಲಿ ಹಾಜರಿದ್ದ ಡಿವೈಎಫ್ಐ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಗೋಪಾಲ ಕೃಷ್ಣ ಮಾತನಾಡಿ ಜನರಿಗೆ ಬಸ್ ಸೌಕರ್ಯ ಒದಗಿಸದ ಸರಕಾರದ ನೀತಿಯನ್ನು ಖಂಡಿಸಿದರು. ಖಾಸಗಿ ಬಸ್ ಮಾಲೀಕರ ಮೊಂಡುತನದ ವಿರುದ್ಧ ಜನತೆ ಹೋರಾಡಬೇಕೆಂದರು. ಈ ಮಾರ್ಗದ ಎಲ್ಲಾ ಹಳ್ಳಿಗಳಲ್ಲಿ ಬಸ್ ನಿಲುಗಡೆ ಮಾಡಬೇಕು. ಸರಕಾರದ ಆದೇಶವನ್ನು ಉಲ್ಲಂಘಿಸಿದ ಬಸ್ ಮಾಲೀಕರ ಮೇಲೆ ಉಗ್ರ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಆರ್‌ಟಿಓ ಅಧಿಕಾರಿಗಳು ಸ್ಥಳಕ್ಕೆ ಬಂದು ಬಸ್ ನಿಲ್ಲಿಸಲು ಒಪ್ಪಿದ ನಂತರ ರಸ್ತೆ ತಡೆ ಚಳುವಳಿಯನ್ನು ಹಿಂತೆಗೆದುಕೊಳ್ಳಲಾಯಿತು. ಜನಪರ ಕಾರ್ಯಕ್ರಮದಿಂದಾಗಿ ಡಿವೈಎಫ್ಐ ಸಂಘಟನೆ ಈ ಪ್ರದೇಶದಲ್ಲಿ ಜನ ಮೆಚ್ಚುಗೆಯನ್ನು ಗಳಿಸಿದೆ.

ಮಹಾನ್ ತ್ಯಾಗಿಗಳಿಂದ ಮಹಾನ್ ಭೋಗಿಗಳ ಕೈಗೆ ದೇಶ

ಕಂದಾಪುರ: ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್ ಸಿಂಗ್‌ರಂತಹ ಮಹಾನ್ ತ್ಯಾಗಿಗಳ ತ್ಯಾಗದಿಂದಾಗಿ ಸ್ವಾತಂತ್ರ್ಯ ದೊರೆತರೆ, ಇಂದು ಕಲ್ಪನಾಥ ರಾಯ್, ಸುಖರಾಂರಂತಹ ಮಹಾನ್ ಭೋಗಿಗಳಿಂದ ಭಾರತ ಆಳಲ್ಪಡುತ್ತಿರುವುದು ಅತ್ಯಂತ ವಿಪರ್ಯಾಸದ ಸಂಗತಿಯಾಗಿದೆ. ಹೀಗೆಂದು ನುಡಿದವರು ಸಿಐಟಿಯು ಜಿಲ್ಲಾ ಕಾರ್ಯದರ್ಶಿಯವರಾದ ಬಿ.ಮಾಧವ. ಅವರು ಸಾಲಿಗ್ರಾಮ ಘಟಕದಲ್ಲಿ ಏರ್ಪಡಿಸಿದ ಭಗತ್ ಸಿಂಗ್ ಹುತಾತ್ಮ ದಿನಾಚರಣೆಯಂದು ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಅತ್ಯಂತ ಕಿರಿಯ ವಯಸ್ಸಿನಲ್ಲೇ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತದ ದುಡಿಯುವ ಜನರ ಕೈಗೆ ಹಾಗೂ ಜನ ಸಾಮಾನ್ಯರ ಕೈಗೆ ಸ್ವಾತಂತ್ರ್ಯ ಸಿಗಬೇಕು ಎಂಬ ಆಸೆಯನ್ನಿಟ್ಟುಕೊಂಡು ತಮ್ಮ ಅಮೂಲ್ಯ ಪ್ರಾಣ ತ್ಯಾಗ ಮಾಡಿದ ಭಗತ್ ಸಿಂಗರ ಆದರ್ಶಗಳನ್ನು ಇಂದಿನ ಯುವಜನರು ಮೈಗೂಡಿಸಿಕೊಳ್ಳಬೇಕು ಎಂಬುದಾಗಿ ಅವರು ನುಡಿದರು.

ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಪನ್ಯಾಸಕರಾದ ಶ್ರೀಯುತ ಸೋಮಯಾಜಿ ಅವರು ಭಗತ್ ಸಿಂಗ್ ಜೀವನ ಚರಿತ್ರೆಯನ್ನು ವಿವರವಾಗಿ ತಿಳಿಸಿ ಹೇಳುತ್ತಾ, ಸ್ವಾತಂತ್ರ್ಯ ಹೋರಾಟಗಾರರಲ್ಲಿ ವಿಭಿನ್ನವಾದ ಸ್ವಾತಂತ್ರ್ಯ ಹೋರಾಟಗಾರ ಎಂಬುದಾಗಿ ವರ್ಣಿಸಿದರು.

ಕುಂದಾಪುರ ತಾಲ್ಲೂಕು ಸಮಿತಿ ಅಧ್ಯಕ್ಷರಾದ ಹಾಗೂ ಕುಂದಾಪುರ ಪುರಸಭಾ ಸದಸ್ಯರಾದ ಎಚ್.ನರಸಿಂಹ ಹಾಜರಿದ್ದು, ಡಿವೈಎಫ್ಐ ಬೇಡಿಕೆಗಳ ಬಗ್ಗೆ ವಿವರವಾಗಿ ತಿಳಿ ಹೇಳಿದರು.

ತಾಲ್ಲೂಕು ಸಮಿತಿ ಕಾರ್ಯದರ್ಶಿ ಚಂದ್ರಶೇಖರ್.ವಿ ಯವರು ಧ್ವಜಾರೋಹಣ ನೆರವೇರಿಸಿದರು. ಘಟಕ ಕಾರ್ಯದರ್ಶಿಯವರಾದ ನಾಸಿರುದ್ದೀನ್ ರವರು ಅತಿಥಿಗಳು ಹಾಗೂ ಸಭಿಕರನ್ನು ಸ್ವಾಗತಿಸಿದರು. ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ಮಂಜುನಾಥ ಅವರು ವಹಿಸಿದ್ದರು. ಮುಸ್ತಫ್ ಅವರ ಧನ್ಯವಾದದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಮೂಲಭೂತ ಸೌಕರ್ಯಗಳ ಈಡೇರಿಕೆಗೆ ಒತ್ತಾಯಿಸಿ ಧರಣಿ

ದೊಡ್ಡಬಳ್ಳಾಪುರ : ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್ಐ) ನೇತೃತ್ವದಲ್ಲಿ ದೊಡ್ಡ ಬಳ್ಳಾಪುರ ನಗರ ಸಭೆ ವ್ಯಾಪ್ತಿಯ ಮುತ್ತೂರು ಪ್ರದೇಶದಲ್ಲಿನ ಮೂಲಭೂತ ಸೌಲಭ್ಯಗಳನ್ನು ಈಡೇರಿಸಲು ಒತ್ತಾಯಿಸಿ ನಗರ ಸಭೆಯ ಮುಂದೆ ಧರಣಿ ಸತ್ಯಾಗ್ರಹ ನಡೆಯಿತು.

ಸುಮಾರು 150 ಕ್ಕೂ ಹೆಚ್ಚು ಜನ ಮುತ್ತೂರಿನ ನಾಗರೀಕರು ಮೆರವಣಿಗೆಯಲ್ಲಿ ಬಂದು ನಗರ ಸಭೆ ಮುಂದೆ ಧರಣಿ ನಡೆಸಿದರು. ಕುಡಿಯುವ ನೀರಿಗಾಗಿ, ಚರಂಡಿ ದುರಸ್ತಿಗಾಗಿ, ದೀಪಗಳಿಗಾಗಿ ಒತ್ತಾಯಿಸಿ ಘೋಷಣೆಗಳನ್ನು ಕೂಗುತ್ತಿದ್ದರು. ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಈ ಧರಣಿ ಕಾರ್ಯಕ್ರಮವನ್ನು ಉದ್ದೇಶಿಸಿ ಜಿಲ್ಲಾ ಮುಖಂಡರಾದ ಬಿ.ಜಿ.ಹೇಮಂತರಾಜ್, ತಾಲ್ಲೂಕು ಮುಖಂಡರುಗಳಾದ ಎಲ್.ಸಂಜೀವಪ್ಪ, ಆರ್.ಶ್ರೀನಿವಾಸ್ ಮಾತನಾಡಿದರು. ಹೋರಾಟದ ನೇತೃತ್ವವನ್ನು ಮುತ್ತೂರಿನ ಡಿವೈಎಫ್ಐ ಮುಖಂಡ ರಿಜ್ವಾನ್ ವಹಿಸಿದ್ದರು.

ನೆರದಿದ್ದ ನಾಗರೀಕರನ್ನು ಉದ್ದೇಶಿಸಿ ಮಾತನಾಡಿದ ನಗರ ಸಭಾ ಅಧ್ಯಕ್ಷ ಶ್ರೀ ಬಿ.ಜಿ.ಎಲ್.ಕಾಂತಪ್ಪ ಕೂಡಲೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಸ್ಥಳ ಪರಿಶೀಲನೆಗೆ ಬರುವುದಾಗಿ ತಿಳಿಸಿದರು. ನಗರ ಸಭಾ ಕಮಿಷನರ್ ಮನವಿ ಪತ್ರವನ್ನು ಸ್ವೀಕರಿಸಿದರು.

ಈ ಮೇಲ್ಕಂಡ ಪ್ರದೇಶದಲ್ಲಿ ಈಗ ಬಿರುಸಿನಿಂದ ಶುಚಿತ್ವ ಕಾರ್ಯ ಪ್ರಾರಂಭವಾಗಿದೆ. ಬೀದಿ ದೀಪಗಳನ್ನು ಹಾಕಲಾಗಿದೆ. ನೀರಿನ ಪೈಪುಗಳನ್ನು ಹಾಕಲಾಗುತ್ತಿದ್ದು, ನಗರ ಸಭೆ ನಮ್ಮ ಬೇಡಿಕೆಗಳಿಗೆ ಗಮನ ನೀಡಿರುವುದು ಹೋರಾಟಕ್ಕೆ ಸಂದ ಜಯವಾಗಿದೆ.


ಮುಂಗಡ ಸ್ಥಳ ಕಾದಿರಿಸುವಿಕೆಗೆ ಆಗ್ರಹ

ಚಿಂತಾಮಣಿ: ಚಿಂತಾಮಣಿಯಿಂದ ಕೋಲಾರ ಮತ್ತು ಬೆಂಗಳೂರಿಗೆ ಕಛೇರಿ, ಆಸ್ಪತ್ರೆ, ಇತ್ಯಾದಿ ಕೆಲಸಗಳ ನಿಮಿತ್ತ ಪ್ರತಿದಿನ ಸಾವಿರಾರು ಜನರು ಪ್ರಯಾಣ ಮಾಡುತ್ತಿದ್ದು ಬಸ್ಸುಗಳ ಅಸಮರ್ಪಕತೆಯಿಂದ ಎಲ್ಲಾ ಪ್ರಯಾಣಿಕರು ಪರದಾಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ ರೋಗಿಗಳು ಮತ್ತು ವಯಸ್ಸಾದವರು, ಮಕ್ಕಳು ಇವರ ಸ್ಥಿತಿಯಂತೂ ಕಷ್ಟಕರ ಪ್ರಯಾಣವಾಗಿದೆ. ಆದ್ದರಿಂದ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಿ ಕೆಲವು ಬಸ್ಸುಗಳಲ್ಲಿ ಮುಂಗಡ ಸ್ಥಳ ಕಾದಿರಿಸುವಿಕೆ ಪದ್ಧತಿಯನ್ನು ಜಾರಿಗೆ ತರಬೇಕೆಂದು ಸಿಪಿಐ(ಎಂ) ಸ್ಥಳೀಯ ಸಮಿತಿಗಳು ಆಗ್ರಹಿಸಿವೆ.

ವೇಗವಾಗಿ ಬೆಳೆಯುತ್ತಿರುವ ಚಿಂತಾಮಣಿ ನಗರದ ರಸ್ತೆಗಳಲ್ಲಿ ವಾಹನಗಳನ್ನು ಓಡಿಸುವುದು ಕಷ್ಟಕರವಾಗಿದ್ದು, ರಸ್ತೆಗಳನ್ನು ವಿಶಾಲಗೊಳಿಸುವುದರ ಜೊತೆಗೆ ವಾಹನ ಸಂಚಾರ ಸುಲಭವಾಗುವ ರೀತಿಯಲ್ಲಿ ಪ್ರಮುಖ ರಸ್ತೆಗಳಲ್ಲಿರುವ ಎಲ್ಲಾ ಡೀಸೆಲ್ ಪಂಪ್‌ಗಳನ್ನು ಹೊರ ವಲಯಗಳಿಗೆ ಸ್ಥಳಾಂತರಿಸಬೇಕೆಂದು ಹಾಗೂ ಅಳತೆಮತ್ತು ಗುಣಮಟ್ಟದಲ್ಲಿ ಮೋಸ ಮಾಡು ತ್ತಿರುವ ಕೆಲವು ಬಂಕ್‌ಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳ ಬೇಕೆಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ, ಸಚಿವರಿಗೆ ಮನವಿ ನೀಡಲು ತೀರ್ಮಾನಿಸಿರುವ ಸಿಪಿಐ(ಎಂ) ಸಮಿತಿ ಸಮಸ್ಯೆಗಳು ಪರಿ ಹಾರವಾಗದಿದ್ದಲ್ಲಿ ಹೋರಾಟ ಸಂಘಟಿಸಲು ನಿರ್ಧರಿಸಿದೆ.

ವಿಪ್ರೋ ಕಾರ್ಮಿಕರಿಂದ ಚಂಡಮಾರುತ ನಿಧಿ ಸಂಗ್ರಹ

ಬೆಂಗಳೂರು: ನವೆಂಬರ್‌ನಲ್ಲಿ ಆಂಧ್ರಪ್ರದೇಶದ ಚಿತ್ತೂರ್ ಜಿಲ್ಲೆಯಲ್ಲಿ ಚಂಡಮಾರುತಕ್ಕೀಡಾದ ಲಕ್ಷಾಂತರ ಜನರಿಗೆ ವಿಪ್ರೋ ಫ್ಲೇವುಡ್ ಪವರ್ ಕಾರ್ಮಿಕರು ಸಹಾನುಭೂತಿ ಸೂಚಿಸಿ ಒಂದು ದಿನದ ವೇತನವನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಚಂಡಮಾರುತ ಪರಿಹಾರ ನಿಧಿಗೆ 34 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಕಳುಹಿಸಿದ್ದಾರೆ.



ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆಯ ಅಂಗವಾಗಿ ಕ್ರಿಕೆಟ್ ಪಂದ್ಯಾವಳಿ

ಬೆಂಗಳೂರು: ಡಿವೈಎಫ್ಐ ಲಕ್ಷ್ಮಿನಾರಾಯಣ ಪುರ ಘಟಕವು ಕಳೆದ ಮಾರ್ಚ್ 30 ರಿಂದ ಏಪ್ರಿಲ್ 8 ರವರೆಗೆ ಟೆನ್ನಿಸ್ ಬಾಲ್‌ಕ್ರಿಕೆಟ್ ಪಂದ್ಯಾವಳಿಯನ್ನು ಏರ್ಪಡಿಸಿತ್ತು. ಇದರಲ್ಲಿ 20 ತಂಡಗಳು ಭಾಗವಹಿಸಿದ್ದವು.

ವಿಜಯ ಲೆವನ್ ತಂಡ ಮೊದಲ ಸ್ಥಾನ ಪಡೆದು ಮ್ಯಾನ್ ಆಫ್ ದಿ ಮ್ಯಾಚ್ ಪ್ರಶಸ್ತಿಯನ್ನು ನವೀನ್, ಬೆಸ್ಟ್ ಆಲ್‌ರೌಂಡರ್ ಪ್ರಶಸ್ತಿಯನ್ನು ಮಹೇಶ್, ಸಿ.ಸಿ.ತಂಡದ ಶ್ರೀನಿವಾಸ್ ಅವರು ಸರಣಿಯ ಆಟಗಾರ ಪ್ರಶಸ್ತಿಯನ್ನು ಪಡೆದರು. ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ವಕೀಲರಾದ ಎಸ್.ಶಂಕರಪ್ಪ ಡಿವೈಎಫ್ಐ ಟ್ರೋಫಿಗಳನ್ನು ವಿತರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಗೋಪಾಲ ಕೃಷ್ಣ ವಹಿಸಿದ್ದರು. ಎ.ಎಂ.ರವಿಚಂದ್ರನ್ (ಜಿಲ್ಲಾ ಉಪಾಧ್ಯಕ್ಷರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಿವೈಎಫ್ಐ ಲಕ್ಷ್ಮಿನಾರಾಯಣಪುರ ಘಟಕದ ಅಧ್ಯಕ್ಷರಾದ ಎಸ್.ಗೋಪಾಲ್‌ರವರು ವಂದಿಸಿದರು.

ಕರ್ನಾಟಕದಲ್ಲಿ ಕಳೆದವಾರ

ಏಪ್ರಿಲ್ 11

□ ವೈದ್ಯಕೀಯ ಮತ್ತು ದಂತ ವೈದ್ಯ ಕಾಲೇಜುಗಳವರು 1997-98 ನೇ ಸಾಲಿಗೆ ಸ್ನಾತಕೋತ್ತರ ಶಿಕ್ಷಣಕ್ಕೆ ಭಾರತೀಯ ವೈದ್ಯಕೀಯ ಮಂಡಳಿ ಮತ್ತು ದಂತ ವೈದ್ಯ ಮಂಡಳಿ ನಿಗದಿ ಮಾಡಿರುವುದಕ್ಕಿಂತ ಹೆಚ್ಚು ಪ್ರವೇಶ ನೀಡಬಾರದು ಎಂದು ಹೈಕೋರ್ಟ್ ಆದೇಶ.

□ ಯಾದಗಿರಿಯನ್ನು ಹೊಸ ಜಿಲ್ಲಾ ಕೇಂದ್ರವಾಗಿ ಮಾಡಬೇಕೆಂದು ಒತ್ತಾಯಿಸಿ ಬಸ್, ರೈಲುತಡೆ, ಲಾಠಿ ಪ್ರಹಾರ.

□ ರಾಜ್ಯದಲ್ಲಿ 'ಕ್ಷಿಪ್ರ ಕಾರ್ಯಾಚರಣೆ ಪಡೆ' ತುಕಡಿಯನ್ನು ರಚಿಸಲು ಉದ್ದೇಶಿಸಲಾಗಿದೆ ಎಂದು ಕೇಂದ್ರ ಮೀಸಲು ಪೋಲೀಸ್ ಪಡೆಯ ವಿಶೇಷ ಮಹಾ ನಿರ್ದೇಶಕರು.

ಏಪ್ರಿಲ್ 12

□ ಶಹಾಪುರವನ್ನು ಜಿಲ್ಲಾ ಕೇಂದ್ರವಾಗಿ ಮಾಡಬೇಕೆಂದು ಒತ್ತಾಯಿಸಿ ಬಂದ್.

ಏಪ್ರಿಲ್ 13

□ ಬೆಂಗಳೂರಿನಲ್ಲಿ: ಕರುಳುಬೇನೆಯಿಂದ ಆಸ್ಪತ್ರೆ ಸೇರಿದವರ ಸಂಖ್ಯೆಯಲ್ಲಿ ಮತ್ತಷ್ಟು ಹೆಚ್ಚಳ. 400ನ್ನೂ ಮೀರಿದೆ ಎಂದು ವರದಿ.

□ ನವ ಮಂಗಳೂರು ಬಂದರು 1996-97 ನೇ ಸಾಲಿನಲ್ಲಿ ಸರಕು ಸಾಗಾಟದಲ್ಲಿ ಗುರಿ ಮೀರಿ ಸಾರ್ವಕಾಲಿಕ ದಾಖಲೆ ನಡೆಸಿರುವುದಾಗಿ ಬಂದರು ಮಂಡಳಿಯ ಉಪಾಧ್ಯಕ್ಷರು. ಸರಕು ಸಾಗಣೆ ಕಳೆದ ವರ್ಷಕ್ಕಿಂತ 40% ಹೆಚ್ಚಿದೆ ಎಂದು ಅವರ ಪ್ರಕಟಣೆ.

ಏಪಿಲ್ 14

□ ಕರ್ನಾಟಕ ಸರಕಾರದ ಒಡೆತನದ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಶನ್ ಪುನಶ್ಚೇತನಕ್ಕೆ 15-16 ಕೋಟಿ ರೂಗಳ ಯೋಜನೆಗೆ ಬಿಐಎಫ್ಐಆರ್ ಅನುಮತಿ.

□ ರಾಯಚೂರಿನಲ್ಲಿ ಕೈಗಾರಿಕಾ ಪ್ರಗತಿಗೆ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸಾಧ್ಯವಾಗಿಲ್ಲ ಎಂದು ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.

ಏಪ್ರಿಲ್ 15

□ ಹತ್ತು ನಿಗಮ, ಮಂಡಳಿಗಳಿಗೆ ಅಧ್ಯಕ್ಷರ ನೇಮಕ. ಇವರಲ್ಲಿ ಐವರು ಶಾಸಕರು, ಐವರು ಜನತಾದಳ ಪ್ರಮುಖರು.

□ ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಸುರಪುರ, ಶಹಾಪುರಗಳಲ್ಲಿ ಬಂದ್.

ಏಪ್ರಿಲ್ 16

□ ಇನ್ನೂ 22 ನಿಗಮ, ಮಂಡಳಿಗಳಿಗೆ ಅಧ್ಯಕ್ಷರ ನೇಮಕ, ಇವುಗಳಲ್ಲಿ 10 ಕ್ಕೆ ಜನತಾದಳ ಶಾಸಕರು, ಉಳಿದ 12 ಕ್ಕೆ ಜನತಾದಳ ಪ್ರಮುಖ ಕಾರ್ಯಕರ್ತರ ನೇಮಕ.

□ ಕರ್ನಾನಟಕ ವಿದ್ಯುತ್ ನಿಗಮ (ಕೆಪಿಸಿ) ತನ್ನ ಉತ್ಪಾದನೆಯಲ್ಲಿ 25% ವನ್ನು ನೇರವಾಗಿ ಬಳಕೆದಾರರ ಕಂಪನಿಗಳಿಗೆ ಮಾರಾಟ ಮಾಡಲು ರಾಜ್ಯ ಸರಕಾರದ ಶರತ್ತಿನ ಒಪ್ಪಿಗೆ.

ಏಪ್ರಿಲ್ 17

□ ಐಎಎಸ್ ಅಧಿಕಾರಿಗಳ ಪತ್ನಿಯರಿಂದ ಭೂ ಕಬಳಿಕೆ ಮತ್ತು 1.17 ಕೋಟಿ ರೂ. ನೋಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆ ಹಗರಣದಲ್ಲಿ ನಾಲ್ಕು ಅಧಿಕಾರಿಗಳು [illegible]

ಸಂಯುಕ್ತರಂಗದಿಂದ ಎಡರಂಗದವರೆಗೆ

ಮೂರು ದಶಕಗಳ ವರ್ಗ ಹೋರಾಟಗಳ ಮುನ್ನಡೆಯ ನೆನಪು



ಪಶ್ಚಿಮಬಂಗಾಳದಲ್ಲಿ ಈಗ ಸಂಯುಕ್ತ ರಂಗ ಸರಕಾರದ ೩೦ನೇ ವಾರ್ಷಿಕೋತ್ಸವ ಹಾಗೂ ಎಡರಂಗ ಸರಕಾರದ ೨೦ನೇ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ. ಈಗ ಕೇಂದ್ರದಲ್ಲಿ ಏಕಪಕ್ಷ ಆಡಳಿತದ ಯುಗ ಕೊನೆಗೊಂಡು ಸಮ್ಮಿಶ್ರ ಸರಕಾರಗಳ ಯುಗ ಆರಂಭವಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಇದು ಸಾಧ್ಯವೇ ಎನ್ನುವ ಪ್ರಶ್ನೆ ಬಂದಾಗಲೆಲ್ಲಾ ತಪ್ಪದೇ ಪಶ್ಚಿಮ ಬಂಗಾಳದತ್ತ ತೋರಿಸುತ್ತಾರೆ. ಒಂದು ಪರ್ಯಾಯ ಆಡಳಿತ ದಾರಿಯ ಬಗ್ಗೆ ಹೀಗೆ ಎಲ್ಲರನ್ನೂ ಚಿಂತನೆಗೆ ಹಚ್ಚಿಸುವ ಪಶ್ಚಿಮ ಬಂಗಾಳದ ಅನುಭವ ಏನು? ಸಂಯುಕ್ತ ರಂಗ ಸರಕಾರ ರಚನೆಯಾದ ಹತ್ತೇ ವರ್ಷಗಳೊಳಗೆ ಎಡರಂಗ ಸರಕಾರ ಹೇಗೆ ರಚನೆಯಾಯಿತು? ಇದರ ಒಬ್ಬ ಪ್ರಮುಖ ರೂವಾರಿ, ನಿರಂತರ ಐದನೇ ಬಾರಿ ಮುಖ್ಯಮಂತ್ರಿಗಳಾಗಿ ಇಡೀ ದೇಶದಲ್ಲಿ ದಾಖಲೆ ಸ್ಥಾಪಿಸಿರುವ ಜ್ಯೋತಿಬಸುರವರೇ ಸ್ವತಃ ಇಲ್ಲಿ ನೆನಪಿಸಿಕೊಂಡಿದ್ದಾರೆ.

ಮೂವತ್ತು ವರ್ಷಗಳ ಹಿಂದೆ, ಮಾರ್ಚ್ 2, 1967ರಂದು, ಪಶ್ಚಿಮ ಬಂಗಾಳದಲ್ಲಿ ಒಂದು ಸಂಯುಕ್ತ ರಂಗ ಸರಕಾರವನ್ನು ರಚಿಸಲಾಗಿತ್ತು. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಈ ಮೊಟ್ಟ ಮೊದಲ ಕಾಂಗ್ರೆಸ್ಸೇತರ ಸರಕಾರದ ಸಚಿವ ಸಂಪುಟದ ನಾಯಕರಾಗಿ ಬಾಂಗ್ಲಾ ಕಾಂಗ್ರೆಸ್‌ನ ಮುಖಂಡ ಶ್ರೀ ಅಜಯ್ ಮುಖರ್ಜಿಯವರು ಮುಖ್ಯಮಂತ್ರಿಯಾಗಿದ್ದರು. ಅದೇ ವರ್ಷದ ನವಂಬರ್ 21ರಂದು ಆ ಸರಕಾರ ಉರುಳಿತು. ಅಂದಿನ ದೆಹಲಿಯ ಕಾಂಗ್ರೆಸ್ ನಾಯಕತ್ವ ಮತ್ತು ಸಂಯುಕ್ತ ರಂಗದ ಅಂಗ ಪಕ್ಷಗಳ ಒಂದು ವಿಭಾಗ ಒಟ್ಟು ಸೇರಿ ಪಶ್ಚಿಮ ಬಂಗಾಳ ರಾಜ್ಯದ ಮೊಟ್ಟ ಮೊದಲ ಕಾಂಗ್ರೆಸ್ಸೇತರ ಸರಕಾರವನ್ನು ಬೀಳಿಸಲು ನಡೆಸಿದ ಸಂಚಿನ ಬಗ್ಗೆ ಈಗಿನ ಪೀಳಿಗೆಯವರಿಗೆ ಇರುವ ಮಾಹಿತಿ ಬಹಳ ಕಮ್ಮಿ ಎನ್ನಬಹುದು.

ಕಳೆದ ಎರಡು ದಶಕಗಳಿಂದ ಎಡರಂಗ ಸರಕಾರವು ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಮೂವತ್ತು ವರ್ಷಗಳ ಹಿಂದೆ ಅಂದಿನ ಈ ಘಟನಾವಳಿಗಳನ್ನು ರೂಪಿಸಿದ ಸಂದರ್ಭಗಳನ್ನು ಈಗ ಊಹಿಸಿಕೊಳ್ಳುವುದೂ ಕಷ್ಟ. ಇಂದು, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಶ್ರೀಮಂತ ಅನುಭವಗಳಿಂದ ಸಜ್ಜಾಗಿದ್ದಾರೆ; 1967ಕ್ಕಿಂತಲೂ ಈಗ ಅವರು ಹೆಚ್ಚು ಪ್ರೌಢರಾಗಿದ್ದಾರೆ. ಆದರೂ, ಒಂದು ಬಹು ಮುಖ್ಯವಾದ ಅಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಕಣ್ಣೀರು, ಬೆವರು ಮತ್ತು ರಕ್ತದ ಕೋಡಿಗಳು ಹರಿದ ಮೇಲೆಯೇ ಪಶ್ಚಿಮ ಬಂಗಾಳದ ರಾಜಕೀಯ ಸನ್ನಿವೇಶ ಸಂಯುಕ್ತ ರಂಗದಿಂದ ಇಂದಿನ ಎಡರಂಗದತ್ತ ಕ್ರಮೇಣವಾಗಿ ಉನ್ನತ ಮಟ್ಟಕ್ಕೆ ಏರಲು ಸಾಧ್ಯವಾಗಿದೆ. ನಿರಂತರ ಹೋರಾಟ ಮತ್ತು ಚಳುವಳಿಗಳ ಶ್ರೀಮಂತ ಪರಂಪರೆಯಿಂದ ಕೂಡಿದ ಹಾದಿ ಅದು.

ಇಂದು ಇಡೀ ದೇಶವೇ ಎಡ ಐಕ್ಯತೆಯ ಮತ್ತು ಎಡರಂಗ ಸರಕಾರದ ಶ್ರೇಷ್ಠತೆಯ ಮಾದರಿಯಾಗಿ ಪಶ್ಚಿಮ ಬಂಗಾಳದತ್ತ ನೋಡುತ್ತಿದೆ. ವಿದೇಶಗಳಲ್ಲೂ ಕೂಡ ಎಡರಂಗ ಸರಕಾರವು ಆಸಕ್ತಿಯನ್ನು ಕೆರಳಿಸಿದೆ. ಇಂದು ದೆಹಲಿಯಲ್ಲಿ ಕಾಂಗ್ರೆಸ್ಸೇತರ, ಬಿಜೆಪಿಯೇತರ ಸಮ್ಮಿಶ್ರ ಸರಕಾರ - ಸಂಯುಕ್ತ ರಂಗ ಸರಕಾರ - ವನ್ನು ಖಂಡಿತವಾಗಿಯೂ ಯಾವುದೇ ಕಾರಣಕ್ಕೂ ಪಶ್ಚಿಮ ಬಂಗಾಳದ 1967 ಮತ್ತು 1969ರ ಸಂಯುಕ್ತ ರಂಗ ಸರಕಾರಕ್ಕಾಗಲೀ ಅಥವಾ ಇಂದಿನ ಎಡರಂಗ ಸರಕಾರಕ್ಕಾಗಲೀ ಹೋಲಿಸಬಾರದು. ಆದಾಗ್ಯೂ ಸಹ, ದೇಶದ, ಜನಸಮುದಾಯದ ಹಿತಾಸಕ್ತಿಗಳನ್ನು ಕಾಪಾಡಲು ಮತ್ತುಭದ್ರಪಡಿಸಲು ವಿವಿಧ ರಾಜಕೀಯ ಪಕ್ಷಗಳು ವಹಿಸಿದ ಮುತುವರ್ಜಿಯಿಂದಾಗಿ ಒಂದು ಪರ್ಯಾಯ ಆಡಳಿತ ದಾರಿ ಇದೆ ಎಂದು ದೆಹಲಿಯ ರಾಜಕೀಯ ವಲಯವನ್ನು ಚಿಂತನೆಗೆ ಹಚ್ಚಲು ಸಾಧ್ಯವಾಗಿದೆ.

ಆಶಾದೀಪ

ದೇಶದೆಲ್ಲೆಡೆಯ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದುಗೂಡಿಸುವಲ್ಲಿ ಮತ್ತು ಬಲಪಡಿಸುವಲ್ಲಿ ಒಂದು ಚೇತನ ಶಕ್ತಿಯಾಗಿ ಎಡಪಕ್ಷಗಳು ವಹಿಸಿದ ಪಾತ್ರ ಇಂದು ಎಲ್ಲರೂ ಒಪ್ಪಿರುವ ವಾಸ್ತವ ಸಂಗತಿ. ಯಾವ ಯಾವ ಪ್ರದೇಶಗಳಲ್ಲಿ ನಮ್ಮ ಪಕ್ಷ ಮತ್ತು ಬೇರೆ ಎಡಪಕ್ಷಗಳು ನಿರ್ಣಾಯಕ ಪಾತ್ರ ವಹಿಸುವಷ್ಟು ಪ್ರಬಲವಾಗಿಲ್ಲವೋ ಅಂಥಲ್ಲೆಲ್ಲಾ ಜನರಿಗೆ, ಅದರಲ್ಲೂ ದುಡಿಯುವ ಜನರಿಗೆ ಎಡರಂಗ ಸರಕಾರ ಒಂದು ಆಶಾದೀಪ. ಇದು ನಿಜಕ್ಕೂ ಪಶ್ಚಿಮ ಬಂಗಾಳ ಎಡರಂಗ ಸರಕಾರದ ಮೇಲೆ ಜವಾಬ್ದಾರಿಯ ಹೊರೆಯನ್ನು ಹೆಚ್ಚಿಸಿದೆ. ಜನ ಸಮುದಾಯದ ರಾಜಕೀಯ ಪ್ರಜ್ಞೆಯ ಮಟ್ಟವನ್ನು ಹೆಚ್ಚಿಸುವುದರತ್ತ ಸತತವಾದ ಕಾರ್ಯ ನಿರ್ವಹಿಸಬೇಕಾಗಿದೆ ಮತ್ತು ಜನಸಮೂಹವನ್ನು ಅಣಿನೆರೆಸುವ ಕಾರ್ಯದಲ್ಲಿ ಮಗ್ನರಾಗಬೇಕಿದೆ.

ಹಲವಾರು ಹೋರಾಟಗಳನ್ನು ಮತ್ತು ಚಳುವಳಿಗಳನ್ನು ಕಟ್ಟಿ ಬೆಳೆಸಿದ್ದರಿಂದಾಗಿ ಸಾವಿರಾರು ಹುತಾತ್ಮರ ಬಲಿದಾನಗಳಿಂದಾಗಿ ಸಂಯುಕ್ತ ರಂಗ ಸರಕಾರ ಅಸ್ತಿತ್ವಕ್ಕೆ ಬಂದ ಹತ್ತು ವರ್ಷಗಳಲ್ಲೇ ಒಂದು ಎಡರಂಗ ಸರಕಾರವನ್ನು ಸ್ಥಾಪಿಸಲು ಸಾಧ್ಯವಾಯಿತು. 1967-77ರ ಆ ಅವಧಿಯಲ್ಲಿ ಅಮೂಲ್ಯವಾದ ಅನುಭವಗಳಿಂದ ನಮ್ಮನ್ನು ಶ್ರೀಮಂತಗೊಳಿಸಿದ ಹಲವು ಹತ್ತು ಬಹುಮುಖ್ಯ ಮೈಲುಗಲ್ಲುಗಳನ್ನು ನಾವು ದಾಟಿ ಬಂದೆವು. ಇವತ್ತೂ ಕೂಡಾ ಹೊಸ ಹೊಸ ಸನ್ನಿವೇಶಗಳನ್ನು ಎದುರಿಸುತ್ತಿದ್ದೇವೆ ಮತ್ತು ಇನ್ನು ಮುಂದೆಯೂ ಇನ್ನೂ ಹಲವಾರು ಅನುಭವಗಳ ಮೈಲುಗಲ್ಲುಗಳನ್ನು ಸೇರಿಸಿಕೊಳ್ಳುತ್ತೇವೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಆದ ಕಾರಣ ಹಿಂದೆ ಯಾರೂ ತುಳಿಯದ ಹೊಸ ಹಾದಿಯಲ್ಲಿ ಸಾಗಬೇಕಾಗಿರುವಾಗ ನಮ್ಮ ಹಿಂದಿನ ಅನುಭವಗಳನ್ನು ನೆನಪಿಸಿಕೊಳ್ಳುವುದು ಮುಖ್ಯವಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರಕಾರವನ್ನು ಮೊಟ್ಟ ಮೊದಲ ಸಂಯುಕ್ತ ರಂಗ ಸರಕಾರವನ್ನು ರಚಿಸಿದ ಹಾಗೂ ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿಯ ಮುನ್ನಡೆಯಲ್ಲಿ ಪ್ರಮುಖವಾದ ಹಂತವನ್ನು ತಲುಪಿದ ಸಂದರ್ಭದ ಮೂವತ್ತನೇ ವಾರ್ಷಿಕೋತ್ಸವವನ್ನು ಆಚರಿಸುವಾಗ, ಇದು ನಮ್ಮ ಮುಖ್ಯ ಉದ್ದೇಶ.

ಕಠಿಣ ಹೋರಾಟಗಳ ಫಲ:

ಸಂಯುಕ್ತ ರಂಗ ಮತ್ತು ಅದರ ಸರಕಾರ ಒಂದೇ ದಿನದಲ್ಲಿ ಹುಟ್ಟಿಬಂದದ್ದಲ್ಲ ಎಂಬಂಶವನ್ನು ಈ ಸಂದರ್ಭದಲ್ಲಿ ನಾನು ಒತ್ತಿ ಹೇಳಬಯಸುತ್ತೇನೆ. ಪ್ರತಿಯೊಂದು ಪ್ರಮುಖ ಸಂದರ್ಭಗಳಿಗೆ ಹಿನ್ನೆಲೆಯಿರುತ್ತದೆ. ಪಶ್ಚಿಮ ಬಂಗಾಳದಲ್ಲಿ ಮೊದಲ ಸಂಯುಕ್ತ ರಂಗ ಸರಕಾರ ರಚನೆಗೂ ಒಂದು ಹಿನ್ನೆಲೆಯಿದೆ. ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ನಡೆಸಿದ ಚಳುವಳಿಯ ಮೂಸೆಯಲ್ಲಿ ಆ ಸಂಯುಕ್ತ ರಂಗ ಹುಟ್ಟಿ ಬಂತು. ಎದ್ದು ಬರುತ್ತಿದ್ದ ಪ್ರಜಾಸತ್ತಾತ್ಮಕ ಚಳುವಳಿಯ ಮೂಲಕ ಎಡ ಐಕ್ಯತೆಯನ್ನು ಕಟ್ಟಿ ಬೆಳೆಸುತ್ತಲೇ ಕಮ್ಯುನಿಸ್ಟರು ಮತ್ತು ಎಡಪಂಥೀಯರು ಈ ಚಳುವಳಿಯಲ್ಲಿ ಗಮನಾರ್ಹವಾದ ಪಾತ್ರವನ್ನು ವಹಿಸಿದ್ದರು. ದೇಶದಲ್ಲಿ ಸ್ವಾತಂತ್ರ್ಯಾನಂತರದಲ್ಲಿ ದೀರ್ಘ ಅವಧಿಯ ರಾಜಕೀಯ ಬೆಳವಣಿಗೆಯಿಂದ ಗಳಿಸಿದ ಶ್ರೀಮಂತ ಅನುಭವದಿಂದ ನಾನಿಷ್ಟು ಮಾತ್ರ ಹೇಳಬಲ್ಲೆ-ನಮ್ಮ ಹತ್ತು ಪಕ್ಷಗಳು ಮತ್ತು ಎಡಪಂಥೀಯರು ಸರಿಯಾದ ಸಮಯಕ್ಕೆ ಸರಿಯಾದ ಕಾರ್ಯತಂತ್ರ ಮತ್ತು ರಣನೀತಿ ಅಳವಡಿಸಿದ್ದರಿಂದಲೇ ಇದು ಸಾಧ್ಯವಾಯಿತು. ಜನಸಮುದಾಯದ ಒಳಿತಿಗಾಗಿ ನಾವು ಕೆಲಸ ಮಾಡಿದೆವು, ಅದರಿಂದ ಜನ ನಮ್ಮ ಮೇಲೆ ನಂಬಿಕೆ ಇಡುವಂತಾಯಿತು. ಅದೇ ಸಮಯದಲ್ಲಿ ನಾವು ಚುನಾವಣಾ ಹೋರಾಟವನ್ನು ಎಂದಿಗೂ ಕಡಿಮೆ ಮಹತ್ವವುಳ್ಳದ್ದೆಂದು ಪರಿಗಣಿಸಲೇ ಇಲ್ಲ. ಖಂಡಿತವಾಗಿಯೂ ಚಳುವಳಿಗಳು ಮತ್ತು ಹೋರಾಟಗಳ ಮೂಲಕ ಎಡರಂಗ ಹುಟ್ಟಲು ಬಹುಮುಖ್ಯ ಕಾರಣ ಚುನಾವಣಾ ಹೋರಾಟವೇ ಆಗಿದೆ. ಸಮಯ ಕಳೆದ ಹಾಗೆ ಈ ಚುನಾವಣಾ ಸಮರದ ಪ್ರಾಮುಖ್ಯತೆ ಬೆಳೆಯುತ್ತಲೇ ಇದೆ.

1957 ರಿಂದಲೇ:

ಸಂಯುಕ್ತ ರಂಗವನ್ನು ಕಟ್ಟುವ ಮೊದಲ ಅವಕಾಶ 1951ರಲ್ಲಿ ಹೌರಾ ಪುರಸಭೆ ಚುನಾವಣೆಗಳ ಸಂದರ್ಭದಲ್ಲಿ ಸಿಕ್ಕಿತು. ಈ ಸಂಯುಕ್ತ ರಂಗವನ್ನು 'ಪ್ರಗತಿಶೀಲ ನಾಗರಿಕ ಕೂಟ' ಎಂದು ಕರೆಯಲಾಯಿತು. ಇದಕ್ಕೂ ಮೂರು ವರ್ಷಗಳ ಮುಂಚೆ, ಮಾರ್ಚ್ 1948ರಲ್ಲಿ ಪಶ್ಚಿಮ ಬಂಗಾಳದಲ್ಲಿ ನಮ್ಮ ಪಕ್ಷವನ್ನು ನಿಷೇಧಿಸಲಾಗಿತ್ತು. ಕಲ್ಕತ್ತಾ ನ್ಯಾಯಾಲಯದ ತೀರ್ಪೊಂದು 1950ರಲ್ಲಿ ಈ ನಿಷೇಧವನ್ನು ಕಿತ್ತೆಸೆದಾಗ ರಾಜಕೀಯ ಪಕ್ಷಗಳ ನಡುವೆ ಐಕ್ಯತೆಗಾಗಿ ತಕ್ಷಣದ ಪ್ರಯತ್ನಗಳು ಪ್ರಾರಂಭವಾದವು. ಸಂಯುಕ್ತ ಸೋಷಲಿಸ್ಟ್ ಪಕ್ಷ(ಶರತ್‌ಬೋಸ್ ಸ್ಥಾಪಿತ), ಕಮ್ಯುನಿಸ್ಟ್ ಪಕ್ಷ, ಕ್ರಾಂತಿಕಾರಿ ಸೋಷಲಿಸ್ಟ್ ಪಕ್ಷ(ಆರ್.ಎಸ್.ಪಿ.), ಫಾರ್ವರ್ಡ್ ಬ್ಲಾಕ್, ಎಸ್‌ಯುಸಿ, ಕಾರ್ಮಿಕರ ಪಕ್ಷ, ಕೆಎಂಪಿ ಮುಂತಾದ ಪಕ್ಷಗಳ ನಡುವೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲಾಯಿತು. ಈ ಕೂಟವನ್ನು ಒಂದು 'ರಂಗ' ಎನ್ನುವುದು ಕಷ್ಟವಾದರೂ ಕೂಡಾ ಕಾಂಗ್ರೆಸ್‌ನ ಜನವಿರೋಧಿ ನೀತಿಗಳ ವಿರುದ್ಧದ ಚಳುವಳಿಗೆ ಒಂದು ವೇದಿಕೆಯಂತೂ ಆದಾಗಿತ್ತು. 1952ರಲ್ಲಿ ದೇಶಾದ್ಯಂತ ನಡೆದ ಚುನಾವಣೆಯಲ್ಲಿ 251 ಸ್ಥಾನಗಳಲ್ಲಿ ನಮ್ಮ ಪಕ್ಷ 28 ಸ್ಥಾನಗಳನ್ನು ಗೆದ್ದುಕೊಂಡಿತು.

ಈ ಚುನಾವಣೆಗಳ ಹಿಂದೆಯೇ ಪಶ್ಚಿಮ ಬಂಗಾಳದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯು ಶೀಘ್ರ ಗತಿಯಲ್ಲಿ ಪ್ರಗತಿ ಹೊಂದಿ ಜನಸಾಮಾನ್ಯರ ನಡುವೆ ಹರಿತವಾದ ಐಕ್ಯತೆಯನ್ನು ಬೆಸೆಯುವ ಸಾಧ್ಯತೆಯನ್ನು ಸೃಷ್ಟಿಸಿತು. ಹಿಂದೆಂದೂ ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಇಂತಹ ಬಲಿಷ್ಠವಾದ ನಂಟು ಬೆಳೆದಿದ್ದನ್ನು ಯಾರೂ ಕಂಡಿರಲಿಲ್ಲ.

ಆ ನಂತರದ ವರ್ಷಗಳಲ್ಲಿ ರಾಜ್ಯದ ರಾಜಕೀಯದಲ್ಲಿ ಹೊಸದೊಂದು ರಾಜಕೀಯ ಆಯಾಮವನ್ನು ನೀಡಲೂ ಸಂಯುಕ್ತ ಎಡರಂಗಕ್ಕೆ ಸಾಧ್ಯವಾಗುವಂಥ ಅನೇಕ ಪ್ರಬಲ ಪ್ರಜಾಸತ್ತಾತ್ಮಕ ಚಳುವಳಿಗಳು ನಡೆದವು. ರಾಜಕೀಯ ಖೈದಿಗಳನ್ನು ಮತ್ತು ವಿಚಾರಣೆಗಳೇ ಇಲ್ಲದೆ ಬಂಧನದಲ್ಲಿರುವವರನ್ನು ಬಿಡುಗಡೆ ಮಾಡಲು ಒತ್ತಾಯಿಸಿದ ಚಳುವಳಿ; ಸುಪ್ರಸಿದ್ಧವಾದ ಆಹಾರ ಚಳುವಳಿ; 1953ರ ಚಾರಿತ್ರಿಕ ಉಪಾಧ್ಯಾಯರ ಚಳುವಳಿ; ಟ್ರಾಮ್ ಗಾಡಿಗಳ ದರ ಏರಿಕೆ ವಿರುದ್ಧ ಹಾಗೂ ಟ್ರಾಮ್‌ಗಾಡಿಗಳ ರಾಷ್ಟ್ರೀಕರಣ ಒತ್ತಾಯಿಸಿ ನಡೆಸಿದ ಚಳುವಳಿ; ಬಂಗಾಳ ಮತ್ತು ಬಿಹಾರದ ಉದ್ದೇಶಿತ ಏಕೀಕರಣದ ವಿರುದ್ಧ ಚಳುವಳಿ; ಗೋವಾ ವಿಮೋಚನೆ ಚಳುವಳಿಗೆ ಬೆಂಬಲವಾಗಿ ಮುಂತಾದ ಚಳುವಳಿಗಳು ನಡೆದವು. ಈ ಪ್ರತಿಯೊಂದು ಚಳುವಳಿ ಮತ್ತು ಹೋರಾಟಗಳಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಬಹುಮುಖ್ಯ ಪಾತ್ರ ವಹಿಸಿತ್ತು.

1957 ರಲ್ಲಿ :

ಇಂತಹ ಘಟನೆಗಳ ಸರಮಾಲೆಯ ಹಿನ್ನೆಲೆಯಲ್ಲಿ 1957ರ ಚುನಾವಣೆಗಳು ನಡೆದವು. "ಎಲ್ಲಾ ಸಮಾಜವಾದಿ, ಪ್ರಜಾಸತ್ತಾತ್ಮಕ, ದೇಶಪ್ರೇಮಿ ಮತ್ತು ಪ್ರಗತಿಪರ ಶಕ್ತಿಗಳನ್ನು" ಒಳಗೊಳ್ಳುವ ರಂಗವೊಂದನ್ನು ರಚಿಸಬೇಕೆಂದು ಎಲ್ಲಾ ಸಮಾನ ಮನಸ್ಕ ಪಕ್ಷಗಳಿಗೆ ಅವಿಭಜಿತ ಭಾರತ ಕಮ್ಯುನಿಸ್ಟ್ ಪಕ್ಷವು ವಿನಂತಿ ಮಾಡಿಕೊಂಡಿತು. ಎಡಪಕ್ಷಗಳ ಏಕತೆಯ ಪ್ರಶ್ನೆಗೆ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯು ಯಾವಾಗಲೂ ಹೆಚ್ಚಿನ ಒತ್ತನ್ನು ಕೊಡುತ್ತಾ ಬಂದಿದೆ. ಪಕ್ಷದ ಪಶ್ಚಿಮ ಬಂಗಾಳ ಘಟಕದ ಏಳನೇ ಪ್ರಾಂತೀಯ ಸಮ್ಮೇಳನ(ಆಗ ನಾನು ಪ್ರಾಂತ ಸಮಿತಿಯ ಕಾರ್ಯದರ್ಶಿಯಾಗಿದ್ದೆ)ದ ವರದಿಯಲ್ಲಿ ಒಂದು ಪ್ರತ್ಯೇಕ ಅಧ್ಯಾಯವನ್ನು ಎಡಪಕ್ಷಗಳ ಏಕತೆಯ ಪ್ರಶ್ನೆಗೆ ಮೀಸಲಾಗಿಡಲಾಗಿತ್ತು; ಈ ಐಕ್ಯತೆಯು ಸಾಮೂಹಿಕ ಚಳುವಳಿಗಳನ್ನು ಬಲವರ್ಧನೆ ಮಾಡುವುದರೊಂದಿಗೆ, ಇಂತಹ ಚಳುವಳಿಗಳಲ್ಲಿ ಹೆಚ್ಚು ಹೆಚ್ಚು ಜನಸಮೂಹಗಳನ್ನು ಒಳಗೊಳ್ಳಲು ಸಹಾಯ ಮಾಡುತ್ತದೆ ಎಂದು ಅದರಲ್ಲಿ ಹೇಳಲಾಗಿತ್ತು.

"ಗಣತಾಂತ್ರಿಕ ಐಕ್ಯತೆಗೆ ಕಾರ್ಯಸೂಚಿ" ಎಂಬ ಪುಸ್ತಿಕೆಯನ್ನು ಪಶ್ಚಿಮ ಬಂಗಾಳ ಸಮಿತಿಯು ಪ್ರಕಟಿಸಿತು. ಈ "ಪ್ರಣಾಳಿಕೆ"ಯು 37 ಅಂಶಗಳ ಕಾರ್ಯಕ್ರಮವನು ಹೊಂದಿತ್ತು. ಬೇರೆ ಎಡಪಕ್ಷಗಳು ಮತ್ತು ವಿಶಾಲ ಪ್ರಜಾಸತ್ತಾತ್ಮಕ ಸಮೂಹಗಳ ಜತೆ ಮಾತುಕತೆ ಪ್ರಾರಂಭಿಸಲು ಇದನ್ನು ಆಧಾರವಾಗಿಟ್ಟುಕೊಳ್ಳಲಾಯಿತು. *"ಕಮ್ಯುನಿಸ್ಟ್ ಪಕ್ಷ, ಪ್ರಜಾ ಸೋಷಲಿಸ್ಟ್ ಪಕ್ಷ(ಪಿಎಸ್‌ಪಿ) ಕ್ರಾಂತಿಕಾರಿ ಸೋಶಲಿಸ್ಟ್ ಪಕ್ಷ(ಆರ್‌ಎಸ್‌ಪಿ), ಫಾರ್ವರ್ಡ್ ಬ್ಲಾಕ್(ಮಾರ್ಕ್ಸ್‌ವಾದಿ) ಈ ಅಗ್ರ ಎಡಪಕ್ಷಗಳು 1957ರ ಚುನಾವಣೆಯನ್ನು ಎದುರಿಸುವ ಪ್ರಶ್ನೆಯ ವಿಚಾರದಲ್ಲಿ ಈಗಾಗಲೇ ಒಂದು ಹೊಂದಾಣಿಕೆಗೆ ಬಂದಿವೆ" ಮತ್ತು "ಈ ತೆಕ್ಕೆಗೆ ಇನ್ನೂ ಸೇರಬೇಕಿರುವ ಪಕ್ಷಗಳೊಂದಿಗೆ ಮಾತುಕತೆ ನಡೆಸಲು ಅವಕಾಶ ಕಲ್ಪಿಸಲಾಗಿದೆ"* ಎಂಬ ಅಂಶವನ್ನು ಈ ಪುಸ್ತಿಕೆ ಒತ್ತಿ ಹೇಳಿತು.

ಈ ಪುಸ್ತಕದ ಆಧಾರದಲ್ಲಿ, ಮೋಹಿತ್ ಮೈತ್ರರವರು ಎಡ ಚುನಾವಣಾ ಸಮಿತಿಯ ಸಂಚಾಲಕರಾಗಿ 'ಸಮಾನ ಕನಿಷ್ಟ ಕಾರ್ಯಕ್ರಮ' ಎಂಬ ಜಂಟೀ ಚುನಾವಣಾ ಪ್ರಣಾಳಿಕೆಯನ್ನು ತಯಾರಿಸಿದರು.'

ಪಶ್ಚಿಮ ಬಂಗಾಳದಲ್ಲಿ ಒಟ್ಟು 253 ಸ್ಥಾನಗಳಲ್ಲಿ ಕಾಂಗ್ರೆಸ್‌ಗೆ 152 ಮತ್ತು ಎಡಪಕ್ಷಗಳಿಗೆ 81, ಅದರಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ 46 ಸ್ಥಾನಗಳು ದೊರೆತವು. ಪಶ್ಚಿಮ ಬಂಗಾಳದಲ್ಲಿ ಒಂದು ಪರ್ಯಾಯ ಸರಕಾರವನ್ನು ಸ್ಥಾಪಿಸಲು ಸಾಧ್ಯವಾಗದಿದ್ದರೂ ಕೇರಳದಲ್ಲಿ ಹಾಗೆ ಮಾಡಲು ಸಾಧ್ಯವಾಯಿತು. ಅಲ್ಲಿ ನಮ್ಮ ಪಕ್ಷಕ್ಕೆ ಬಹುಮತ ದೊರೆಯಿತು ಮತ್ತು ಇಎಂಎಸ್ ನಂಬೂದಿಪ್ಪಾಡ್‌ರ ಮುಖ್ಯಮಂತ್ರಿತ್ವದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ರಾಜ್ಯದಲ್ಲಿ ಕಮ್ಯುನಿಸ್ಟ್ ನೇತೃತ್ವದ ಸರಕಾರ ಬಂತು.

ಸಾಮೂಹಿಕ ನೆಲೆಗಟ್ಟಿನಲ್ಲಿ ವಿಸ್ತರಣೆ:

ಈ ಚುನಾವಣಾ ಫಲಿತಾಂಶಗಳು ಪಶ್ಚಿಮ ಬಂಗಾಳದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಗತಿಯನ್ನು ಮಾತ್ರ ದಾಖಲಿಸದೆ ಪ್ರಜಾಪ್ರಭುತ್ವ ಶಕ್ತಿಗಳ ಮಧ್ಯೆ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಪಾತ್ರವನ್ನೂ ಸಾಬೀತುಪಡಿಸಿದವು. ಭಯೋತ್ಪಾದನೆ, ಸರಕಾರಿ ಯಂತ್ರದ ದುರುಪಯೋಗ ಮತ್ತು ಕಾಂಗ್ರೆಸ್ ಹಾಗೂ ಬಂಡವಾಳಶಾಹಿ ಪತ್ರಿಕೆಯ ಕುಬೇರರು ನಡೆಸಿದ ಅಪಪ್ರಚಾರಗಳಿಂದ ಈ ಚುನಾವಣೆಗಳು ತುಂಬಿ ಹೋಗಿದ್ದವು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಡಬೇಕು. ನಾವೂ ಸಹ ಕೆಲವು ದೌರ್ಬಲ್ಯಗಳನ್ನು ತೋರಿದ್ದೆವು, ಈ ದೌರ್ಬಲ್ಯಗಳನ್ನು ಮುಂದಿನ ದಿನಗಳಲ್ಲಿ ಹೋಗಲಾಡಿಸಬೇಕೆಂದು ನಿರ್ಧಾರ ಮಾಡಿದೆವು.

1957ರ ಚುನಾವಣೆಯ ನಂತರದ ವರ್ಷಗಳಲ್ಲಿ ಪಕ್ಷದ ಸದಸ್ಯತ್ವವನ್ನು ಮತ್ತು ಸಾಮೂಹಿಕ ನೆಲೆಗಟ್ಟನ್ನು ಹೆಚ್ಚಿಸುವ ಹಾಗೂ ವಿಸ್ತಾರಗೊಳಿಸುವ ಕಾರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು. ಅಂದರೆ ಪಕ್ಷದ ಪ್ರಭಾವವನ್ನು ವೃದ್ಧಿಗೊಳಿಸಿ ಸಾಮೂಹಿಕ ಚಳುವಳಿಗಳಲ್ಲಿ ಹೆಚ್ಚೆಚ್ಚು ಜನರು ಭಾಗವಹಿಸುವಂತೆ ಮಾಡಲಾಯಿತು. ರಾಜ್ಯದಲ್ಲಿ 1957ರ ನಂತರದ ಚಳುವಳಿಗಳಲ್ಲಿ (ಅದರಲ್ಲೂ 1959ರ ಆಹಾರ ಚಳುವಳಿಯ ಅವಧಿಯಲ್ಲಿ) ಚಿಮ್ಮಿದ ಉತ್ಸಾಹದಲ್ಲಿ ಆ ಪ್ರಯತ್ನಗಳ ಯಶಸ್ಸನ್ನು ಕಾಣಬಹುದು. ಈ ಎಲ್ಲಾ ಚಳುವಳಿಗಳು ಎಡಪಕ್ಷಗಳ ನೇತೃತ್ವದಲ್ಲೇ ನಡೆದವು. ಆದರೂ ಎಲ್ಲಾ ಎಡ ಪಕ್ಷಗಳೂ ತತ್ವಬದ್ಧ ನಿಲುವು

ಪುಟ 7 ನೋಡಿ

ಸರಕಾರ ಬಿದ್ದರೂ ಬಜೆಟ್ ಅನುಮೋದನೆಯಾಗಲಿ!

ಕೇಂದ್ರದಲ್ಲಿನ ದೇವೇಗೌಡರ ನೇತೃತ್ವದ ಸಂಯುಕ್ತರಂಗ ಸರಕಾರ ಬಿದ್ದು ಹೋಗಿದೆ. ಆದರೆ ಇದೇ ತಿಂಗಳ 21 ರಂದು ಸರಕಾರ ಮಂಡಿಸಿದ ಬಜೆಟ್ಟನ್ನು ಅನುಮೋದಿಸುವ ನಿರ್ಧಾರವನ್ನು ಸಂಸತ್ತು ತೆಗೆದುಕೊಂಡಿದೆ. ಸರಕಾರ ಬಿದ್ದರೂ ಬಜೆಟ್ ಮತ್ತು ಹಣಕಾಸು ಮಸೂದೆ ಪಾಸಾಗಬೇಕೆಂಬುದು ವಿವಿಧ ಬೂರ್ಝ್ವಾ ರಾಜಕೀಯ ಪಕ್ಷಗಳ ಇಚ್ಛೆ. ಅತ್ಯದ್ಭುತ ಬಜೆಟ್ ಎಂದೆಲ್ಲ ಹೊಗಳಿಸಿಕೊಂಡ ಈ ಬಜೆಟ್, ಸರಕಾರ ಬಿದ್ದರೂ (ಬಿದ್ದ ನಂತರ) ಅನುಮೋದನೆ ಪಡೆಯುವಂತಹ ಸುಗುಣಗಳನ್ನೇನನ್ನು ಹೊಂದಿದೆ?

ಬಜೆಟ್ಟಿನ ಮುಖ್ಯ ಒತ್ತು ನೇರ ತೆರಿಗೆಯಲ್ಲಿ ಕಡಿತ. ಇದರಿಂದ ಯಾರಿಗೆ ಲಾಭವಾಗುತ್ತದೆ? ದೇಶದ ಶೇ 10 ರಷ್ಟು ಜನ ಮಾತ್ರ ಆದಾಯ ತೆರಿಗೆ ತೆರುವುದು. ಇವರಲ್ಲಿ ಶೇ 1 ರಷ್ಟು ಜನ ದೊಡ್ಡ ಪ್ರಮಾಣದಲ್ಲಿ ತೆರಿಗೆ ತೆರಬೇಕಾದವರು (ಎಷ್ಟು ತೆರಿಗೆ ತೆರುತ್ತಿದ್ದರು ಎಷ್ಟನ್ನು ತಪ್ಪಿಸಿಕೊಳ್ಳುತ್ತಿದ್ದರು ಎಂಬುದು ಬೇರೆ ಮಾತು) ಈ ಶೇ 1 ರಷ್ಟು ಜನರಿಗೆ ಈ ಬಜೆಟ್ಟಿನಿಂದ ದೊಡ್ಡ ಲಾಭವಾಗಿದೆ. ಇನ್ನು ಶೇ 2 ರಷ್ಟು ಜನರಿಗೆ ತೆರಿಗೆ ಕಡಿತದಿಂದ ಲಾಭವಾದರೂ ಹಣದುಬ್ಬರದಿಂದಾಗಿ ಸರಿಸುಮಾರು ಅಷ್ಟೇನಷ್ಟವಾಗುತ್ತದೆ. ಅಂದರೆ ಇವರಿಗೆ ಲಾಭವೂ ಇಲ್ಲ, ನಷ್ಟವೂ ಇಲ್ಲ. ಇನ್ನುಳಿದ ಶೇ 97 ರಷ್ಟು ಜನರಿಗೆ ಈ ಬಜೆಟ್ಟಿನಿಂದ ಭಾರೀ ನಷ್ಟವೇ. ಯಾಕೆಂದರೆ ಹಣದುಬ್ಬರದ ಹೊಡೆತ ಮಾತ್ರ ಅವರ ಪಾಲು. ಆದಾಯ ತೆರಿಗೆ ಕಡಿತದ ಲಾಭ ಅವರಿಗಿಲ್ಲ. ಉದ್ಯೋಗಗಳ ಕಡಿತದಿಂದಲೂ ಇವರಿಗೆ ತಟ್ಟುತ್ತದೆ ಹಾನಿ.

ಈ ಬಜೆಟ್ಟಿನಿಂದ ರಾಜ್ಯಗಳ ಸಂಪನ್ಮೂಲಗಳಿಗೂ ಹೊಡೆತ ಬೀಳುತ್ತದೆ. ಆದಾಯ ಕರದ ಶೇ 77 ರಷ್ಟು ರಾಜ್ಯಗಳಿಗೆ ಹೋಗುತ್ತದೆ. ಆದಾಯ ಕರದ ಕಡಿತದಿಂದ ಆಗುವ ನಷ್ಟದಲ್ಲಿ ಶೇ 77 ರಷ್ಟನ್ನು ರಾಜ್ಯಗಳು ಹೊರಬೇಕು. ಕಂಪನಿಗಳ ತೆರಿಗೆ, ಆಮದು ಸುಂಕ ಇವುಗಳಲ್ಲಿ ರಾಜ್ಯಗಳಿಗೆ ಪಾಲಿಲ್ಲ. ಈಗ ಹತ್ತನೇ ಹಣಕಾಸು ಆಯೋಗ ಎಲ್ಲ ತೆರಿಗೆಯಲ್ಲಿ ರಾಜ್ಯಗಳಿಗೆ ಪಾಲಿರಬೇಕು ಎಂದಿರುವುದರಿಂದ ರಾಜ್ಯಗಳಿಗೆ ಶೇ 29 ರಷ್ಟು ಪಾಲು ಸಿಗಬಹುದು, ಆದರೆ ಇದರಿಂದ ಒಟ್ಟಾರೆ ಪರಿಣಾಮ ಒಂದೇ.

ಬಜೆಟ್ಟಿನಲ್ಲಿ ಹಣದುಬ್ಬರಕ್ಕೆ ಸಾಕಷ್ಟು ಅವಕಾಶ ನೀಡಿದೆ. ಸಾಗಾಣಿಕೆ ವೆಚ್ಚ ಆಗಲೇ ಹೆಚ್ಚಾಗಿದೆ. ಗೋಧಿ, ಅಕ್ಕಿ ಮತ್ತು ಯೂರಿಯಾದ ಬೆಲೆಗಳನ್ನು ಈಗಾಗಲೇ ಹೆಚ್ಚಿಸಲಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಳ ತಲೆ ಮೇಲೆ ತೂಗುತ್ತಿದೆ. ಶ್ರೀಮಂತರಿಗೆ ಅನುಕೂಲ, ಬಡವರ ಮೇಲೆ ಹೊರೆ. ಇಂತಹ ಬಜೆಟ್ಟು ಇದು. ಆದ್ದರಿಂದಲೇ ಈ ಆಳುವ ಬೂರ್ಝ್ವಾ ಪಕ್ಷಗಳು ಬಜೆಟ್ಟು ಪಾಸು ಮಾಡುವುದರಲ್ಲಿ ಇಂತಹ ಅಸಾಧಾರಣ ಆಸಕ್ತಿ ವಹಿಸಿರುವುದು. ಅಲ್ಲದೆ ಬಂಡವಾಳಿಗರ ಲಾಬಿಯಂತೂ ಈ ಪಕ್ಷಗಳಿಗೆ ದಂಬಾಲು ಬಿದ್ದಿದೆ. ಈ ವಿಷಯದಲ್ಲಿ ಇವರೆಲ್ಲರಲ್ಲಿ ಒಗ್ಗಟ್ಟು. ಹೇಗಿದೆ ಬಂಡವಾಳಿಗರ ನ್ಯಾಯ?

ಬರಗಾಲದ ಬಲಿಯತ್ತ?

ಉದಾರೀಕರಣವೆಂಬ ಬಂಡವಾಳಿಗರ ಸಾಮ್ರಾಜ್ಯಶಾಹಿಗಳ ಲಾಭಕೋರತನದ ಕಾರ್ಯಕ್ರಮ ಭಾರತವನ್ನು ಬರಗಾಲದ ಬಲಿಯತ್ತ ನಿಧಾನವಾಗಿ ಸೆಳೆದೊಯ್ಯುತ್ತಿದೆಯೇ? ಕಳೆದ ಸಾಲಿನಲ್ಲಿ 192 ಕೋಟಿ ಟನ್ನುಗಳಷ್ಟು ದಾಖಲೆ ಆಹಾರ ಧಾನ್ಯಗಳು ಉತ್ಪಾದನೆಯಾಗುತ್ತದೆ ಎಂದು ಉದಾರೀಕರಣವಾದಿಗಳು ಪುಟಿದೆದ್ದು ಹೇಳಿಬಿಡುತ್ತಾರೆ. ಉತ್ಪಾದನೆ ಆಗುತ್ತದೆ ನಿಜ, ಆದರೆ ದೇಶದಒಟ್ಟಾರೆ ಆಹಾರಪರಿಸ್ಥಿತಿಯಲ್ಲೇಕೆಏರುಪೇರಾಗುತ್ತಿದೆ?

ಆಹಾರ ಸುಭದ್ರತೆಯ ದೃಷ್ಟಿಯಿಂದ ದೇಶದ ಗೋಧಿಯ ಶಿಲ್ಕು 37 ದಶಲಕ್ಷಟನ್ನುಗಳಷ್ಟಿರಬೇಕು. ಏಪ್ರಿಲ್ 1ರವೇಳೆಗೆ ಗೋಧಿ ಶಿಲ್ಕು ಈ ಮಿತಿಗಿಂತ ಕೆಳಗೆ ಇಳಿದಿದೆಯಂತೆ. ಈಗಾಗಲೇ ಗೋಧಿಯ ಮಾರುಕಟ್ಟೆ ಅಲ್ಲೋಲಕಲ್ಲೋಲವಾಗಿ ಹೋಗಿದೆ.

ಸರಕಾರ ರೈತರಿಗೆ ನೀಡುವ ಗೋಧಿ ಬೆಲೆಯನ್ನು ಕ್ವಿಂಟಾಲೊಂದಕ್ಕೆ 475 ರೂಪಾಯಿಗಳಿಗೆ ಏರಿಸಿತು. ಇದರಿಂದ ಗೋಧಿಯನ್ನು ಬೆಳೆಯುವುದನ್ನೇ ಬಿಟ್ಟಿರುವ ರೈತರು ಅದನ್ನು ಪುನಃ ಪ್ರಾರಂಭಿಸಬೇಕೆಂಬುದು ಸರಕಾರದ ನಿರೀಕ್ಷೆ. ಆದರೆ ರೈತರು ಈ ಕನಿಷ್ಟ ಬೆಲೆಯನ್ನು ಕ್ವಿಂಟಾಲೊಂದಕ್ಕೆ 615 ರೂಪಾಯಿಗಳಿಗೇರಿಸದೇ ಇದ್ದಲ್ಲಿ ಗೋಧಿಯನ್ನು ಬೆಳೆಯುವುದಿಲ್ಲವೆಂದು ಹೇಳುತ್ತಿದ್ದಾರೆ. ಚಂಢೀಗಡದಲ್ಲಿ ನಡೆದ ರೈತರ ರ್‍ಯಾಲಿಯೊಂದರಲ್ಲಿ ಈ ಬೆದರಿಕೆಯನ್ನು ರೈತರು ಹಾಕಿದ್ದಾರೆ.

ಸರಕಾರ ಈಗಾಗಲೇ 20 ಲಕ್ಷ ಟನ್ನುಗಳಷ್ಟು ಗೋಧಿಯನ್ನು ಆಮದು ಮಾಡಿಕೊಳ್ಳುವ ನಿರ್ಧಾರವನ್ನು ಕೈ ಗೊಂಡಿದೆ. ಇದು ಸಾಲುವುದಿಲ್ಲ. ಕನಿಷ್ಟ 80ರಿಂದ 100 ಲಕ್ಷ ಟನ್ನುಗಳಷ್ಟು ಗೋಧಿಯ ಅವಶ್ಯಕತೆ ಇದೆಯೆಂಬುದು ಒಂದು ಅಂದಾಜು.

ನಾವು ಕಳೆದ ಸಾಲಿನಲ್ಲಿ 19.2 ಕೋಟಿ ಟನ್ನುಗಳಷ್ಟು ಆಹಾರ ಧಾನ್ಯವನ್ನು ಬೆಳೆದಿದ್ದೇವೆ ಎಂದರೆ ನಮಗೆ ಆಹಾರದ ಸಮಸ್ಯೆಯೇ ಇಲ್ಲವೆಂದೇನೂ ಅಲ್ಲವಲ್ಲ. ಇಂದಿನ ಈ ಪರಿಸ್ಥಿತಿ ಉದಾರೀಕರಣದ ನೇರ ಪರಿಣಾಮ. ಉದಾರೀಕರಣವಾದಿಗಳ ಕೈಯಲ್ಲಿ ಇಂತಹ ಸಮಸ್ಯೆಗಳಿಗೆ ಪರಿಹಾರವೂ ಇರುವುದಿಲ್ಲ. ಉತ್ಪಾದನೆಯಾಗದಿದ್ದರೆ ಆಮದು ಮಾಡಿಕೊಳ್ಳಹೋಗುತ್ತಾರೆ. ಆಮದು ಮಾಡಿಕೊಳ್ಳಲು ವಿದೇಶೀ ವಿನಿಮಯ ಬೇಕು. ಅಲ್ಲದೆ ಅಂತರಾಷ್ಟ್ರೀಯ ಬೆಲೆ ಕೈಗೆಟಕುವಂತಿರಬೇಕು. ಸಮಸ್ಯೆಗಳ ಸರಮಾಲೆಯನ್ನೆ ಉದಾರೀಕರಣ ತಂದೊಡ್ಡಿದೆ. ಯಾರಲ್ಲಿದೆ ಇವುಗಳಿಗೆ ಪರಿಹಾರ? ಜನಸಾಮಾನ್ಯರ ಹೆಗಲಿಗೇ ಎಲ್ಲ ಹೊರೆಯನ್ನು ದಾಟಿಸುವ ಪರಿಹಾರವನ್ನು ಬಂಡವಾಳಿಗರು ನೀಡಬಯಸುತ್ತಾರೆ.

> **ಸಿಪಿಐ(ಎಂ) ವಿರೋಧ**
>
> ಒಂದು ಸೋತ ಸರಕಾರದ ಹಣಕಾಸು ಮಸೂದೆಯನ್ನು ಒಂದು ವಿಶೇಷ ಸಂಸತ್ ಅಧಿವೇಶನ ನಡೆಸಿ ಅಂಗೀಕರಿಸಬೇಕೆಂಬ ಪರಿಕಲ್ಪನೆಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಕ್ಷೇಪವೆತ್ತಿದೆ. ಇದು ಅತ್ಯಂತ ಅಸಮರ್ಥನೀಯ, ಸಾವಿರಾರು ಕೋಟಿ ರೂಪಾಯಿಗಳನ್ನು ತೆರಿಗೆ ಲಾಭವನ್ನು ಕಳಕೊಳ್ಳುವ ದೃಷ್ಟಿಯಿಂದ ದೊಡ್ಡ-ಬಂಡವಾಳಶಾಹಿಗಳು ಮತ್ತು ಅವರ ಸಂಸ್ಥೆಗಳ ಒತ್ತಡಕ್ಕೆ ಒಳಗಾಗಿ ಹೀಗೆ ಮಾಡಲಾಗುತ್ತಿದೆ ಎಂದಿರುವ ಪೊಲಿಟ್‌ಬ್ಯೂರೋ ಸಾಂವಿಧಾನಿಕ ಬಿಕ್ಕಟ್ಟು ತಪ್ಪಿಸಲು ಹೀಗೆ ಮಾಡಬೇಕು ಎಂಬುದು ನಿಜವಲ್ಲ ಎಂದು ಅಭಿಪ್ರಾಯಪಟ್ಟಿದೆ.

ದೇಶೀ ಟಯರುಗಳಿಂದ ಗಾಳಿ ಹೋಗುತ್ತದೆ!

ಹೊಸ ಆಮದು ರಫ್ತ ನೀತಿಯಿಂದಾಗಿ ಹಲವು ಭಾರತೀಯ ಉದ್ಯಮಗಳಿಗೆ ಹೊಡೆತ ಬೀಳಲಿದೆ. ಟಯರ್ ಉದ್ಯಮ ಒಂದು ಉದಾಹರಣೆ. ಹೊಸ ಆಮದು ರಫ್ತ ನೀತಿಯ ಪ್ರಕಾರ ಕೆಲವು ಗಾತ್ರದ ಟಯರುಗಳನ್ನು ಮಾತ್ರ ಆಮದು ಮಾಡಿಕೊಳ್ಳ ಬಹುದು. ಆದರೆ ಬಳಸಿದ ಟಯರುಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳಬಹುದು.

ಹಳೆಯದನ್ನು ಆಮದು ಮಾಡಿಕೊಂಡು ಹೊಸದಾಗಿ ಮಾಡುವ ಉದ್ಯಮ ಸ್ವಲ್ಪಮಟ್ಟಿಗೆ ಬೆಳೆಯಬಹುದು. ಆದರೆ ಇದಕ್ಕೆ ತೆರಬೇಕಾದ ಬೆಲೆಯಿಂದ ದೇಶದ ಉದ್ಯಮವೇ ಹಾಳಾಗುವುದು.

ವಿದೇಶಗಳ ಟ್ಯೂಬಿಲ್ಲದ ಟಯರುಗಳು ನಮ್ಮ ದೇಶದ ರಸ್ತೆಗಳಿಗೆ ಸರಿಹೋಗದೆ ಇರಬಹುದು ಎಂದೆಲ್ಲ ವಾದ ಹೂಡಲಾಗುತ್ತಿದೆಯಾದರೂ ವೈಕೆಲಿನ್ ಎಂಬ ಕಂಪನಿ ಆಗಲೇ ಮಾರಾಟವನ್ನು ಪ್ರಾರಂಭಿಸಿ ಬಿಟ್ಟಿದೆಯಂತೆ. ಇನ್ನೂ ಹಲವು ಉದ್ಯಮಗಳು ಈ ಪಟ್ಟಿಗೆ ಸೇರಬಹುದು/ಸೇರಿರಬಹುದು ಅಲ್ಲವೆ?

ಆಮದು – ರಫ್ತು ಪ್ರಪಾತ

ಹೊಸ ಆಮದು-ರಫ್ತು ನೀತಿ ಘೋಷಣೆ ಆಯಿತು ಬಿಡಿ. ಕಳೆದೊಂದು ವರ್ಷದಲ್ಲಿ ಈ ಕ್ಷೇತ್ರದ ಪರಿಸ್ಥಿತಿ ಏನು. 1996-97 ರ ಮೊದಲ ಹನ್ನೊಂದು ತಿಂಗಳುಗಳ ಪರಿಸ್ಥಿತಿ ಈಗ ಲಭ್ಯವಿದೆ. ಕಳೆದ ಹನ್ನೊಂದು ತಿಂಗಳುಗಳಲ್ಲಿ ಆಮದು ಶೇ 7.8 ರಷ್ಟು ಹೆಚ್ಚಾದರೆ ರಫ್ತ ಬರೀ 5.61 ರಷ್ಟು ಹೆಚ್ಚಾಗಿದೆ. ಸದ್ಯಕ್ಕೇನೂ ನಮ್ಮಲ್ಲಿ ವಿದೇಶೀ ವಿನಿಮಯದ ಶಿಲ್ಕು ಸಮಾಧಾನಕರ ಪ್ರಮಾಣದಲ್ಲೇ ಇರುವುದರಿಂದ ಕೂಡಲೇ ಬಿಕ್ಕಟ್ಟು ಉಂಟಾಗದಿರಬಹುದು. ಆದರೆ ಮುಂದೆ?

ಆಮದು ಹೆಚ್ಚಾಗಿರುವುದರಿಂದ ದೇಶದೊಳಗೆ ಔದ್ಯಮಿಕ ಚಟುವಟಿಕೆ ಹೆಚ್ಚಾಯಿತು ಎನ್ನಲಾಗುತ್ತಿದೆ. ಆದರೆ ಈ ಔದ್ಯಮಿಕ ಚಟುವಟಿಕೆ ಹೆಚ್ಚು ಮಾಡಲು ನಾವು ವ್ಯಾಪಾರ ಬಾಕಿ ಬಿಕ್ಕಟ್ಟಿನತ್ತ ಹೋಗುತ್ತಿದ್ದೇವೆ.

ನಮ್ಮ ಆಮದಿನಲ್ಲಿ ಪೆಟ್ರೋಲಿಯಂ ಉತ್ಪನ್ನಗಳದ್ದೇ ಸಿಂಹಪಾಲು. ತೈಲೇತರ ಉತ್ಪನ್ನಗಳ ಆಮದಿನಲ್ಲಿ ಆಗಿರುವ ಹೆಚ್ಚಳ ಬರೀ ಶೇ 0.4 ರಷ್ಟು. ತೈಲ ಆಮದಿನ ಹೊರೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ.

ಔದ್ಯಮಿಕ ಹಿಂಜರಿತ ತಪ್ಪಿಸಲು ಆಮದು ಹೆಚ್ಚು ಮಾಡಿದರೆ ವ್ಯಾಪಾರ ಬಾಕಿ ಹೆಚ್ಚಾಗಿ ವಿದೇಶೀ ವಿನಿಮಯ ಬಿಕ್ಕಟ್ಟು ಉಂಟಾಗುತ್ತದೆ. ಒಂದು ಗಾಯ ಮುಚ್ಚಲು ಇನ್ನೊಂದು ಕಡೆ ಗಾಯ ಮಾಡಿಕೊಂಡಂತೆ ಇದು. ಇದೇ ಬಂಡವಾಳ ಶಾಹಿ ಪರಿಹರಿಸಲಾರದ ಬಿಕ್ಕಟ್ಟು.

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಕರ್ನಾಟಕದ ಗ್ರಾಮೀಣ ಬ್ಯಾಂಕುಗಳ ಸಾಧನೆ

ಗ್ರಾಮೀಣ ಬ್ಯಾಂಕುಗಳು ಹುಟ್ಟಿದಾಗಿನಿಂದಲೂ ಹಾನಿ ಮಾಡುವುದಕ್ಕೆ ಹೆಸರಾಗಿವೆ. ಗ್ರಾಮೀಣ ಬಡವರಿಗೆ ಸಾಲ ನೀಡುವ ಸಂಸ್ಥೆಗಳು ಹಾನಿ ಮಾಡುವುದು ಸಹಜ. ಯಾಕೆಂದರೆ ಬಡವರು ಪಡೆದ ಸಾಲ ಉತ್ಪಾದಕವಾಗಿ ಪ್ರತಿಫಲ ನೀಡುವ ಪರಿಸ್ಥಿತಿ/ವಾತಾವರಣ ದೇಶದ ಆರ್ಥಿಕದಲ್ಲಿ ಇಲ್ಲ. ಹೀಗಿರುವಾಗ ಗ್ರಾಮೀಣ ಬಡವರು ಪಡೆದ ಸಾಲ ಉತ್ಪಾದಕವಾಗುವುದಿಲ್ಲ. ಅದರೂ ರೈತರು/ಗ್ರಾಮೀಣ ಬಡವರು ಸಾಲ ಮರುಪಾವತಿ ಮಾಡಬರುತ್ತಾರೆ.

ಗ್ರಾಮೀಣ ಭಾರತದ ಪರಿಸ್ಥಿತಿಯ ಪ್ರತಿಬಿಂಬದಂತೆ ಗ್ರಾಮೀಣ ಬ್ಯಾಂಕುಗಳು ಹಾನಿಯನ್ನೇ ಮಾಡುತ್ತ ಬಂದಿವೆ. ಉದಾರೀಕರಣದ ಜೊತೆಗೆ ಗ್ರಾಮೀಣ ಬ್ಯಾಂಕುಗಳು ಶ್ರೀಮಂತರಿಗೆ ರೈತರಲ್ಲದ ಇತರರಿಗೂ ಸಾಲ ನೀಡುವ ಅವಕಾಶಗಳು ಬಂದವು.

ಈಗಂತೂ ಒಳ್ಳೆಯ ಸುದ್ದಿಯೇನೆಂದರೆ ಕರ್ನಾಟಕದ 13 ಗ್ರಾಮೀಣ ಬ್ಯಾಂಕುಗಳ ಪೈಕಿ 9 1996 ರ ಸೆಪ್ಟೆಂಬರ್ ವೇಳೆಗೆ ಲಾಭ ತೋರಿಸಿವೆ. ಮಾರ್ಚ್1994ರಲ್ಲಿ ಒಟ್ಟು19.52ಕೋಟಿ ರೂಪಾಯಿಗಳಷ್ಟು ನಷ್ಟ ತೋರಿಸಿದ್ದ ಇವು ಈಗ 11.34 ಕೋಟಿ ರೂಪಾಯಿಗಳಷ್ಟು ನಿವ್ವಳ ಲಾಭ ತೋರಿಸಿವೆ. ಈಗ ಲೋಕಲ್ ಏರಿಯಾ ಬ್ಯಾಂಕುಗಳ ಸ್ಥಾಪನೆಯಾಗುತ್ತಿರುವುದರಿಂದ ಮತ್ತೆ ಈ ಬ್ಯಾಂಕುಗಳಿಗೆ ಸ್ಪರ್ಧೆ ಹೆಚ್ಚಿ ಮತ್ತೆ ಹಾನಿ ಮಾಡಬೇಕಾದ ಪ್ರಸಂಗ ಬರಬಹುದೆಂಬ ಆತಂಕ ಈ ಗ್ರಾಮೀಣ ಬ್ಯಾಂಕುಗಳದ್ದು.

ಎಐಕೆಎಸ್ 60ನೇ ವಾರ್ಷಿಕೋತ್ಸವ ವಿಚಾರ ಸಂಕಿರಣ

ನಿರ್ದಿಷ್ಟ ಪ್ರಶ್ನೆಗಳ ಮೇಲೆ ನಿರ್ದಿಷ್ಟ ಘೋಷಣೆಗಳನ್ನು ರೂಪಿಸಿ

– ಸುರ್ಜಿತ್ ಕರೆ

ಅಖಿಲ ಭಾರತ ಕಿಸಾನ್ ಸಭಾದ 60ನೇ ವಾರ್ಷಿಕೋತ್ಸವದ ನೆನಪಿನ ಅಖಿಲ ಭಾರತ ವಿಚಾರಸಂಕಿರಣ ಏಪ್ರಿಲ್ 5ಹಾಗೂ6ರಂದು ನವದೆಹಲಿಯಲ್ಲಿ ಬಂಗ ಭವನ ಸಭಾಂಗಣ ದಲ್ಲಿ ನಡೆಯಿತು. ಏಪ್ರಿಲ್ 7 ರಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿಕೂಲಿಕಾರರ ಸಂಘದ(ಎಐಡಿಬ್ಲ್ಯೂಯು) ಜನರಲ್ ಕೌನ್ಸಿಲ್‌ಗಳು ಸಭೆ ಸೇರಿ ಈ ವಿಚಾರ ಸಂಕಿರಣರಣದ ತೀರ್ಮಾನಗಳನ್ನು ಚರ್ಚಿಸಿದವು.

ಏಪ್ರಿಲ್ 5 ರಂದು ಹಿರಿಯ ರೈತ ಮುಖಂಡ ಹಾಗೂ ಈಗ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾಗಿರುವ ಹರ್ಕಿಶನ್ ಸಿಂಗ್ ಸುರ್ಜಿತ್ ವಿಚಾರ ಸಂಕಿರಣದ ಉದ್ಘಾಟನಾ ಭಾಷಣ ಮಾಡುತ್ತಾ ಭಾರತದ ವಿಭಿನ್ನ ಭಾಗಗಳಲ್ಲಿ ರೈತರ ವಿಭಿನ್ನ ವಿಭಾಗಗಳ ವಿಭಿನ್ನ ಪರಿಸ್ಥಿತಿಗಳ ನಿರ್ದಿಷ್ಟ ಪ್ರಶ್ನೆಗಳ ಮೇಲೆ ನಿರ್ದಿಷ್ಟ ಘೋಷಣೆಗಳನ್ನು ಎತ್ತಿಕೊಳ್ಳಬೇಕು ಎಂದು ಕಿಸಾನ್ ಸಭಾ ಹಾಗೂ ಕೃಷಿ ಕೂಲಿಕಾರರ ಸಂಘಗಳಿಗೆ ಕರೆ ನೀಡಿತು. ಅದೇ ವೇಳೆಗೆ ಬಡ ರೈತರು ಮತ್ತು ಕೃಷಿ ಕೂಲಿಕಾರರ ಆತಂಕಗಳನ್ನು ಕುರಿತಂತೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಕೇಂದ್ರೀಕರಿಸಬೇಕು ಎಂದೂ ಅವರು ಸಲಹೆ ಮಾಡಿದರು. ಬಿನೋಯ್‌ಕೃಷ್ಣ ಚೌಧರಿ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಹಲವಾರು ಆರ್ಥಿಕ ತಜ್ಞರು ಹಾಗೂ ಕೃಷಿ ಪ್ರಶ್ನೆಗಳ ಮೇಲಿನ ತಜ್ಞರು ಹಲವಾರು ಪ್ರಬಂಧಗಳನ್ನು ಮಂಡಿಸಿದರು. ದೇಶದೆಲ್ಲೆಡೆಯಿಂದ ಬಂದ ಎಐಕೆಎಸ್ ಮತ್ತು ಎಐಡಿಡಬ್ಲ್ಯೂಯು ಕಾರ್ಯಕರ್ತರು ಇವುಗಳ ಮೇಲೆ ಚರ್ಚೆ ನಡೆಸಿದರು.

ಡಾ।। ಪ್ರಭಾತ್ ಪಟ್ನಾಯಕ್ ಮತ್ತು ಡಾ।। ಬಿಪ್ಲವ್ ದಾಸ್ ಗುಪ್ತ ಕೃಷಿಕ ರಂಗದ ಒಟ್ಟಾರೆ ದೃಶ್ಯವನ್ನು ಬಿಂಬಿಸುವ ಪ್ರಬಂಧಗಳನ್ನು ಮಂಡಿಸಿದರೆ, ಡಾ।। ಉತ್ಸಾ ಪಟ್ನಾಯಕ್, ಡಾ।। ಅಭಿಜಿತ್ ಸೆನ್ ಹಾಗೂ ಡಾ।। ಮಾಲವಿಕಾ ದಾಸ್‌ಗುಪ್ತಾ ಭೂ ಸಬಂಧಗಳಲ್ಲಿ ಬದಲಾವಣೆ ಹಾಗೂ ಕೃಷಿ ಕೂಲಿಕಾರರ ಸಮಸ್ಯೆಗಳನ್ನು ಕುರಿತಾದ ಪ್ರಬಂಧಗಳನ್ನು ಮಂಡಿಸಿದರು. ಎರಡನೇ ದಿನ ಕೃಷಿಯ ಮೂಲಭೂತ ರಚನೆಗಳು ಅಂದರೆ ನೀರಾವರಿ, ವಿದ್ಯುತ್, ತಂತ್ರಜ್ಞಾನ ಇತ್ಯಾದಿಗಳನ್ನು ಕುರಿತಂತೆ ಡಾ।। ಚಂದ್ರಶೇಖರ್, ಡಾ।। ಜಯತಿ ಘೋಷ್ ಹಾಗೂ ಡಾ।। ದಿನೇಶ್ ಅಬ್ರೋಲ್ ಪ್ರಬಂಧಗಳನ್ನು ಮಂಡಿಸಿದರು. ಮಾರುಕಟ್ಟೆ, ಬೆಲೆಗಳು, ಸಹಕಾರಿಗಳು, ಸಾಲ ಸೌಲಭ್ಯಗಳು, ಪಂಚಾಯತಿ ಸಂಸ್ಥೆಗಳು ಇತ್ಯಾದಿ ಪ್ರಶ್ನೆಗಳನ್ನು ಕುರಿತಂತೆ ಡಾ।। ಉತ್ಸಾ ಪಟ್ನಾಯಕ್, ಡಾ।। ಬಿಪ್ಲವ್ ದಾಸ್ ಗುಪ್ತಾ, ಪಶ್ಚಿಮ ಬಂಗಾಳದ ಮಂತ್ರಿ ಸೂರ್ಯಕಾಂತ್ ಮಿಶ್ರಾ ಹಾಗೂ ಮೈನುಲ್ ಹಸನ್‌ರವರ ಪ್ರಬಂಧಗಳ ಆಧಾರದಲ್ಲಿ ಚರ್ಚೆ ನಡೆಯಿತು.

ರೈತ ಆಂದೋಲನ ಏನು ಮಾಡಬೇಕಾಗಿದೆ?

ದೇಶದಲ್ಲಿನ ಪ್ರಸ್ತುತ ರಾಜಕೀಯ ಬೆಳವಣಿಗೆಗಳಲ್ಲಿ ವ್ಯಸ್ತರಾಗಿದ್ದರೂ ಹರ್ಕಿಶನ್ ಸಿಂಗ್ ಸುರ್ಜಿತ್ ಒಂದು ಸ್ಫೂರ್ತಿದಾಯಕ ಉದ್ಘಾಟನಾ ಭಾಷಣ ಮಾಡಿದರು. 60 ವರ್ಷಗಳ ತನ್ನ ಅಸ್ತಿತ್ವದಲ್ಲಿ ಕಿಸಾನ್ ಸಭಾದ ಚಟುವಟಿಕೆಗಳ ಸಾಧನೆ ಮತ್ತು ದೌರ್ಬಲ್ಯಗಳ ಒಂದು ಪ್ರಾಮಾಣಿಕ ಹಾಗೂ ವಿಶ್ಲೇಷಣಾತ್ಮಕ ವಿಮರ್ಶೆ ಅವರ ಭಾಷಣದಲ್ಲಿತ್ತು. ಕಿಸಾನ್ ಆಂದೋಲನದ ಆರಂಭದಿಂದಲೇ ಅದರ ಭಾಗವಾಗಿದ್ದ ಸುರ್ಜಿತ್ ದೇಶದಲ್ಲಿ ರೈತ ಹೋರಾಟಗಳ ಇತಿಹಾಸವನ್ನು ಗುರುತಿಸಿದರು. 1934 ರಿಂದ ಈ ಹೋರಾಟಗಳಿಗೆ ನೀಡಿದ ಸಂಘಟಿತ ಸ್ವರೂಪ, 1995 ರ ನಂತರದ ಯುದ್ಧಾನಂತರದ ವರ್ಷಗಳಲ್ಲಿ ವೀರ ತೆಲಂಗಾಣಾ ಸಶಸ್ತ್ರ ಹೋರಾಟಗಳವರೆಗೆ ದೇಶದ ವಿವಿಧ ಭಾಗಗಳಲ್ಲಿ ಕಿಸಾನ್ ಆಂದೋಲನ ವಹಿಸಿದ ಮಹಾನ್ ಪಾತ್ರವನ್ನು ಅವರು ನೆನಪಿಸಿದರು.

ಸರಿಯಾದ ಸಮಯದಲ್ಲಿ ಸರಿಯಾದ ಘೋಷಣೆ

ಆದರೆ ರೈತಾಪಿ ಜನಗಳ ನಡುವೆ ಅತ್ಯಂತ ಶಕ್ತಿಶಾಲಿ ಸಂಘಟನೆಯಾಗಿದ್ದರೂ ಎಐಕೆಎಸ್ ತನ್ನ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು ದೇಶದ ರಾಜಕೀಯ ಹಾಗೂ ಆರ್ಥಿಕ ಬೆಳವಣಿಗೆಗಳ ಮೇಲೆ ಪ್ರಭಾವ ಬೀರಲು ಅದಕ್ಕಾಗಲಿಲ್ಲ. ಈ ವಿಫಲತೆಯ ಕಾರಣಗಳನ್ನು ವಿಶ್ಲೇಷಿಸುತ್ತಾ ಸುರ್ಜಿತ್ ಕಿಸಾನ್ ಸಭಾಕ್ಕೆ ಸದಾ ಕಾಲವೂ ಸರಿಯಾದ ಸಮಯದಲ್ಲಿ ಸರಿಯಾದ ಘೋಷಣೆಗಳನ್ನು ಕೊಡಲು ಸಾಧ್ಯವಾಗಲಿಲ್ಲ ಎಂದರು. ರೈತಾಪಿ ಜನಗಳ ಪ್ರಜ್ಞೆಯ ಮಟ್ಟ, ಅವರ ನಡುವಿನ ವಿವಿಧ ಸ್ತರಗಳು ಹಾಗೂ ದೇಶದ ವಿವಿಧ ಭಾಗಗಳಲ್ಲಿನ ವಿಭಿನ್ನ ಸನ್ನಿವೇಶಗಳನ್ನು ಗಮನಕ್ಕೆ ತಗೊಂಡು ಇಂತಹ ಘೋಷಣೆಗಳನ್ನು ರೂಪಿಸಬೇಕಾಗಿತ್ತು. ಸ್ವಾತಂತ್ರ್ಯಾನಂತರ ದ [illegible] ಬಂಡವಾಳಶಾಹಿ-ಭೂಮಾಲಕರು ಪ್ರಭುತ್ವ ಯಂತ್ರವನ್ನು ಕೈವಶ ಮಾಡಿಕೊಂಡ ನಂತರ ಮೂಡಿ ಬಂದ ವಾಸ್ತವತೆಗಳನ್ನು ಅರಿಯುವಲ್ಲಿಯೂ ಕಿಸಾನ್ ಸಭಾ ವಿಫಲವಾಯಿತು. ಮಧ್ಯಮ ಮತ್ತು ಶ್ರೀಮಂತ ರೈತಾಪಿಯ ಹೊಸ ವಿಭಾಗಗಳು ಮೂಡಿ ಬಂದರೂ ಭೂಮಾಲಕತ್ವ ರದ್ದತಿ, ಉಳುವವನಿಗೇ ಭೂಮಿಯಂತಹ ಘೋಷಣೆಗಳಿಗೇ ಅದು ಅಂಟಿಕೊಂಡಿತು. ಈ ಹೊಸ ವಿಭಾಗಗಳನ್ನು ಈ ಘೋಷಣೆಗಳ ಸುತ್ತ ಅಣಿನೆರೆಸುವುದು ಸಾಧ್ಯವಿರಲಿಲ್ಲ.

ವಾರಣಾಸಿ ಸಮ್ಮೇಳನ

1979 ರ ವಾರಣಾಸಿ ಸಮ್ಮೇಳನದಲ್ಲಷ್ಟೇ ಕಿಸಾನ್ ಸಭಾ ಈ ಬದಲಾವಣೆಗಳನ್ನು ಗುರುತಿಸಿ ಭೂಮಿಯ ಮೂಲಭೂತ ಪ್ರಶ್ನೆಯೊಂದಿಗೆ ಇತರ ಬೇಡಿಕೆಗಳನ್ನೂ ಎತ್ತಿಕೊಳ್ಳಲು ನಿರ್ಧರಿಸಿತು. ಆದರೆ ಐದು ವರ್ಷಗಳ ಹಿಂದೆ ಹಿಸ್ಸಾರ್‌ನಲ್ಲಷ್ಟೇ ಎಐಕೆಎಸ್ ಕೃಷಿ ವಲಯದಲ್ಲಾಗಿರುವ ದೊಡ್ಡ ಬದಲಾವಣೆಗಳು ಹಾಗೂ ಬೇಕಾದ್ದಂತೆ

ಪುಟ 8 ನೋಡಿ

ದೇಶದೊಳಗೆ



ಪಶ್ಚಿಮ ಬಂಗಾಳ

ಜಿಲ್ಲಾ ಮಟ್ಟದ ಯೋಜನೆಯನ್ನು ಬಲಪಡಿಸಲು ಎಡರಂಗದ ಕ್ರಮ

ಏಪ್ರಿಲ್ 6 ರಂದು ಸಭೆ ಸೇರಿದ ಪಶ್ಚಿಮ ಬಂಗಾಳದ ಎಡರಂಗ ಜಿಲ್ಲಾ ಮಟ್ಟದ ಯೋಜನಾ ಸಲಹಾಕಾರರ ಸಮಿತಿ(DPCC)ಗಳನ್ನು ಪುನರುಜ್ಜೀವನಗೊಳಿಸಿ ಯೋಜನಾ ಪ್ರಕ್ರಿಯೆಯನ್ನು ಬಲಪಡಿಸಲು ನಿರ್ಧರಿಸಿತು. ಇದು ಜಿಲ್ಲಾ ಮಟ್ಟದ ಯೋಜನಾ ರೂಪೀಕರಣವನ್ನು ಇನ್ನಷ್ಟು ವಿಸ್ತರಿಸುತ್ತದೆ ಎಂದು ಎಡರಂಗದ ಅಭಿಪ್ರಾಯ.

ಈ ಬಗ್ಗೆ ಐಎನ್ಎಸ್ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡುತ್ತಾ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಬಿಮಾನ್ ಬಸು ಈ DPCC ಗಳಲ್ಲಿ ಸಂಬಂಧಪಟ್ಟ ಜಿಲ್ಲೆಯಲ್ಲಿ ಪಂಚಾಯತ್‌ಗಳು, ಮುನಿಸಿಪಾಲಿಟಿಗಳು, ವಿಧಾನ ಸಭೆ ಹಾಗೂ ಸಂಸತ್ತಿನ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ ಎಂದಿದ್ದಾರೆ. ಹೀಗೆ ಪಂಚಾಯಿತಿನಿಂದ ಸಂಸತ್ತಿನವರೆಗೆ ಯಾವುದೇ ಹಂತದಲ್ಲಿ ಪ್ರಾತಿನಿಧ್ಯವಿರುವ ಎಲ್ಲಾ ರಾಜಕೀಯ ಪಕ್ಷಗಳು ಯೋಜನಾ ಪ್ರಕ್ರಿಯೆಯಲ್ಲಿ ಒಳಗೊಳ್ಳುತ್ತವೆ.

ಈ ಎಡರಂಗದ ಸಭೆಯಲ್ಲಿ ಮುಖ್ಯಮಂತ್ರಿ ಜ್ಯೋತಿಬಸುರವರಲ್ಲದೆ ವಿಶೇಷ ಆಹ್ವಾನಿತರಾಗಿ ಹಣಕಾಸು ಮಂತ್ರಿ ಅಸೀಮ್ ದಾಸ್ ಗುಪ್ತಾ ಕೂಡಾ ಭಾಗವಹಿಸಿದ್ದರು. ನಂತರ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ ಅಸೀಮ್ ದಾಸ್ ಗುಪ್ತಾ ಈ DPCC ಗಳನ್ನು ಕೇಂದ್ರದ ಕಾಂಗ್ರೆಸ್ ಸರಕಾರ 1992 ರಲ್ಲಿ ನಗರಪಾಲಿಕಾ ಮತ್ತು ಪಂಚಾಯತೀ ರಾಜ್ಯ ಕಾನೂನುಗಳನ್ನು ಪಾಸು ಮಾಡುವಾಗ ರದ್ದು ಮಾಡಿತು ಎಂದು ನೆನಪಿಸಿದರು. ಎಡರಂಗ ಜಿಲ್ಲಾ ಯೋಜನಾ ಆಯೋಗದೊಂದಿಗೆ ಈ DPCC ಗಳನ್ನು 1985 ರಲ್ಲಿ ಎಡರಂಗ ಸರಕಾರ ರಚಿಸಿತ್ತು. ಈಗ DPCC ಯನ್ನು ಪುನರುಜ್ಜೀವನಗೊಳಿಸಿ ಇದರಲ್ಲಿ ಜನಪ್ರತಿನಿಧಿಗಳ ವ್ಯಾಪಕ ಭಾಗವಹಿಸುವಿಕೆಯಿರಲು ಅವಕಾಶ ಮಾಡಿಕೊಡಲಾಗಿದೆ. 1996 ರಲ್ಲಿ ಹಿಂದಿಗಿಂತ ಕೆಲವು ಹೆಚ್ಚು ಸೀಟುಗಳನ್ನು ಪಡೆದ ಕಾಂಗ್ರೆಸ್ ಎಂ.ಎಲ್.ಎ.ಗಳು ಜಿಲ್ಲಾ ಯೋಜನೆಯ ಯಾವುದಾದರೊಂದು ಹಂತದಲ್ಲಿ ತಮ್ಮನ್ನು ಒಳಗೊಳ್ಳಬೇಕೆಂದು ಕೇಳುತ್ತಿದ್ದರು. ಆದರೆ DPCCಗಳ ಪುನರ್ರಚನೆ 1985ರ ಮಾದರಿಯಲ್ಲೇ ಆಗುತ್ತಿರುವುದರಿಂದ ಯಾವುದೇ ಒತ್ತಡಕ್ಕೆ ತಲೆಬಾಗುವ ಪ್ರಶ್ನೆಯೇ ಇಲ್ಲ ಎಂದು ದಾಸ್ ಗುಪ್ತಾ ಸ್ಪಷ್ಟಪಡಿಸಿದರು. ಹೊಸ ವ್ಯವಸ್ಥೆಯಲ್ಲಿ ಜಿಲ್ಲಾ ಯೋಜನಾ ಆಯೋಗ ಈ ಜಿಲ್ಲಾ ಯೋಜನಾ ಸಲಹಾಕಾರ ಸಮಿತಿಯ ಕಾರ್ಯಕಾರಿ ಅಂಗವಾಗಿ ಕೆಲಸ ಮಾಡುವುದೆಂದು ಅವರು ಹೇಳಿದರು.

ಸಂವಿಧಾನದ 73 ನೇ ತಿದ್ದುಪಡಿ ಹಾಗೂ 1995-96ರ ರಾಜ್ಯಮಟ್ಟದ ಹಣಕಾಸು ಆಯೋಗದ ಶಿಫಾರಸ್ಸುಗಳ ಪ್ರಕಾರ ರಾಜ್ಯ ತೆರಿಗೆ ವಸೂಲಿಯ 16% ನೇರವಾಗಿ ಜಿಲ್ಲೆಗಳಿಗೆ, ಹಣಕಾಸಿನ 30% ಜಿಲ್ಲಾ ಪರಿಷತ್ತುಗಳಿಗೆ 20% ಪಂಚಾಯತು ಸಮಿತಿಗಳಿಗೆ ಹಾಗೂ ಉಳಿದ 50% ಗ್ರಾಮ ಪಂಚಾಯತಿಗಳಿಗೆ ಹೋಗುತ್ತದೆ. ಹೀಗೆ ಹಣಕಾಸಿನ ವಿಕೇಂದ್ರೀಕರಣದಲ್ಲಿ ಸ್ಥಳೀಯ ಸಂಸ್ಥೆಗಳ ಪಾಲು ಮತ್ತು ಗ್ರಾಂಟ್‌ಗಳು ಇವೆರಡೂ ಸೇರಿವೆ ಎಂದು ಹಣಕಾಸು ಮಂತ್ರಿಗಳು ಹೇಳಿದರು. ಅಗತ್ಯ ಆಧಾರಿತ ಸೂಚ್ಯಂಕದ ಮೇಲೆ ಇಡೀ ಖರ್ಚು ವ್ಯವಸ್ಥೆಯನ್ನು ಕೂಡಾ ರೂಪಿಸಲಾಗಿದೆ. ಜಿಲ್ಲಾ ಆಡಳಿತಕ್ಕೆ ಅಧಿಕಾರಿಗಳ, ನೌಕರರನ್ನು ಕಳಿಸುವ ಹಣಕಾಸಿನ ವಿಕೇಂದ್ರೀಕರಣದ ಕೆಲಸ ಈಗಾಗಲೇ ಆರಂಭಿಸಲಾಗಿದೆ ಎಂದು ಅಸೀಮ್ ದಾಸ್ ಗುಪ್ತಾ ತಿಳಿಸಿದರು.



ಬಿಹಾರ್:ರಣಬೀರ್ ಸೇನೆಯ ಕ್ರಿಮಿನಲ್‌ಗಳನ್ನು ಬಂಧಿಸಿ – ಸಿಪಿಐ(ಎಂ) ಒತ್ತಾಯ

ಭೂಮಾಲಕರ ಕಾನೂನು ಬಾಹಿರ ಪಡೆ ರಣಬೀರ್ ಸೇನಾದ ಮಂದಿ ಮಾರ್ಚ್ 23ರಂದು ಬಿಹಾರದ ಹೈವಾಸ್‌ಪುರ ಎಂಬ ಹಳ್ಳಿಯಲ್ಲಿ ಅಮಾನುಷವಾಗಿ ಕೊಂದು ಹಾಕಿದ ಹಾಗೂ ಗಾಯಗೊಳಿಸಿದ ಜನರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ, ಹೇಗೋ ಬದುಕು ಸಾಗಿಸುತ್ತಿದ್ದ ಮುಗ್ಧರು, ಕಡುಬಡವ ಭೂಹೀನ ಕೃಷಿ ಕಾರ್ಮಿಕರು. ಈ ಅಂಶ ಸಿಪಿಐ(ಎಂ) ನ ಬಿಹಾರ ರಾಜ್ಯ ಸಮಿತಿ ನೇಮಿಸಿದ್ದ ತಂಡದ ತನಿಖೆಯಿಂದ ಬೆಳಕಿಗೆ ಬಂದಿದೆ. ಸಿಪಿಐ(ಎಂ) ಶಾಸಕ ರಾಮದೇವ್ ವರ್ಮಾ ಹಾಗೂ ಸರ್ವೋದಯ ಶರ್ಮಾ ಈ ಗ್ರಾಮಕ್ಕೆ ಭೇಟಿ ನೀಡಿ ತನಿಖೆ ನಡೆಸಿದ ಮೇಲೆ ಈ ತೀರ್ಮಾನಕ್ಕೆ ಬಂದಿದ್ದಾರೆ.

ಸ್ಥಳೀಯ ಜನರೊಡನೆ ವ್ಯಾಪಕವಾಗಿ ಮಾತನಾಡಿ ಈ ತಂಡ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಕಾಬ್-ನಿಕಾರ್‌ಪುರ್ ಗ್ರಾಮದ ಕುಖ್ಯಾತ ಕ್ರಿಮಿನಲ್ ಲಾಂಗ್ದಾ ಸಿಂಗ್ ಈ ಅಮಾನುಷ ಕೃತ್ಯ ನಡೆಸಿದ. ಈತ ಈಗ ರಣಬೀರ್ ಸೇನಾದ ಏರಿಯಾ ಕಮಾಂಡರ್ ಎಂದು ಹೇಳುತ್ತಾರೆ.

ಮಾರ್ಚ್23 ರ ರಾತ್ರಿ ಜನ ಹೋಳೀ ಹಬ್ಬ ಆಚರಿಸುತ್ತಿದ್ದಾಗ ಹೈವಾಸ್ ಪುರದ ಮುಶಾಹರ್ ತೋಲಾಕ್ಕೆ ತನ್ನ ಒಬ್ಬ ಸಹಾಯಕನೊಂದಿಗೆ ಬಂದ. ತನಗೆ ಚಿರಪರಿಚಿತರಾದ ಕೆಲವು ಕೃಷಿ ಕಾರ್ಮಿಕರನ್ನು ಕರೆದು ತಕ್ಷಣ ತನ್ನ ಹಳ್ಳಿಗೆ ಕೆಲಸಕ್ಕೆ ಬರಬೇಕು ಎಂದ. 11 ಕೃಷಿಕಾರ್ಮಿಕರು ಆತನೊಡನೆ ಹೊರಟರು. ಅವರು ಗೋಧಿ ಗದ್ದೆಯ ನಡುವಿನಿಂದ ಹಾದು ಹೋಗುವಾಗ ಅಲ್ಲಿ ಮೊದಲೇ ಅಡಗಿಕೊಂಡಿದ್ದ ನೂರಾರು ರಣಬೀರ್ ಸೇನೆಯ ಸಶಸ್ತ್ರ ಮಂದಿ ಈ ಮುಗ್ಧ ನಿಸ್ಸಹಾಯಕ ಕೃಷಿ ಕಾರ್ಮಿಕರನ್ನು ಹಿಡಿದು ಅವರ ಕೈಗಳನ್ನು ಹಿಂದಕ್ಕೆ ಕಟ್ಟಿ ಒಂದೂವರೆ ಕಿಲೋಮೀಟರ್ ದೂರದ ನಿರ್ಜನ ಪ್ರದೇಶಕ್ಕೊಯ್ದು ನಿರ್ದಯವಾಗಿ ಅವರನ್ನು ಗುಂಡಿಟ್ಟು ಕೊಂದರು. ಹೀಗೆ ಕೊಲೆಯಾದವರೆಲ್ಲಾ ಮಾಂಝಿ ಎಂಬ ದಲಿತ ಜಾತಿಗೆ ಸೇರಿದ ಕಡುಬಡವರು. 18 ರಿಂದ 50 ರ ವರೆಗಿನ ವಯಸ್ಸಿನ ಕೃಷಿ ಕಾರ್ಮಿಕರ ಹೆಸರು ಹಾಗೂ ವಯಸ್ಸಿನ ಪಟ್ಟಿಯನ್ನು ಸಿಪಿಐ(ಎಂ) ತಂಡ ನೀಡಿದೆ. ತೊಡೆಯೊಳಗೆ ಬುಲೆಟ್ ಹೊಕ್ಕರೂ ತಪ್ಪಿಸಿಕೊಂಡ 16 ವರ್ಷದ ರಮೇಶ್ ಮಾಂಝಿ ಅಲ್ಲಿಂದ ಓಡಿಬಂದು ಗ್ರಾಮಸ್ಥರಿಗೆ ಈ ಕ್ರೂರ ಕೃತ್ಯದ ಬಗ್ಗೆ ತಿಳಿಸಿದ.

ಸತ್ತವರೆಲ್ಲಾ ಕಡುಬಡವರು. ಬಾಗಿಲುಗಳೇ ಇಲ್ಲದ ಗುಡಿಸಲುಗಳಲ್ಲಿ ವಾಸಿಸುವವರು. ಅವರ ಸರಾಸರಿ ದಿನಗೂಲಿ ಕೇವಲ 10-12 ರೂ. ಕಬ್‌ನಿಸಾರ್‌ಪುರದ ಕೆಲವು ಜನರ ಕಾನೂನು ಬಾಹಿರ ಹತೋಟಿಯಲ್ಲಿದ್ದ ಕೃಷಿಯೇತರ ಜಮೀನಿನಲ್ಲಿ ವಾಸವಾಗಿದ್ದವರು. ಸರಕಾರದ ಬಳಿ ಹಲವಾರು ಬಾರಿ ಅಹವಾಲು ಒಯ್ದು ಕಾಣಬೇಕಾದವರನ್ನೆಲ್ಲಾ ಕಂಡರೂ ಭೂಮಾಲಕ-ಪರ ಅಧಿಕಾರಶಾಹಿ ಇವರಿಗೆ ಮನೆ ಪಟ್ಟಾವನ್ನು ನಿರಾಕರಿಸಿತ್ತು.

ಜಲ್ಪುರಾ ಗ್ರಾಮದಲ್ಲಿ ಸಿಪಿಐ(ಎಂ.ಎಲ್) ಬೆಂಬಲಿಗರು ನಾಲ್ಕು ಮೇಲ್ಜಾತಿ ಜನರ ಕೊಲೆ ಮಾಡಿದ ನಂತರ ರಣಬೀರ್ ಸೇನಾದ ಮಂದಿ ಭಯೋತ್ಪಾದನೆಗೆ ಇಳಿದದ್ದು ಸಿಪಿಐ(ಎಂ) ತಂಡದ ತನಿಖೆಯಿಂದ ದೃಢಪಟ್ಟಿದೆ. ಈ ವರ್ಷ ಹೋಳಿಯಲ್ಲಿ ರಕ್ತದೋಕುಳಿ ಹರಿಸುತ್ತೇವೆ ಎಂದು ಅವರು ಬಹಿರಂಗವಾಗಿಯೇ ಹೇಳುತ್ತಿದ್ದರಂತೆ. ಹತ್ತು ಮುಗ್ಧ, ನಿಸ್ಸಹಾಯಕ ಹರಿಜನರ ಈ ಹೇಡಿತನದ ಕೊಲೆ ರಾಜ್ಯ ಸರಕಾರದ, ಆಡಳಿತದ, ಪೋಲೀಸರ ಸಂಪೂರ್ಣ. ವಿಫಲತೆಗೆ ಸಾಕ್ಷಿ. ಯಾವುದೇ ಪ್ರಜಾಸತ್ತಾತ್ಮಕ ಸರಕಾರಕ್ಕೆ ನಾಚಿಕೆಗೇಡಿನ ವಿಷಯ ಎಂದು ಸಿಪಿಐ(ಎಂ) ತಂಡ ಅಭಿಪ್ರಾಯ ಪಟ್ಟಿದೆ. ಅಲ್ಲಿ ಭಯೋತ್ಪಾದನೆ ಯಾವ ಮಟ್ಟ ತಲುಪಿದೆಯೆಂದರೆ ಮುಶಾಹರ್ ಜನ ರಾತ್ರಿ ಕಳೆಯಲು ಗ್ರಾಮದ ಮುಖ್ಯ ಭಾಗಕ್ಕೆ ಬರುತ್ತಾರೆ.

ಸರಕಾರ ಈಗಿನ ಭೂ ಸುಧಾರಣಾ ಕಾನೂನುಗಳಲ್ಲಿ ತೀವ್ರ ಬದಲಾವಣೆ ಮಾಡಿ ಭೂ ಮಾಲಕರ ಅಧೀನದಿಂದ ಮಿಗುತೆ ಭೂಮಿಯನ್ನು ಹಾಗೂ ಸರಕಾರೀ ಜಮೀನುಗಳನ್ನು ಕೈವಶ ಮಾಡಿಕೊಂಡು ಬಡ ರೈತರು ಮತ್ತು ಕೃಷಿ ಕಾರ್ಮಿಕರಲ್ಲಿ ಹಂಚದಿದ್ದರೆ ಇಂತಹ ಘಟನೆಗಳು ಮತ್ತೆ ಮತ್ತೆ ಸಂಭವಿಸುತ್ತವೆ ಎಂದೂ ಸಿಪಿಐ(ಎಂ) ಎಚ್ಚರಿಸಿದೆ. ರಾಜ್ಯ ಸರಕಾರ ತನ್ನ ಆಡಳಿತವನ್ನು ಸಕ್ಷಮಗೊಳಿಸಿ, ಈಗಿರುವ ಅರಾಜಕತೆಯನ್ನು ನಿವಾರಿಸಿ ಕೃಷಿ ಕಾರ್ಮಿಕರಿಗೆ ಪಟ್ಟಾ ನೀಡಬೇಕು. ಕನಿಷ್ಟ ಕೂಲಿ ಸಿಗುವಂತೆ ಮಾಡಬೇಕು ಹಾಗೂ ಅವರ ವಿರುದ್ಧ ಅತ್ಯಾಚಾರ ಎಸಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದಿರುವ ಸಿಪಿಐ(ಎಂ) ಈ ಕೆಳಗಿನ ಬೇಡಿಕೆಗಳನ್ನಿಟ್ಟಿದೆ. 1. ರಣಬೀರ್ ಸೇನಾದ ಮುಖ್ಯಸ್ಥ ಲಕ್ಷ್ಮಣ್ ಸಿಂಗ್ ಮತ್ತು ಏರಿಯಾ ಕಮಾಂಡರ್ ಅನಿಸಿಕೊಂಡಿರುವ ಲಂಗ್ದಾ ಸಿಂಗ್‌ನನ್ನು ತಕ್ಷಣ ಬಂಧಿಸಿ ಅವರ ಬಂದೂಕು ಲೈಸೆನ್ಸ್‌ಗಳನ್ನು ರದ್ದು ಮಾಡಬೇಕು. ಒಂದು ವಿಶೇಷ ಕಾರ್ಯಕ್ರಮ ಏರ್ಪಡಿಸಿ ಎಲ್ಲಾ ಭೂಮಾಲಕರ ಮನೆಗಳಲ್ಲಿರುವ ಎಲ್ಲಾ ಕಾನೂನು ಬಾಹಿರ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಳ್ಳಬೇಕು.

2. ಕೊಲೆಯಾದ ಎಲ್ಲರ ಹಾಗೂ ಗಾಯಗೊಂಡ ರಮೇಶ್ ಮಾಂಝಿಯ ಕುಟುಂಬದವರಿಗೆ ತಲಾ ಎರಡು ಲಕ್ಷ ರೂಪಾಯಿಗಳ ಪರಿಹಾರ ನೀಡಬೇಕು. ಅವರನ್ನು ಅವಲಂಬಿಸಿದವರಿಗೆ ಉದ್ಯೋಗ ಒದಗಿಸಬೇಕು. ಮುಶಾಹರ್ ಟೋಲಾದ ಎಲ್ಲಾ ನಿವಾಸಿಗಳಿಗೆ ಹಾಗೂ ಸುತ್ತಲಿನ ಎಲ್ಲಾ ಕೃಷಿಯೇತರ ಜಮೀನಿಗೆ ಇಂದಿರಾ ಆವಾಸ್ ಯೋಜನೆಯ ಪ್ರಕಾರ ಮನೆ ಪಟ್ಟಾ ನೀಡಬೇಕು.

3. ಹೈವಾಸ್ ಪುರ ಗ್ರಾಮದ ಮುಖ್ಯಭಾಗದ ಹೊರಗಿರುವ ಪೋಲೀಸ್ ಕ್ಯಾಂಪನ್ನು ಮುಶಾಹರ್ ಟೋಲಾಕ್ಕೆ ಖಾಯಂ ಆಗಿ ವರ್ಗಾಯಿಸಬೇಕು.

ಬುಡಕಟ್ಟು ಉಪಯೋಜನೆಯ ಜಾರಿಯಲ್ಲಿ ತ್ರಿಪುರಾಕೆ ಮೊದಲ ಸ್ಥಾನ

ಹೀಗೆಂದು ಸಾರಿದವರು ಕೇಂದ್ರ ಕಲ್ಯಾಣ ಮಂತ್ರಿ ಬಿ.ಎಸ್.ರಾಮೂವಾಲಿಯಾ. ಏಪ್ರಿಲ್ 4 ಹಾಗೂ 5 ರಂದು ತ್ರಿಪುರಾಕ್ಕೆ ಭೇಟಿ ನೀಡಿದ್ದ ಅವರು ಸಮಾಜದ ಹತಭಾಗ್ಯ ಹಿಂದುಳಿದ ವಿಭಾಗಗಳ ಕಲ್ಯಾಣಕ್ಕೆಂದು ಕೇಂದ್ರ ನೀಡುವ ಹಣವನ್ನು ತ್ರಿಪುರಾದ ಎಡರಂಗ ಸರಕಾರ ಉಪಯೋಗಿಸಿಕೊಂಡ ರೀತಿ ವಿಶಿಷ್ಟವಾದುದು ಎಂದು ಹೊಗಳಿದರು. ತ್ರಿಪುರಾ ಸರಕಾರದ ಈ ಸಾಧನೆಗೆ ಬಹುಮಾನವಾಗಿ 15 ರಿಂದ 50 ಲಕ್ಷ ರೂಪಾಯಿಗಳ ವಿಶೇಷ ಹಣಕಾಸು ಬಹುಮಾನ ನೀಡುವುದಾಗಿ ಅವರು ಪ್ರಕಟಿಸಿದರು.

ತ್ರಿಪುರಾ ಮತ್ತು ಅಲ್ಲಿನ ಜನರ ಕಲ್ಯಾಣಕ್ಕೆ ಯಾವ್ಯಾವ ನಿರ್ದಿಷ್ಟ ಯೋಜನೆಗಳನ್ನು ರೂಪಿಸಲಾಗುವುದೆಂದು ನಿರ್ಧರಿಸಲು ಈ ಬೇಟಿ ನೀಡಿರುವುದಾಗಿ ಹೇಳಿದ ಮಂತ್ರಿಗಳು, ಹಣಕಾಸು ಕ್ರಮಗಳು ಹಾಗೂ ಯೋಜನೆಗಳನ್ನು ಪ್ರಕಟಿಸಿದರು. ಇಂತಹ ಕೇಂದ್ರೀಯ ಕ್ರಮಗಳು ಮತ್ತು ಯೋಜನೆಗಳನ್ನು ಜಾರಿಗೆ ತರುವಲ್ಲಿ ತ್ರಿಪುರಾ ಸರಕಾರದ ಅತ್ಯುತ್ತಮ ಸಾಧನೆಯಿಂದಾಗಿಯೇ ಈ ಉಗ್ರಗಾಮಿಗಳ ಹಿಂಸಾಚಾರದಿಂದ ಪೀಡಿತವಾದ ರಾಜ್ಯಕ್ಕೆ ಅಭಿವೃದ್ಧಿಗೆ ಹಣ ಒದಗಿಸುವಲ್ಲಿ ಹೆಚ್ಚು ಉದಾರಿಯಾಗುವ ಸ್ಫೂರ್ತಿ ಕೇಂದ್ರ ಸರಕಾರಕ್ಕೆ ಉಂಟಾಗಿದೆ ಎಂದು ಅವರು ಹೇಳಿದರು.

3000 ಮಹಿಳಾ ಪೋಲೀಸರ ನೇಮಕ ಕೇರಳ ಸರಕಾರದ ಪ್ರಯತ್ನ

ಕೇರಳದಲ್ಲಿ ಈಗ ಕೇವಲ 525 ಮಹಿಳಾ ಪೋಲಿಸರಿದ್ದಾರೆ. 3000 ಮಹಿಳಾ ಕಾನ್‌ಸ್ಟೇಬಲ್‌ಗಳ ನೇಮಕ ಮಾಡುವಂತೆ ಈಗಾಗಲೇ ತಮ್ಮ ಸರಕಾರ ಪಬ್ಲಿಕ್ ಸರ್ವಿಸ್ ಕಮಿಷನ್ ಜತೆ ಮಾತನಾಡಿದೆ ಎಂದು ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್ ತಿಳಿಸಿದರು. ಅವರು ಕೋಳಿಕೋಡ್‌ನಲ್ಲಿ ಒಂದು 'ವನಿತಾ ಪೋಲೀಸ್ ಸ್ಟೇಷನ್' ಉದ್ಘಾಟಿಸಿ ಮಾತನಾಡುತ್ತಿದ್ದರು. ಪೋಲೀಸ್ ಪಡೆಯಲ್ಲಿ 10:1 ಪ್ರಮಾಣದಲ್ಲಿ ಮಹಿಳೆಯರಿರಬೇಕೆಂದು ತಮ್ಮ ಸರಕಾರ ನಿರ್ಧರಿಸಿರುವುದಾಗಿ ಪ್ರಕಟಿಸಿದ ನಾಯನಾರ್‌ರವರು ಪಂಚಾಯತಿ ರಾಜ್ಯ ಸಂಸ್ಥೆಗಳಲ್ಲಿ ಈಗಾಗಲೇ ಮೀಸಲಾತಿಯನ್ನು ಕೇರಳ ಸರಕಾರ ಜಾರಿಗೆ ತಂದಿದೆ ಹಾಗೂ ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡುವ ಬಗ್ಗೆ 'ವನಿತಾ ಆಯೋಗ'ವೊಂದನ್ನು ರಚಿಸಿದೆ ಎಂದು ಹೇಳಿದರು.

ಸಮಾಜವಾದೀ ಪಕ್ಷದ ಕಾರ್ಯಕರ್ತರ ಹತ್ಯೆ – ಸಿಪಿಐ(ಎಂ) ಖಂಡನೆ

ಬಿಜೆಪಿ-ಬಿಎಸ್‌ಪಿ ಸರಕಾರ ಬಂದ ಮೇಲೆ ಉತ್ತರ ಪ್ರದೇಶದಲ್ಲಿ ಸಮಾಜವಾದೀ ಪಕ್ಷದ ಕಾರ್ಯಕರ್ತರ ಹತ್ಯೆ ನಡೆಯಲಾರಂಭಿಸಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಇವುಗಳಲ್ಲಿ ಅತ್ಯಂತ ಭಯಾನಕ ಹತ್ಯೆಗಳೆಂದರೆ ವಾರಾಣಾಸಿಯಲ್ಲಿ 4 ಸಮಾಜವಾದಿ ಪಾರ್ಟಿ ಮುಖಂಡರ ಹತ್ಯೆ, ಕಾಶೀ ವಿದ್ಯಾಪೀಠ ವಿದ್ಯಾರ್ಥಿ ಸಂಘದ ಅಧ್ಯಕರು, ಸಮಾಜವಾದಿ ಯುವಜನ ಸಭಾದ ರಾಜ್ಯ ಉಪಾಧ್ಯಕ್ಷರೂ ಹತ್ಯೆಯಾಗಿರುವವರಲ್ಲಿ ಸೇರಿದ್ದಾರೆ. ಮಾಯಾವತಿ ಸರಕಾರ ಈ ಹತ್ಯಾಕಾರೀ ಹಲ್ಲೆಗಳನ್ನು ತಡೆಯಲು ಏನೂ ಮಾಡಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ರಾಷ್ಟ್ರಪತಿ ಆಳ್ವಿಕೆಯಲ್ಲಿ ಕಾನೂನು ವ್ಯವಸ್ಥೆ ಪರಿಸ್ಥಿತಿ ಹದಗೆಟ್ಟಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದ ಬಿಜೆಪಿ-ಬಿಎಸ್‌ಪಿ ಕೂಟ ಈಗ ತನ್ನ ರಾಜಕೀಯ ವಿರೋಧಿಗಳ ಮೇಲೆ ದ್ವೇಷ ಸಾಧಿಸುವ ನಿಲುವು ತಳೆದಿದೆ. ಈ ರಾಜಕೀಯ ಕೊಲೆಗಳನ್ನು ತಕ್ಷಣ ನಿಲ್ಲಿಸಿ ಈ ಹತ್ಯೆಗಳಿಗೆ ಕಾರಣರಾದ ಅಪರಾಧಿಗಳನ್ನು ಬಂಧಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಮಾಯಾವತಿ ಸರಕಾರವನ್ನು ಪೊಲಿಟ್‌ಬ್ಯೂರೋ ಒತ್ತಾಯಿಸಿದೆ.

ಪ್ರಬೀರ್ ಸೇನ್ ಗುಪ್ತಾ ನಿಧನ

ಸಿಪಿಐ(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸದಸ್ಯರು ಸಿಐಟಿಯು ಮುಖಂಡರೂ ಆಗಿದ್ದ ಪ್ರಬೀರ್ ಸೇನ್ ಗುಪ್ತಾ ಏಪ್ರಿಲ್ 2 ರಂದು ದೀರ್ಘ ಕಾಯಿಲೆಯಿಂದ ನಿಧನರಾದರು. ಅವರಿಗೆ 65 ವರ್ಷ ವಯಸ್ಸಾಗಿತ್ತು. ತನ್ನ 20 ನೇ ವಯಸ್ಸಿನಲ್ಲಿ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾದ ಅವರು ತನ್ನ ಕೊನೆಯುಸಿರಿರುವವರೆಗೂ ಬೀಡಿ ಕಾರ್ಮಿಕರ, ರಿಕ್ಷಾ ಎಳೆಯುವವರ ಹಾಗೂ ಇತರ ಕಾರ್ಮಿಕರ ವಿಭಾಗಗಳ ನಡುವೆ ಬದುಕು ಸಾಗಿಸಿದ ಪ್ರಬೀರ್ ಸೇನ್ ಗುಪ್ತಾ ಸಿಐಟಿಯು ಪಶ್ಚಿಮ ಬಂಗಾಳ ಸಮಿತಿಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಅಲ್ಲದೆ ಎಡರಂಗ ಸರಕಾರದಲ್ಲಿ 1982 ರಿಂದ 1987 ರ ವರೆಗೂ ಲೇಬರ್ ಇಲಾಖೆಯಲ್ಲಿ ಇಎಸ್ಐ ಮತ್ತು ಉದ್ಯೋಗಾವಕಾಶ ಮಂತ್ರಿಯಾಗಿಯೂ, 1987ರಿಂದ 1991ರವರೆಗೆ ವಿದ್ಯುತ್ ಮಂತ್ರಿಯಾಗಿಯೂ ನಂತರ 1991 ರಿಂದ 1996 ರವರೆಗೆ ಸಣ್ಣ ಮತ್ತು ಗೃಹ ಕೈಗಾರಿಕೆ ಮಂತ್ರಿಯಾಗಿಯೂ ಅವರು ದುಡಿದರು.

ಮೂರನೇ ಜಗತ್ತಿನ ಹಿತಾಸಕ್ತಿಗಳನ್ನು ಮತ್ತೊಮ್ಮೆ ಎತ್ತಿ ಹಿಡಿದ ಅಲಿಪ್ತ ಆಂದೋಲನ ಸಭೆ

ನವದೆಹಲಿಯಲ್ಲಿ: ಸಂಯುಕ್ತ ರಂಗದ ಸರಕಾರಕ್ಕೆ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ಅಲಿಪ್ತ ವಿದೇಶ ಮಂತ್ರಿಗಳ ಮಹತ್ವದ ಸಭೆ ಏಪ್ರಿಲ್ 7 ಮತ್ತು 8 ರಂದು ನಡೆಯಿತು. ವೇಗವಾಗಿ ಬದಲಾಗುತ್ತಿರುವ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಈ ಸಭೆ ಬಹಳ ಮಹತ್ವಪೂರ್ಣವಾಗಿತ್ತು. ಸಂಯುಕ್ತ ರಂಗದ ವಿದೇಶಾಂಗ ನೀತಿ ನೆರೆಯ ದೇಶಗಳ ಜತೆ ಸಂಬಂಧ ಉತ್ತಮಪಡಿಸುವುದರಲ್ಲಿ ಸಫಲವಾಗಿದ್ದು, ಅಲಿಪ್ತ ವಿದೇಶ ಮಂತ್ರಿಗಳ ಸಭೆ ದೆಹಲಿಯಲ್ಲಿ ಇನ್ನೊಂದು ಮೈಲಿಗಲ್ಲಾಗಿತ್ತು.

ಎರಡು ದಿನಗಳ ಸಭೆಯ ನಂತರ ಸಭೆ ಹೊರಡಿಸಿದ ಹೇಳಿಕೆ ಪ್ರಸಕ್ತ ಅಂತರ್ರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ಅಲಿಪ್ತ ದೇಶಗಳ ಆತಂಕಕ್ಕೆ ದನಿ ಕೊಟ್ಟಿದೆ. ಏಕಧ್ರುವೀಯ ಅಮೇರಿಕನ್ ಸೂಪರ್ ಪವರ್ ಬೂಟನಡಿಯಲ್ಲಿ ತತ್ತರಿಸುವ ಮೂರನೇ ಜಗತ್ತಿನ ದೇಶಗಳ ಆತಂಕ ಹೇಳಿಕೆಯಲ್ಲಿ ಮೂಡಿ ಬಂತು. ವಿಶ್ವ ಸಂಸ್ಥೆಯ ಸುಧಾರಣೆಗಳು ಹಾಗೂ ಭದ್ರತಾ ಸಮಿತಿಯ ವಿಸ್ತಾರ, ಪ್ಯಾಲೆಸ್ತೇನ್ - ಇವು ಹೇಳಿಕೆಯಲ್ಲಿ ವ್ಯಕ್ತವಾದ ಪ್ರಧಾನ ವಿಷಯಗಳು.



ಏಪ್ರಿಲ್ 7ರಂದು ಅಲಿಪ್ತ ಆಂದೋಲನದ ವಿದೇಶಾಂಗ ಮಂತ್ರಿಗಳ ಸಮ್ಮೇಳನವನ್ನು ಉದ್ಘಾಟಿಸುತ್ತಿರುವ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡ. ಚಿತ್ರದಲ್ಲಿ(ಎಡದಿಂದ ಬಲಕ್ಕೆ) ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೊಫಿ ಅನ್ನನ್ ಹಾಗೂ ಅಲಿಪ್ತ ಆಂದೋಲನದ ಅಧ್ಯಕ್ಷನೇಶ ಕೊಲಂಬಿಯಾ ವಿದೇಶಾಂಗ ಮಂತ್ರಿ ಮರಿಯಾ ಎಮ್ಮ ಮೆಜಿಯಾ ಅವರನ್ನು ಕಾಣಬಹುದು

ಭದ್ರತಾ ಸಮಿತಿಯನ್ನು ವಿಸ್ತರಿಸಬೇಕು. ವಿಸ್ತರಣೆಯಲ್ಲಿ ಅಲಿಪ್ತ ದೇಶಗಳಿಗೆ ಸಮಾನ ನಿರ್ಧಾರದ ಹಕ್ಕುಗಳು ಇರಬೇಕು. ಜಗತ್ತಿನ ಮೂರರಲ್ಲಿ ಎರಡರಷ್ಟು ದೇಶಗಳನ್ನು ಪ್ರತಿನಿಧಿಸುವ ದೇಶಗಳಿಗೆ ವಿಶ್ವ ಸಂಸ್ಥೆಯಲ್ಲಿ ಮಹತ್ವದ ಪಾತ್ರ ಇರುವಂತೆ ವಿಶ್ವಸಂಸ್ಥೆಯಲ್ಲಿ ಸುಧಾರಣೆ ತರಬೇಕು. ಭದ್ರತಾ ಸಮಿತಿಯಲ್ಲಿ ಶಾಶ್ವತ ಸದಸ್ಯ ದೇಶಗಳ ವಿಟೋ ಬಳಕೆ ಸೀಮಿತವಾಗಿ ಆಗಬೇಕು. ಅಂತಿಮವಾಗಿ ಈ ವೀಟೋ ಹಕ್ಕನ್ನು ಕಿತ್ತು ಹಾಕಬೇಕು. ಈಗ ಅಭಿವೃದ್ಧ ದೇಶಗಳು ಹಾಕಿಕೊಂಡ ಯೋಜನೆಯಂತೆ ಮೂರು ರೀತಿಯ ಭದ್ರತಾ ಸಮಿತಿ ಸದಸ್ಯತ್ವ-ಶಾಶ್ವತ ಸದಸ್ಯರು(ವೀಟೋ ಹಕ್ಕಿನೊಂದಿಗೆ), ವೀಟೋ ಹಕ್ಕು ಇಲ್ಲದ ಶಾಶ್ವತ ಸದಸ್ಯರು ಮತ್ತು ಶಾಶ್ವತವಲ್ಲದ ಸದಸ್ಯರು(ಬಂಡವಾಳ ಪ್ರಾತಿನಿಧಿಕ) - ಒಪ್ಪಲರ್ಹವಲ್ಲ. ಇದು ಹೇಳಿಕೆ ಸ್ಪಷ್ಟಪಡಿಸಿದ ಅಲಿಪ್ತ ದೇಶಗಳ ಅನಿಸಿಕೆ.

ವಿಶ್ವವ್ಯಾಪಿ ಅಣ್ವಸ್ತ್ರ ನಿಶ್ಯಸ್ತ್ರೀಕರಣವನ್ನು ಈ ನಿಗದಿತ ಅವಧಿಯೊಳಗೆ ಸಾಧಿಸಲು ಹೇಳಿಕೆ ಕರೆ ಕೊಟ್ಟಿದೆ. ಇದನ್ನು ಸಾಧಿಸಲು ಶಾಶ್ವತ ದೇಶಗಳು ಮೊದಲು ಮಾಡಬೇಕು. ಅಭಿವೃದ್ಧ ದೇಶಗಳು ರಿಯೋದ ಭೂಮಿ ಸಮ್ಮೇಳನದಲ್ಲಿ ಪರಿಸರ ಸಂರಕ್ಷಣೆಗೆ ಸಂಪನ್ಮೂಲಗಳನ್ನು ಒದಗಿಸುವ ಬಗ್ಗೆ ಮಾಡಿದ ಆಶ್ವಾಸನೆಗಳನ್ನು ಪಾಲಿಸಿಲ್ಲ, ಅದನ್ನು ಪಾಲಿಸಬೇಕು ಎಂದು ಹೇಳಿಕೆ ಒತ್ತಾಯಿಸಿದೆ.

ಇಸ್ರೇಲು ಮಾಡ್ರಿಡ್ ಸಮ್ಮೇಳನದಲ್ಲಿ ಶಾಂತಿ ಒಪ್ಪಂದಗಳ ಅನುಸಾರ ನಡೆಯಬೇಕು. ಇಲ್ಲದಿದ್ದರೆ ಅಲಿಪ್ತ ಸದಸ್ಯ ದೇಶಗಳು ಇಸ್ರೇಲ್ ಜತೆ ಸಂಬಂಧಗಳನ್ನು ಸ್ತಬ್ಧಗೊಳಿಸ ಬೇಕು ಎಂದು ಪ್ಯಾಲೆಸ್ತೇನ್ ಜನತೆಯ ಸ್ವಯಂ-ನಿರ್ಧಾರದ ಹೋರಾಟಕ್ಕೆ ಬೆಂಬಲ ಕೊಡುತ್ತಾ ಹೇಳಿದೆ.

ಲೋಕಸಂಚಾರ

ಶರತ್‌ಚಂದ್ರ

ಪ್ಯಾಲೆಸ್ತೇನ್‌ನಲ್ಲಿ ದಿನಾ ಘರ್ಷಣೆಗಳು

ಇಸ್ರೇಲ್ ಪ್ರಧಾನಿ ನೆತಾನ್ಯಾಹು ಹಠಮಾರಿತನದಿಂದ ಪ್ಯಾಲೆಸ್ತೇನ್‌ನಲ್ಲಿ ದಿನಾ ಘರ್ಷಣೆಗಳು ಆರಂಭವಾಗಿವೆ. ಇಸ್ರೇಲಿ ಸೈನ್ಯ ಹಾಗೂ ಪೋಲೀಸ್ ಜತೆ ದಿನಾ ಪ್ಯಾಲೆಸ್ತೇನಿಯನ್ನರು ಘರ್ಷಣೆಯಲ್ಲಿ ತೊಡಗಿದ್ದಾರೆ. ಪ್ಯಾಲೆಸ್ತೇನ್ ಪ್ರದೇಶಗಳಲ್ಲಿ ಇಸ್ರೇಲಿ ಕಾಲೋನಿಗಳನ್ನು ಸ್ಥಾಪಿಸುವುದರ ವಿರುದ್ಧ ಪ್ಯಾಲೆಸ್ತೇನಿಯನ್ನರು ಪ್ರತಿಭಟಿಸುತ್ತಿದ್ದಾರೆ. ನೇತನ್ಯಾಹುರವರ ವಾಶಿಂಗ್‌ಟನ್ ಭೇಟಿ ಶಾಂತಿ ಮಾತುಕತೆ ಪುನಃ ದಾರಿಗೆ ಬರುವ ಯಾವುದೇ ಸಾಧ್ಯತೆ ತೋರಿಸಿಲ್ಲ. ಯುರೋಪಿಯನ್ ಮಧ್ಯಸ್ತಿಕೆಯನ್ನೂ ಇಸ್ರೇಲ್ ತಿರಸ್ಕರಿಸಿದೆ.

ಈ ನಡುವೆ ಉಗ್ರಗಾಮಿ ಪ್ಯಾಲೆಸ್ತೇನ್ ಹಾಮಾಸ್ ಗುಂಪು ಆತ್ಮಹತ್ಯಾ-ಬಾಂಬ್ ಧಾಳಿಗಳನ್ನು ಆರಂಭಿಸಿದೆ. ಈವರೆಗಿನ ಇಂತಹ ಮೂರು ಧಾಳಿಗಳಲ್ಲಿ ಒಂಬತ್ತು ಇಸ್ರೇಲಿಗಳು ಸತ್ತಿದ್ದಾರೆ. ಪ್ಯಾಲೆಸ್ತೇನ್‌ನಲ್ಲಿ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಅರ್ಧಕ್ಕೂ ಹೆಚ್ಚು ಜನ ಆತ್ಮಹತ್ಯಾ-ಬಾಂಬ್‌ನಂತಹ ಕ್ರಮಗಳು ಮಾತ್ರ ಈಗ ಇಸ್ರೇಲಿಗೆ ಉತ್ತರ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಪ್ಯಾಲೆಸ್ತೇನ್‌ನ ತೀವ್ರ ಕೋಪದ ದ್ಯೋತಕ.

ಅಮೇರಿಕಾ ಈಗೇಕೆ ಮೌನವಾಗಿದೆ?

● ಒಬ್ಬ ಮಹಿಳೆ ರೋಗಗ್ರಸ್ತ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಧಾವಿಸುತ್ತಿದ್ದಾಳೆ. ಆಕೆ ಮೇಲೆ ಸೈನಿಕ ಗುಂಡು ಹಾರಿಸುತ್ತಾನೆ. ಆಕೆಯ ಅಪರಾಧ? ಆಕೆಯ ಗಂಡ ಅಥವಾ ಕುಟುಂಬದ ಯಾವುದೇ ಪುರುಷ ಸದಸ್ಯ ಆಕೆಯ ಜತೆ ಇಲ್ಲ.

● ಮಾರ್ಕೆಟ್‌ನಲ್ಲಿ ಒಂದು ದಂಪತಿಗಳನ್ನು ಸೈನಿಕರು ಸಾರ್ವಜನಿಕವಾಗಿ ಥಳಿಸುತ್ತಿದ್ದಾರೆ. ಅವರ ಅಪರಾಧ? ಅವರು ಸೌಂದರ್ಯ ವರ್ಧಕ ವಸ್ತುಗಳ ಖರೀದಿ ಮಾಡಲು ಪ್ರಯತ್ನಿಸುತ್ತಿದ್ದರು ಎಂಬ ಅನುಮಾನ.

● ಮಕ್ಕಳು ಆಟಿಕೆಗಳೊಂದಿಗೆ ಆಟವಾಡುತ್ತಿದ್ದಾರೆ. ಸೈನಿಕರು ಬರುತ್ತಾರೆ. ಆಟಿಕೆಗಳನ್ನು ಕಸಿದುಕೊಂಡು ಮಕ್ಕಳನ್ನು ಥಳಿಸುತ್ತಾರೆ.

● ಮಹಿಳೆಯರನ್ನು ಸಾರ್ವಜನಿಕವಾಗಿ ಕಬ್ಬಿಣಪ ಚೈನ್‌ಗಳಿಂದ ಥಳಿಸುತ್ತಾರೆ ಸೈನಿಕರು. ಆಕೆಯ ಅಪರಾಧ? ಆಕೆ ಬುರ್ಖಾ ಧರಿಸಿದ್ದರೂ ಆಕೆಯ ಮೊಣಕೈ ಕಾಣುತ್ತಿತ್ತು. ಮುಚ್ಚಿರಲಿಲ್ಲ.

● ಕೆಲವು ಪುರುಷರನ್ನು ಕಬ್ಬಿಣದ ಪೆಟ್ಟಿಗೆಗಳಲ್ಲಿ ಹಾಕಿ ಬಿಡುತ್ತಾರೆ ಸೈನಿಕರು. ಅವರ ಅಪರಾಧ? ಅವರು ಸರಕಾರದ ನೀತಿಗಳನ್ನು ವಿರೋಧಿಸುತ್ತಾರೆ.

● ಕೆಲವು ಪುರುಷರನ್ನು ಸಾರ್ವಜನಿಕವಾಗಿ ಚಿತ್ರಹಿಂಸೆ ಕೊಟ್ಟು ಗಲ್ಲಿಗೆ ಹಾಕಲಾಗುತ್ತದೆ- ವಿಚಾರಣೆಯಿಲ್ಲದೆ. ಕೆಲವರ ಕೈ ಕಾಲು ಕಡಿದು ಹಾಕಲಾಗುತ್ತದೆ. ಅವರ ಅಪರಾಧ? ಅದೇ ಸರಕಾರದ ಕಾನೂನನ್ನು ವಿರೋಧಿಸಿದ್ದು.

- ಇವೆಲ್ಲಾ ಅತ್ಯಾಚಾರ ನಡೆಯುತ್ತಿರುವುದು ಯಾವ ಅನಾಗರೀಕ ದೇಶವೆಂದಿರಾ?

ಇವೆಲ್ಲಾ ನಡೆಯುತ್ತಿರುವುದು ಇಸ್ಲಾಮಿಕ್ -ಮೂಲಭೂತವಾದದ ವಿರುದ್ಧ ಯುದ್ಧ ಹೂಡುತ್ತಿದ್ದೇವೆ, ತಾನು ಇಸ್ಲಾಮಿಕ್ ಮೂಲಭೂತದ ಮುಖ್ಯ ಬಲಿ ಎಂದು ಹೇಳಿಕೊಳ್ಳುವ ಅಮೇರಿಕನ್ ಬೆಂಬಲದಿಂದ ಸ್ಥಾಪಿತವಾಗಿರುವ ತಾಲಿಬಾನ್ ಸರಕಾರದ ಆಡಳಿತದಲ್ಲಿ ನಲುಗುತ್ತಿರುವ ಅಫಘಾನಿಸ್ತಾನದ ದುರವಸ್ಥೆ.

ಅಫಘಾನಿಸ್ತಾನದ ಏಪ್ರಿಲ್ ಪ್ರಜಾಸತ್ತಾತ್ಮಕ ಕ್ರಾಂತಿಯ ನೆರವಿಗೆ ಬಂದ ಸೋವಿಯತ್ ಸೈನ್ಯ ಅಲ್ಲಿಗೆ ಹೋದಾಗ ನಂತರದ ಒಂದು ದಶಕದಲ್ಲಿ ಅಫಘಾನಿಸ್ತಾನ ಶಾಂತಿಯುತವಾಗಿದ್ದಾಗ ಅಲ್ಲಿನ 'ಮಾನವ ಹಕ್ಕುಗಳ ಉಲ್ಲಂಘನೆ' ಬಗ್ಗೆ ಅತಿರಂಜಿತ ವರದಿ ಬಿತ್ತರಿಸುತ್ತಿದ್ದ ಸಾಮ್ರಾಜ್ಯಶಾಹಿ ಮಾಧ್ಯಮಗಳು ಈಗ ರುದ್ರ ಮೌನ ಆಚರಿಸುತ್ತಿವೆ.

ಈ ಮೇಲಿನ ಘಟನೆಗಳು 'ಅಮ್ನೆಸ್ಟಿ ಇಂಟರ್‌ನ್ಯಾಶನಲ್'ನ ವರದಿಗಳನ್ನು ಆಧರಿಸಿದ್ದು.

ಮುಜಿಬ್ ಕೊಲೆಗೆ ಇಪ್ಪತ್ತು ಜನರ ಮೇಲೆ ಆರೋಪ ಪಟ್ಟಿ

ಬಾಂಗ್ಲಾ ದೇಶದ ಜನಕ ಮುಜಿಬುರ್ ರಹೆಮಾನ್‌ರ ಕೊಲೆ ಆರೋಪದ ಮೇಲೆ ದೇಶದ ಹಲವು ಹಿರಿಯ ಮಿಲಿಟರಿ ಅಧಿಕಾರಿಗಳು ಸೇರಿದಂತೆ ಇಪ್ಪತ್ತು ಜನರ ಮೇಲೆ ಆರೋಪವನ್ನು ಹೊರಿಸಲಾಗಿದೆ. ಇವರಲ್ಲಿ ಈವರಗೆ ಆರು ಜನ ಮಾತ್ರ ಬಂಧನಕ್ಕೊಳಗಾಗಿದ್ದಾರೆ. ಉಳಿದ 14 ಜನ ವಿದೇಶ ಗಳಲ್ಲಿ ತಲೆಮರೆಸಿಕೊಂಡು ಇದ್ದಾರೆ ಎನ್ನಲಾಗಿದೆ.

ಈ ಆರೋಪಿಗಳ ಮೇಲೆ ಏಪ್ರಿಲ್ ಕೊನೆಯ ವಾರದಲ್ಲಿ ವಿವರವಾದ ವಿಚಾರಣೆ ಆರಂಭವಾಗುವುದು. ತಲೆ ತಪ್ಪಿಸಿಕೊಂಡ ಆರೋಪಿಗಳು ಕೆನಡಾ, ಥೈಲಾಂಡ್, ಲಿಬ್ಯಾ, ಬ್ರಿಟನ್‌ಗಳಲ್ಲಿದ್ದಾರೆ. ಕೆನಡಾ ಬಿಟ್ಟರೆ ಇತರ ದೇಶಗಳೊಂದಿಗೆ ಬಾಂಗ್ಲಾ ದೇಶ ಆರೋಪಿಗಳ ವಿನಿಮಯದ ಬಗ್ಗೆ ಒಪ್ಪಂದವಿಲ್ಲ.

ಅಲ್ಬೇನಿಯಾದಲ್ಲಿ ಇಟಲಿ ಮಧ್ಯಪ್ರವೇಶಕ್ಕೆ ಕಮ್ಯುನಿಸ್ಟ್ ಪಕ್ಷದ ವಿರೋಧ

ಅಲ್ಬೇನಿಯಾದಲ್ಲಿ ಮಧ್ಯಪ್ರವೇಶ ಮಾಡಲು ನಾಟೋ ಯೋಜಿಸಿರುವ ಬಹುರಾಷ್ಟ್ರೀಯ ಪಡೆಗಳಲ್ಲಿ ಇಟಲಿಯದ್ದು ಪ್ರಧಾನ ಪಾತ್ರ. ಈ ಬಗ್ಗೆ ಇಟಲಿಯ ಎಡ-ಮಧ್ಯಮಪಂಥೀಯ ಸರಕಾರ ತೆಗೆದುಕೊಂಡ ನಿರ್ಧಾರ ಪಾರ್ಲಿಮೆಂಟಿನ ಮುಂಚೂಣಿಗೆ ಬಂದಾಗ, ಇಟಲಿಯ ಕಮ್ಯುನಿಸ್ಟ್ ಪಕ್ಷ ಅದನ್ನು ತೀವ್ರವಾಗಿ ವಿರೋಧಿಸಿತು.

ಇಟಲಿಯನ್ ಸರಕಾರದ ಈ ನಿರ್ಧಾರಕ್ಕೆ ಪಾರ್ಲಿಮೆಂಟಿನ ಮಂಜೂರಾತಿ ದೊರೆಯಿತು. ಆದರೆ ಇದಕ್ಕೆ ಬಲ ಪಂಥೀಯ ವಿರೋಧ ಪಕ್ಷಗಳ ಬೆಂಬಲ ಪಡೆಯಬೇಕಾಯಿತು. ಈ ನಿರ್ಧಾರದಿಂದ ಇಟಲಿಯ ಸಮ್ಮಿಶ್ರ ಸರಕಾರ ಪತನದ ಅಂಚಿನಲ್ಲಿ ಬಂದು ನಿಂತಿತ್ತು.

ಇಟಲಿ ತನ್ನ ಸೈನ್ಯವನ್ನು ದೇಶದ ಗಡಿಗಳಿಂದಾಚೆಗೆ ಇಂತಹ ಪ್ರಮಾಣದಲ್ಲಿ ಕಳಿಸುತ್ತಿರುವುದು -ಎರಡನೆ ಯ ಮಹಾಯುದ್ಧದ ನಂತರ ಇದೇ ಮೊದಲು.

ಇಟಾಲಿಯನ್ ಕಮ್ಯುನಿಸ್ಟ್ ಪಕ್ಷ ಸರಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುತ್ತಿದ್ದು ಅಲ್ಬೇನಿಯಾ ಬಗ್ಗೆ, ಯುರೋಪಿಯನ್ ಐಕ್ಯತೆ ಬಗ್ಗೆ ಸರಕಾರದ ನೀತಿಯನ್ನು ವಿರೋಧಿಸುತ್ತಿದೆ. ಆದರೆ ಸರಕಾರವನ್ನು ಉರುಳಿಸುವುದಿಲ್ಲ ಎಂದು ಪಕ್ಷ ಹೇಳಿದೆ.

..... ಮೂರು ದಶಕಗಳ ವರ್ಗ ಹೋರಾಟಗಳ ಮುನ್ನಡೆಯ ನೆನಪು

ಪುಟ 4 ರಿಂದ

ತಳವಿರಲಿಲ್ಲ. ಕೇರಳದಲ್ಲಿ ಪ್ರಜಾ ಸೋಶಲಿಸ್ಟ್ ಪಕ್ಷವು ಕಾಂಗ್ರೆಸ್ ಜತೆ ಸೇರಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರಕಾರ ಬೀಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರೆ, ಪಶ್ಚಿಮ ಬಂಗಾಳದಲ್ಲಿ ಪಿಎಸ್‌ಪಿಯು ಎಡ ಪಂಥೀಯರೊಂದಿಗಿನ ಎಲ್ಲಾ ಸಂಬಂಧಗಳನ್ನು ಕಡಿದುಕೊಂಡು, ಆಹಾರ ಚಳುವಳಿಯನ್ನು ವಿರೋಧಿಸಿತು ಮತ್ತು ಇದರ ಪರಿಣಾಮವಾಗಿ ಅಲ್ಲಿ ರಾಜಕೀಯ ನಕ್ಷೆಯಿಂದಲೇ ಅಳಿಸಿ ಹೋಗಬೇಕಾಯಿತು. 1962ರ ಚುನಾವಣೆ ಬಂದಾಗ ಅವರು ಎಡಪಂಥೀಯರ ಜತೆ ಇರಲೇ ಇಲ್ಲ.

1962ರ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷವು ಮತ್ತೆ ಸಂಯುಕ್ತ ಎಡರಂಗದ ಭಾಗವಾಗಿ ಚುನಾವಣಾ ಕಣಕ್ಕಿಳಿಯಿತು. ಈ ರಂಗದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ, ಕ್ರಾಂತಿಕಾರಿ ಸೋಷಲಿಸ್ಟ್ ಪಕ್ಷ, ಫಾರ್ವರ್ಡ್ ಬ್ಲಾಕ್, ಮಾರ್ಕ್ಸ್‌ವಾದಿ ಫಾರ್ವರ್ಡ್ ಬ್ಲಾಕ್, ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷ(ಆರ್‌ಸಿಪಿ) ಮತ್ತು ಬೋಲ್ಶೆವಿಕ್ ಪಕ್ಷಗಳು ಒಳಗೊಂಡಿದ್ದವು. ನಾವು 52 ಸ್ಥಾನಗಳನ್ನು ಗೆದ್ದೆವು ಮತ್ತು ಶೇಕಡಾ 35.53 ರಷ್ಟು ಮತ ಗಳಿಸಿದೆವು. ಈ ಹಿಂದೆ ಎಡರಂಗದ ಭಾಗವಾಗಿ 21 ಸ್ಥಾನಗಳನ್ನು ಗಳಿಸಿದ್ದ ಪಿಎಸ್‌ಪಿಯ ಸ್ಥಿತಿ ಕೇವಲ ಐದಕ್ಕೇ ಇಳಿಯಿತು.

ಪರಿಷ್ಕರಣವಾದ ಒಡ್ಡಿದ ಆತಂಕ

ಚುನಾವಣೆ ಮುಗಿದ ಕೂಡಲೇ ಎಡಪಂಥೀಯರ ಮೇಲೆ ಅದರಲ್ಲೂ ಕಮ್ಯುನಿಸ್ಟರ ಮೇಲೆ ಧಾಳಿಗಳನ್ನು ಹೆಚ್ಚಿಸಲಾಯಿತು. ಭಾರತ ಕಮ್ಯುನಿಸ್ಟ್ ಪಕ್ಷದೊಳಗೇ ಇದ್ದ ಪರಿಷ್ಕರಣವಾದಿಗಳು ಚುರುಕಾದರು. 1961ರ ಪಕ್ಷದ ವಿಜಯವಾಡಾ ಮಹಾಧಿವೇಶನದಲ್ಲಿ ಸೈದ್ಧಾಂತಿಕ ಸಂಘರ್ಷ ತೀವ್ರಗೊಂಡಿತು. ನಾವು ಪದೇ ಪದೇ ನಡೆಸಿದ ಐಕ್ಯ ಪ್ರಯತ್ನಗಳಿಗೆ ಡಾಂಗೆ ಗುಂಪು ಕಿವಿಗೊಡಲಿಲ್ಲ. 1962ರಲ್ಲಿ ಭಾರತ-ಚೀನಾ ಗಡಿ ಘರ್ಷಣೆಯ ಕಾಲದಲ್ಲಿ ನಮ್ಮೆಲ್ಲರನ್ನು ('ಎಡ' ಕಮ್ಯುನಿಸ್ಟರನ್ನು)ನಾಯಕತ್ವದ ದೊಡ್ಡ ವಿಭಾಗವನ್ನೂ ಒಳಗೊಂಡಂತೆ-ಭಾರತ ರಕ್ಷಣಾ ಕಾಯಿದೆಯಡಿ ಜೈಲಿಗೆ ಹಾಕುವಂತೆ ಮಾಡಲಾಯಿತು. ಎಸ್‌ಯುಸಿ, ವರ್ಕರ್ಸ್ ಪಾರ್ಟಿ ಮತ್ತು ಆರ್‌ಸಿಪಿಐ ನಾಯಕತ್ವ ಕೂಡಾ ಬಂಧನಕ್ಕೊಳಗಾಯಿತು. ಭಾರತ ಕಮ್ಯುನಿಸ್ಟ್ ಪಕ್ಷದ ಪರಿಷ್ಕರಣವಾದಿ ನಾಯಕತ್ವವು ಆಳುವ ವರ್ಗದೊಂದಿಗೆ ಸಹಕಾರದ ಹಸ್ತ ಚಾಚುವ ದಿಕ್ಕು ಹಿಡಿಯಿತು.

ಈ ಹಿನ್ನೆಲೆಯಲ್ಲಿ ಪಕ್ಷವನ್ನು ಪರಿಷ್ಕರಣವಾದೀ ಹುಳುಕುಗಳಿಂದ ಬಿಡುಗಡೆಗೊಳಿಸಲು ಮಾರ್ಕ್ಸ್‌ವಾದದ ಆಧಾರದಲ್ಲಿ ಪಕ್ಷವನ್ನು ಪುನರ್ಸಂಘಟಿಸಿ ಪುನಸ್ಥಾಪಿಸಲು ತೆನಾಲಿ ಸಮಾವೇಶವನ್ನು ಏರ್ಪಡಿಸಲಾಯಿತು. ಜುಲೈ 1964ರ ತೆನಾಲಿ ಸಮಾವೇಶದ ನಿರ್ಣಯದ ಮೇರೆಗೆ 1964ರ ಅಕ್ಟೋಬರ್ 24ರಿಂದ 31ರವರೆಗೆ ಪಕ್ಷದ ಏಳನೇ ಮಹಾಧಿವೇಶನವನ್ನು ತ್ಯಾಗರಾಜ ಸಭಾಂಗಣದಲ್ಲಿ ನಡೆಸಲಾಯಿತು. ಈ ಮಹಾಧಿವೇಶನ ನಡೆಯದಂತೆ ನೋಡಿಕೊಳ್ಳಲು ಹತಾಶ ಕಾಂಗ್ರೆಸ್ ಸರಕಾರವು ಹೊಸತಾಗಿ ಸ್ಥಾಪಿಸಲಾದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಹೆಚ್ಚೂ ಕಡಿಮೆ ಎಲ್ಲಾ ಕೇಂದ್ರ ಸಮಿತಿ ಸದಸ್ಯರುಗಳನ್ನು ಬಂಧಿಸಲು ಮುಂದಾಯಿತು. ಅದರಲ್ಲಿ ಮುಜಫರ್ ಅಹ್ಮದ್, ಪ್ರಮೋದ್ ದಾಸ್‌ಗುಪ್ತಾ, ಹರೆಕೃಷ್ಣ ಕೋನಾರ್, ಬಿನಯ್ ಚೌಧರಿ ಪ್ರಮುಖರು. ಪ್ರಜಾಸತ್ತಾತ್ಮಕ ಚಳುವಳಿಯನ್ನು ಸಂಘಟಿಸುವ ಸವಾಲನ್ನು ಯಶಸ್ವಿಯಾಗಿ ಎದುರಿಸಲು ಪಕ್ಷದ ಪುನರ್ಸಂಘಟನೆ ಅತಿ ಮುಖ್ಯವಾಗಿತ್ತು. ಪಶ್ಚಿಮ ಬಂಗಾಳ ಆಗ ವ್ಯಾಪಕವಾದ ಸಾಮೂಹಿಕ ಚಳುವಳಿಗಳಿಂದ ತುಂಬಿ ಹೋಯಿತು. ರಾಜಕೀಯ ಖೈದಿಗಳನ್ನು ಮುಕ್ತಗೊಳಿಸಲು, ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ವಿರೋಧಿಸಿ, ಕಾರ್ಮಿಕ-ನೌಕರ-ಉಪಾಧ್ಯಾಯರ ಬೇಡಿಕೆಗಳನ್ನು ಒತ್ತಾಯಿಸಿ, ನಿಯಂತ್ರಿತ ಬೆಲೆಗಳಲ್ಲಿ ಆಹಾರ ಹಾಗೂ ಇಂಧನ ವಸ್ತುಗಳನ್ನು ಪೂರೈಸಲು ಒತ್ತಾಯಿಸಿ ವ್ಯಾಪಕ ಚಳುವಳಿಗಳು ನಡೆದವು. ಈ ಕಾರ್ಯಾಚರಣೆಗಳ ಫಲವಾಗಿ ನಮ್ಮನ್ನು ಬಂಧನದಿಂದ ಮುಕ್ತಗೊಳಿಸಿದರು. ಉಕ್ಕೇರಿದ ಸಾಮೂಹಿಕ ಚಳುವಳಿಗಳಿಂದಾಗಿ ಪ್ರಫುಲ್ ಸೇನ್ ನೇತೃತ್ವದ ಕಾಂಗ್ರೆಸ್ ಪಕ್ಷವು ಜನರಿಂದ ದೂರವಾಯಿತು, ಅದೇ ಸಮಯದಲ್ಲಿ ಈ ಚಳುವಳಿಗಳು ಮತ್ತು ಹೋರಾಟಗಳಿಂದಾಗಿ ಎಡ ಚಳುವಳಿಗೆ ಮತ್ತು ಎಡ ಐಕ್ಯತೆಗೆ ಹೊಸ ಉತ್ತೇಜನ ದೊರೆಯಿತು.

1967ರ ಚುನಾವಣೆ

ಈ ಚಳುವಳಿಗಳು ಎಂಟು ಅಂಗ ಪಕ್ಷಗಳನ್ನೊಳಗೊಂಡ ಒಂದು 'ಸಂಯುಕ್ತ ಎಡರಂಗ'ದ ಹುಟ್ಟಿಗೆ ಕಾರಣವಾದವು. ಸ್ವಾತಂತ್ರ್ಯಾನಂತರದಲ್ಲಿ ಅಲೆ ಅಲೆಯಾಗಿ ಎದ್ದು ಬಂದ ಬೃಹತ್ ಸಾಮೂಹಿಕ ಚಳುವಳಿಯ ಹಿನ್ನೆಲೆಯಲ್ಲಿ 1967ರ ನಾಲ್ಕನೇ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲಾಯಿತು. ಹೊಸದಾಗಿ ಪುನರ್ಸಂಘಟಿಸಲ್ಪಟ್ಟಿದ್ದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಕ್ಕೆ ಇದು ಮೊದಲನೇ ಚುನಾವಣೆಯಾಗಿತ್ತು. ಒಂದು ದೊಡ್ಡ, ವಿಶಾಲ ತಳಹದಿಯ ಕಾಂಗ್ರೆಸ್ ವಿರೋಧಿ ಚುನಾವಣಾ ವೇದಿಕೆಯನ್ನು ಕಟ್ಟುವಲ್ಲಿ ನಾವು ಪೂರ್ಣವಾಗಿ ಸಫಲರಾಗಲಿಲ್ಲ. 'ಸಂಯುಕ್ತ ಎಡರಂಗ'ದಲ್ಲಿ ಸಿಪಿಐ(ಎಂ), ಆರ್‌ಎಸ್‌ಪಿ, ಎಂ.ಎಫ್.ಬಿ, ಆರ್‌ಸಿಪಿಐ, ಎಸ್‌ಎಸ್‌ಪಿ, ಎಸ್‌ಯುಸಿ, ವರ್ಕರ್ಸ್ ಪಾರ್ಟಿ ಮುಂತಾದವುಗಳು ಇದ್ದವು. ಒಂದು ಮುಖ್ಯವಾದ ಘಟನೆಯೆಂದರೆ ಕಾಂಗ್ರೆಸ್‌ನಿಂದ ಸಿಡಿದು ಹೋದ ಒಂದು ದೊಡ್ಡ ವಿಭಾಗ ಅಜೋಯ್ ಮುಖರ್ಜಿಯವರ ನೇತೃತ್ವದಲ್ಲಿ ಬಾಂಗ್ಲಾ ಕಾಂಗ್ರೆಸ್ ಪಕ್ಷವನ್ನು ರಚಿಸಿದ್ದು ಈ ಬಾಂಗ್ಲಾ ಕಾಂಗ್ರೆಸ್ ಪಕ್ಷವು ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್‌ನೊಂದಿಗೆ ಕೈಗೂಡಿಸಲು ಮುಂದಾಯಿತು, ಇದು ಇತರೆ ಮೂರು ಪಕ್ಷಗಳನ್ನೊಳಗೊಂಡು 'ಪ್ರಗತಿಪರ ಸಂಯುಕ್ತ ಎಡರಂಗ' ಎಂದು ಹೆಸರನ್ನು ಪಡೆಯಿತು.

(ಮುಂದುವರೆಯುವುದು)

ನೀವು ಓದಬೇಕಾದ ಪುಸ್ತಕ

‘ಚಿಂತನ’ದಿಂದ ಎರಡು ಪುಸ್ತಕಗಳು

☐ **ನೇತಾಜಿ ಸುಭಾಷ್ ಚಂದ್ರಬೋಸ್**

ಲೇಖಕರು: ಡಾ|| ಆರ್.ವಿ.ಭಂಡಾರಿ,

ಬೆಲೆ: 4 ರೂಪಾಯಿಗಳು

(ಅಂಚೆಯಲ್ಲಿ 5 ರೂಪಾಯಿ)

ಇದು ‘ಚಿಂತನ ಕಿರು ಪುಸ್ತಕ ಮಾಲಿಕೆ’ಯ 16ನೇ ಪ್ರಕಟಣೆ. ಸ್ವತಂತ್ರ ಭಾರತದ ಚಿನ್ನದ ಹಬ್ಬವನ್ನು ಕೆಲವು ಕಿರು ಪುಸ್ತಕವನ್ನು ಪ್ರಕಟಿಸಿ ಮಾರುವ ಮೂಲಕ ವಿಶಿಷ್ಟವಾಗಿ ಆಚರಿಸಲು ಹೊರಟಿರುವ ಚಿಂತನದ ‘ಇತಿಹಾಸದ ಪುಟಗಳಿಂದ... ...’ಮಾಲಿಕೆಯ ಮೊದಲ ಪುಸ್ತಕ ಇದು.

ಭಾರತದ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವವನ್ನು ಸ್ಮರಣೆ ಮಾಡಿ ದರಷ್ಟೇ ಸಾಲದು, ಆ ದಿನಗಳಲ್ಲಿ ಹೋರಾಟಗಾರರು ಕಂಡ ಕನಸುಗಳನ್ನು, ನೀಡಿದ ವಚನವನ್ನು ಇಂದಿನ ಯುವ ಪೀಳಿಗೆಗೆ ಪರಿಚಯ ಮಾಡಿಕೊಡ ಬೇಕಾಗಿದೆ. ಇಂತಹ ವಚನವನ್ನು ಪಾಲಿಸ ಲಾಗಿದೆಯೇ? ಸ್ವತಂತ್ರ್ಯ ಭಾರತದ ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯ ಆಗಿದೆಯೇ? ಎಂದು ನಾವು ವಿಶ್ಲೇಷಿಸ ಬೇಕಾಗಿದೆ ಎಂದು ಮುನ್ನುಡಿಯಲ್ಲಿ ಹೇಳಿರುವಂತೆ ಪುಸ್ತಕದ ವಸ್ತು ಕೂಡಾ ಇದೆ.

ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದ ಎಲ್ಲಾ ಹೋರಾಟಗಳಲ್ಲಿಯ ಒಂದು ಸಮಾನ ಅಂಶವೆಂದರೆ ದೇಶ ಪ್ರೇಮ, ತ್ಯಾಗ ಹಾಗೂ ಬಲಿದಾನದ ಭಾವನೆ. ವಿಭಿನ್ನ ಭಾಷೆ, ಸಂಸ್ಕೃತಿ, ಜನಾಂಗ, ಧರ್ಮದ ಜನರಿರುವ ಈ ದೇಶದಲ್ಲಿ ಸಮಾನ ಶತ್ರುವಾದ ಬ್ರಿಟಿಷ್ ವಸಾಹತು ಶಾಹಿಯ ವಿರುದ್ಧ ಹೋರಾಡುವಲ್ಲಿ ಇದು ಅಡ್ಡ ಬರಲಿಲ್ಲ. ಈ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಅಮೂಲ್ಯ ಜೀವನವನ್ನೇ ಬಲಿಕೊಟ್ಟ ದೇಶಪ್ರೇಮಿಗಳ ವೀರಗಾಥೆ ಇದು ಎನ್ನುವುದನ್ನು ಈ ಪುಸ್ತಕ ಪ್ರಸ್ತುತ ಪಡಿಸುತ್ತದೆ.

ನೇತಾಜಿ ಸುಭಾಷ್‌ರದ್ದು ಸ್ವಾತಂತ್ರ್ಯ ಚಳುವಳಿಯಲ್ಲಿ ಮರೆಯಲಾಗದ ಹೆಸರು. ಗಾಂಧೀಜಿಯವರನ್ನು ಗೌರವಿಸಿಯೂ ಅವರ ವೈಚಾರಿಕತೆಯ ವಿರುದ್ಧ ಯೋಚಿಸಿ, ಸೈನ್ಯ ಶಕ್ತಿಯ ಮೂಲಕ ಬ್ರಿಟಿಷರನ್ನು ಓಡಿಸುವ ಛಲ ಹೊತ್ತು ಈ ನೆಲ ಬಿಟ್ಟು ವಿದೇಶದಲ್ಲಿ ನೆಲೆ ನಿಂತು ಹೋರಾಡಿದ ವ್ಯಕ್ತಿ ಈತ. ಸುಭಾಷರ ಹುಟ್ಟು, ವಿದ್ಯಾಭ್ಯಾಸ, ಕ್ರಾಂತಿಕಾರಕ ವ್ಯಕ್ತಿತ್ವ, ಎಡಪಂಥೀಯ ಯೋಚನಾ ಕ್ರಮ, ಸ್ವಾತಂತ್ರ್ಯಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟ ಧೀರತ್ವಗಳನ್ನು ತುಂಬಾ ಸುಂದರವಾಗಿ ಸರಳವಾಗಿ ಲೇಖಕರು ಇಲ್ಲಿ ಚಿತ್ರಿಸಿದ್ದಾರೆ.

ನೇತಾಜಿಯವರ ಜನ್ಮ ಶತಾಬ್ಧಿಯ ಸಂದರ್ಭದಲ್ಲಿ ಈ ಪುಸ್ತಕ ಹೆಚ್ಚು ಮಹತ್ವದ್ದು. ಆರ್ಥಿಕ ಉದಾರೀಕರಣ, ಖಾಸಗೀಕರಣ ಗಳಂತಹ ಕ್ರಮಗಳಿಂದ ಸದ್ಯದ ನೀತಿಯ ಸಂದರ್ಭದಲ್ಲಿ ಜನತೆಗೆ ಸ್ವಾತಂತ್ರ್ಯದ ಮಹತ್ವವನ್ನು, ಅದನ್ನು ಪಡೆಯುವಲ್ಲಿ ಪಟ್ಟ ಶ್ರಮವನ್ನು ವಿವರಿಸುವ ಇಂತಹ ಪುಸ್ತಕಗಳು ಹೆಚ್ಚೆಚ್ಚು ಬರಬೇಕಾಗಿದೆ.

☐ **ಆಡುಬಾ ಹಾಡುಬಾ**

(ಮಕ್ಕಳ ಸಾಹಿತ್ಯ)

ಲೇ: ಆರ್.ವಿ.ಭಂಡಾರಿ

ಬೆಲೆ: 3 ರೂ. (ಅಂಚೆಯಲ್ಲಿ 4 ರೂಪಾಯಿ)

C/o ಚಿಂತನ ಕನ್ನಡ ಪುಸ್ತಕ ಮಳಿಗೆ,

ಪಂಡಿತ್ ಜನರಲ್ ಲೈಬ್ರರಿ, ಶಿರಸಿ.

ಇದು ಚಿಂತನ ಕಿರು ಪುಸ್ತಕ ಮಾಲಿಕೆಯ 15ನೇ ಪ್ರಕಟಣೆಯಾಗಿ ಹೊರ ಬಂದಿದೆ. ಈ ವರೆಗೆ ವೈಚಾರಿಕ ಸಾಹಿತ್ಯವನ್ನಷ್ಟೇ ತಂದ ಚಿಂತನ ಮಕ್ಕಳಿಗಾಗಿ ಈ ಪುಸ್ತಕ ಪ್ರಕಟಿಸಿದೆ. ಹೀಗೆ ಪ್ರಕಟಿಸುವ ಉದ್ದೇಶವನ್ನು ಪುಸ್ತಕದ ಮುನ್ನುಡಿಯಲ್ಲಿ ನೋಡಬಹುದು- “ಕಳೆದೆರಡು ವರ್ಷದಿಂದ ಜಿಲ್ಲೆಯಾದ್ಯಂತ ಪುಸ್ತಕ ಜಾಥಾ ಮಾಡಿದೆವು...... ಹೋದ ಹೋದಲ್ಲೆಲ್ಲಾ ಮಕ್ಕಳು ಪುಸ್ತಕಗಳಿಗಾಗಿ ಮುತ್ತುತ್ತಿದ್ದರು. ನಮ್ಮಲ್ಲೂ ಮಕ್ಕಳ ಪುಸ್ತಕಗಳಿದ್ದವು. ಆದರೆ ಆಸೆಯಿಂದ ಪುಸ್ತಕವನ್ನು ಎತ್ತಿಕೊಂಡ ಮಕ್ಕಳು ಅದರ ಬೆಲೆ ಕೇಳಿ ಹಾಗೇ ಇಟ್ಟು ಮೋರೆ ಬಾಡಿಸಿಕೊಂಡು ಹೋಗುವುದನ್ನು ನೋಡಿ ನಮಗೆ ತಳಮಳ ಆಗುತ್ತಿತ್ತು. ಆಗ ನಾವು ಚಿಂತನದಿಂದ ಕಡಿಮೆ ಬೆಲೆಯಲ್ಲಿ ಮಕ್ಕಳಿಗಾಗಿ ಒಂದಾದರೂ ಪುಸ್ತಕ ಹಾಕಬೇಕೆಂದುಕೊಂಡೆವು. ಇದು ಸತ್ಯಕೂಡ. ನಮ್ಮಲ್ಲಿ ಮಕ್ಕಳ ಸಾಹಿತ್ಯವೇ ಕಡಿಮೆ. ಇದ್ದದ್ದೂ ಆಕರ್ಷಕವಾಗಿಲ್ಲ. ಆಕರ್ಷಕ ವಾದದ್ದು ಕೈಗೆಟುಕುವುದಿಲ್ಲ.

ಆದರೆ ಈ ಒಂದು ಕೊರತೆಯನ್ನು ಚಿಂತನದ ಈ ಪುಸ್ತಕ ತಕ್ಕಮಟ್ಟಿಗೆ(ಅದರ ಮಿತಿಯಲ್ಲಿ) ತುಂಬಬಲ್ಲದು. ಪುಸ್ತಕದ ತುಂಬಾ ರಾಜಶೇಖರ ಹೆಬ್ಬಾರರ ಆಕರ್ಷಕ ಚಿತ್ರ ಪುಸ್ತಕದ ಆಕರ್ಷಣೆಯನ್ನು ಹೆಚ್ಚಿಸಿದೆ.

ಅನೇಕ ವರ್ಷಗಳ ಕಾಲ ಪ್ರಾಥಮಿಕ ಶಿಕ್ಷಕರಾಗಿ ಕೆಲಸ ಮಾಡಿದ ಆರ್.ವಿ. ಭಂಡಾರಿಯವರು ಇಲ್ಲಿ ಮಕ್ಕಳ ಮಾನಸಿಕ ಬೆಳವಣಿಗೆಗೆ ತಕ್ಕಂತೆ ವಸ್ತು ಮತ್ತು ಶೈಲಿಯನ್ನು ಜೋಡಿಸಿದ್ದಾರೆ. ಮಕ್ಕಳೊಂದಿಗೆ ಅನೇಕ ವರ್ಷಗಳನ್ನು ಕಳೆದು ಅವರನ್ನು ಸಾಧ್ಯವಾದಷ್ಟು ಅರ್ಥ ಮಾಡಿಕೊಂಡ ಲೇಖಕರು ವೈಚಾರಿಕ ಸಾಹಿತಿಗಳಾಗಿರು ವುದರಿಂದ ಮಕ್ಕಳಲ್ಲಿ ಕುತೂಹಲ ಮತ್ತು ಆರೋಗ್ಯಪೂರ್ಣ ಮನಸ್ಸನ್ನು ಚಿಗುರಿಸುವ ಕೆಲಸವನ್ನು ಇಲ್ಲಿ ಮಾಡಿದ್ದಾರೆ.

ಇದರಲ್ಲಿ ಪ್ರಾಸ ಪದ್ಯ(ಪೂರ್ವ ಪ್ರಾಥಮಿಕ ಮಕ್ಕಳಿಗೆ) ಮಕ್ಕಳ ಕವಿತೆ, ನಾಟಕ, ಕತೆಗಳಿವೆ. ಇದರ ಸುಂದರ ಮುದ್ರಣ ವಿನ್ಯಾಸ ಕೂಡ ಮಕ್ಕಳನ್ನು ತಕ್ಷಣ ಸೆರೆಹಿಡಿಯಬಲ್ಲದು.

ಪ್ರತಿಯೊಬ್ಬ ತಂದೆ ತಾಯಿಗಳೂ ತಮ್ಮ ಮಕ್ಕಳಿಗಾಗಿ ಕೊಂಡು ಕೊಳ್ಳಬಹುದಾದ ಪುಸ್ತಕಗಳಿವು ಎಂದು ಧೈರ್ಯವಾಗಿ ಹೇಳಬಹುದು.

- ವಿಠ್ಠಲ

ಅಣಕ

- ಶರತ್ ಚಂದ್ರ

ಇಪ್ಪತ್ತೊಂಬತ್ತೇ ಇದ್ದರೆ ಚೆನ್ನಾಗಿತ್ತು .... ಅಪ್ಪಾ!

ಮಗ: ಕರ್ನಾಟಕದಲ್ಲಿ ಜಿಲ್ಲೆಗಳು ಎಷ್ಟು ಅಪ್ಪಾ?

ಅಪ್ಪ: ಇಪ್ಪತ್ತಲ್ವ ಮಗಾ!

ಮಗ: ಅಯ್ಯೋ! ನೀನು ಯಾವ ಜಮಾನಾದಲ್ಲಿ ಇದ್ದಿಯಾ?

ಅಪ್ಪ: ಓ! ಹೊಸ ಜಿಲ್ಲೆಗಳನ್ನು ಸೇರಿಸಿ ಕೇಳ್ತಾ ಇದ್ಯಾ ಮಗಾ!

ಮಗ: ಅವರೂ ಗುಲ್ಬರ್ಗಾ, ಬೆಳಗಾಂಗಳಲ್ಲೂ ಇನ್ನೆರಡು ಜಿಲ್ಲೆ ಮಾಡಿದ್ರೆ ನ್ಯಾಯ ಆಗ್ತಾ ಇತ್ತಲ್ವ.

ಅಪ್ಪ: ಭಲೆ! ಕರ್ನಾಟಕದ ರಾಜಕೀಯದ ಬಗ್ಗೆ ನಿನಗೆ ಯಾವಾಗ ಮಗಾ ಇಷ್ಟು ಕಾಳಜಿ ಬಂದಿದ್ದು?

ಮಗ: ಏಳು ಮಾಡಿದ ಮೇಲೆ ಇನ್ನೆರಡು ಜಿಲ್ಲೆ ಮಾಡಿದರೆ ಸರಿ ಆಗ್ತಾ ಇತ್ತಲ್ಲಪ್ಪಾ!

ಅಪ್ಪ: ಯಾಕೆ? ನಿನಗೆ ಇಷ್ಟೊಂದು ಕಾಳಜಿ ಅಂತ ಇದ್ದಕ್ಕಿದ್ದ ಹಾಗೆ?

ಮಗ: ಇನ್ನೇನಿಲ್ಲ, ನಾನು ಪರೀಕ್ಷೆಯಲ್ಲಿ ಕರ್ನಾಟಕದಲ್ಲಿ ಎಷ್ಟು ಜಿಲ್ಲೆಗಳು ಎಂಬ ಪ್ರಶ್ನೆಗೆ ಇಪ್ಪತ್ತೊಂಬತ್ತು ಅಂತ ಬರೆದಿದ್ದೆ. ಅದಕ್ಕೆ..!

ಅಪ್ಪ: ಓ! ಹಾಗೋ ಸಮಾಚಾರ. ಆದರೆ ನಿನ್ನ ಪರೀಕ್ಷೆ ಆಗಿ ಭಾಳ ದಿನಾ ಆಯ್ತಲ್ಲ. ಹೊಸ ಜಿಲ್ಲೆ ಮಾಡಿದ್ದು ಮೊನ್ನೆ ಮೊನ್ನೆಯಲ್ವ.

ಮಗ: ಆಗ ಇಪ್ಪತ್ತೊಂಬತ್ತು ಅಂತ ಅಂದಾಜಿಗೆ ಉತ್ತರಿಸಿದ್ದೆ. ಜಿಲ್ಲೆಗಳು ಇಪ್ಪತ್ತೊಂಬತ್ತೇ ಇದ್ದರೆ ಚೆನ್ನ ಆಗ್ತಿತ್ತು ಅಪ್ಪ! ಅದೊಂದು ಉತ್ತರ ಆದರೂ ಸರಿ ಆಗ್ತಿತ್ತು.

ಎಐಕೆಎಸ್ 60ನೇ ವಾರ್ಷಿಕೋತ್ಸವ....

ಪುಟ 5 ರಿಂದ ನೋಡಿ

ಒಂದು ಸಮಾನ ಪರಿಸ್ಥಿತಿಯ ಅಭಾವದಿಂದಾಗಿ ‘ಏಕೈಕ ಘೋಷಣೆಯೊಂದು ಕೇಂದ್ರ ಘೋಷಣೆಯಾಗಲು ಸಾಧ್ಯವಿಲ್ಲ” ಎಂಬ ತೀರ್ಮಾನಕ್ಕೆ ಬಂತು. ವಿಭಿನ್ನ ಪ್ರದೇಶಗಳಲ್ಲಿ, ಸ್ಥಳಗಳಲ್ಲಿ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾದ ಘೋಷಣೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಅದು ನಿರ್ಧರಿಸಿತು.

ಮೂರು ವಿಧಗಳು

ದೇಶದ ಕೃಷಿ ಬೆಳವಣಿಗೆಯಲ್ಲಿ ಪಶ್ಚಿಮಬಂಗಾಳ, ಕೇರಳ, ತ್ರಿಪುರಾದಂತಹ ದೊಡ್ಡ ರೈತ ಹೋರಾಟಗಳ ಪರಿಣಾಮವಾಗಿ ಸಂವಿಧಾನದ ಮಿತಿಯೊಳಗೆ ಏನೇನು ಬದಲಾವಣೆಗಳು ಸಾಧ್ಯವಿತ್ತೋ ಅವನ್ನೆಲ್ಲಾ ತಂದ ಪ್ರದೇಶಗಳು-ಎರಡನೇ ವಿಧವೆಂದರೆ ಕೃಷಿಯ ಬಂಡವಾಳಶಾಹೀ ಬೆಳವಣಿಗೆ ಕಂಡ ಪಂಜಾಬ್, ಹರ್ಯಾಣ, ಪಶ್ಚಿಮ ಯು.ಪಿ, ಆಂಧ್ರಪ್ರದೇಶ, ಮುಂತಾದ ಪ್ರದೇಶಗಳು ಹಾಗೂ ತಮಿಳುನಾಡಿನ ಕೆಲವು ಪ್ರದೇಶಗಳು ಈ ಪ್ರದೇಶಗಳಲ್ಲಿ ರೈತಾಪಿ ಜನರ ಶ್ರೀಮಂತ ವಿಭಾಗಗಳು ಮತ್ತು ಕೃಷಿ ಕೂಲಿಕಾರರ ನಡುವೆ ಒಂದು ದೊಡ್ಡ ವ್ಯತ್ಯಾಸ ಉಂಟಾಗುತ್ತಿದ್ದ ನಾವು ಬಡ ರೈತರು ಮತ್ತು ಕೃಷಿ ಕೂಲಿಕಾರರ ಪ್ರಶ್ನೆಗಳನ್ನು ಎತ್ತಿಕೊಳ್ಳದಿದ್ದರೆ ಒಂದು ಬಲಶಾಲಿ ಆಂದೋಲನಕ್ಕೆ ನೇತೃತ್ವ ನೀಡಲು ಸಾಧ್ಯವಿಲ್ಲ” ಎಂದು ಸುರ್ಜಿತ್ ಎಚ್ಚರಿಸಿದರು. ಮೂರನೇ ವಿಧದಲ್ಲಿ ಪೂರ್ವ ಮತ್ತು ಮಧ್ಯ ಯು.ಪಿ., ಬಿಹಾರ, ಒರಿಸ್ಸಾ, ಮಧ್ಯಪ್ರದೇಶ ಹಾಗೂ ಊಳಿಗಮಾನ್ಯ ವ್ಯವಸ್ಥೆ ಇನ್ನೂ ಪ್ರಬಲವಾಗಿರುವ ಹಲವು ಪ್ರದೇಶಗಳು ಬರುತ್ತವೆ. “ಇಲ್ಲಿ ಭೂ ಹಂಚಿಕೆಯ ಮಾತೆಲ್ಲಿಂದ ಬರುತ್ತದೆ, ಭೂ ದಾಖಲೆಗಳೇ ಇಲ್ಲ” ಎಂದು ಸುರ್ಜಿತ್ ಹೇಳಿದರು.

ನಿರ್ದಿಷ್ಟ ಸನ್ನಿವೇಶಕ್ಕೆ ಅನುಗುಣವಾಗಿ ಘೋಷಣೆಗಳನ್ನು ರೂಪಿಸಿರುವ ಅಗತ್ಯವನ್ನು ಹೇಳುತ್ತಲೇ ಸುರ್ಜಿತ್ ಬಡರೈತರು ಮತ್ತು ಕೃಷಿ ಕಾರ್ಮಿಕರ ಆತಂಕಗಳ ಮೇಲೆ ಗಮನ ಕೇಂದ್ರೀಕರಿಸುವುದು ಅತ್ಯಂತ ಅಗತ್ಯವೆಂದೂ ಒತ್ತಿ ಹೇಳಿದರು. ಏಕೆಂದರೆ ಇದರಿಂದ ಮಾತ್ರವೇ ಕರ್ಷಕ ಹೋರಾಟಕ್ಕೆ ಅಗತ್ಯ ಸಮರಶೀಲತೆ ಬರಲು ಸಾಧ್ಯ ಹಾಗೂ ಆಗ ಮಾತ್ರವೇ ವರ್ಗಶಕ್ತಿಗಳ ಬಲಾಬಲವನ್ನು ಬದಲಿಸಲು ಈ ಹೋರಾಟಗಳು ನೆರವಾಗುತ್ತವೆ ಎಂದು ಸುರ್ಜಿತ್ ಹೇಳಿದರು. ಆರ್ಥಿಕ ಘೋಷಣೆಗಳಲ್ಲದೆ ಪಂಚಾಯತ್ ವ್ಯವಸ್ಥೆಯ ಕಾರ್ಯನಿರ್ವಹಣೆ, ಶಿಕ್ಷಣ, ಆರೋಗ್ಯ ಮತ್ತಿತರ ಕಲ್ಯಾಣ ಕಾರ್ಯಗಳ ಬೇಡಿಕೆಗಳನ್ನು ಎತ್ತಿಕೊಳ್ಳಬೇಕು ಎಂದು ಅವರು ಹೇಳಿದರು.

ಸಾಮ್ರಾಜ್ಯಶಾಹಿ-ವಿರೋಧಿ ಪರಂಪರೆ

ಸುರ್ಜಿತ್ ಕಿಸಾನ್ ಸಭಾದ ಬಲಿಷ್ಠ ಸಾಮ್ರಾಜ್ಯಶಾಹಿ-ವಿರೋಧಿ ಪರಂಪರೆಯನ್ನು ಪ್ರಸ್ತಾಪಿಸುತ್ತಾ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತೆ ಧಾಳಿ ಮಾಡಲಾರಂಭಿಸುವ ಪ್ರಸ್ತುತ ಸಂದರ್ಭದಲ್ಲಿ ಈ ಪರಂಪರೆಯನ್ನು ದೊಡ್ಡ ರೀತಿಯಲ್ಲಿ ಪುನರುಜ್ಜೀವನಗೊಳಿಸಬೇಕು ಎಂದರು. ರೈತ ಆಂದೋಲನವನ್ನು ಒಡೆಯಲು ಮುಂದಾಗಿರುವ ಕೋಮುವಾದಿ ಶಕ್ತಿಗಳ ಅಪಾಯದ ವಿರುದ್ಧವೂ ಅವರು ಮಾತನಾಡಿದರು. ರೈತಾಪಿ ಜನಗಳ ರಾಜಕೀಯ ಪ್ರಜ್ಞೆಯನ್ನು ವಿಸ್ತರಿಸುವುದು ಹಾಗೂ ಅವರನ್ನು ಬಂಡವಾಳಶಾಹಿ-ಭೂಮಾಲಕ ವರ್ಗಗಳ ಸೈದ್ಧಾಂತಿಕ ಪ್ರಭಾವದಿಂದ ಮುಕ್ತ ಮಾಡುವುದು ಕಿಸಾನ್ ಸಭಾದ ಮುಂದಿರುವ ಪ್ರಮುಖ ಕರ್ತವ್ಯ ಎಂದು ಸುರ್ಜಿತ್ ಹೇಳಿದರು.

(ಐಎನ್‌ಎನ್)

ಪುಟ 10ರಿಂದ

ಹೆಗಡೆಯವರು ಯಾರ ವಕ್ತಾರರು?

ಸಂಯುಕ್ತ ರಂಗವನ್ನು ಒಡೆಯುವ ತಂತ್ರಗಳನ್ನೇ ಅಹೋರಾತ್ರಿ ಅನುಸರಿಸಿ ಬರುತ್ತಿದ್ದಾರೆ ಬಿಜೆಪಿಯ ಅಡ್ವಾಣಿಯವರು. ಇದರ ಭಾಗವಾಗಿಯೇ ತತ್ವರಹಿತವಾದ ಅತ್ಯಂತ ಸಂದರ್ಭವಾದೀ ರಾಜಕೀಯ ಒಡಂಬಡಿಕೆ ಮಾಡಿಕೊಂಡು ಅವರು ಬಿಎಸ್‌ಪಿಯ ಜತೆಗೂಡಿ ಉತ್ತರ ಪ್ರದೇಶದಲ್ಲಿ ಅಧಿಕಾರ ಹೂಡಲು ಹೊರಟಿದ್ದು ಎಂದೂ ಅವರು ವಿಶ್ಲೇಷಿಸುತ್ತಾರೆ.

ಸಂಯುಕ್ತ ರಂಗವನ್ನು ಒಡೆಯುವುದೇ ಬಹುಶಃ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಏಕಮೇವ ಉದ್ದೇಶ ಕೂಡಾ. ಅದಕ್ಕನುಸಾರವಾಗಿ ಅವರು ಇದೀಗ ಎಡಪಕ್ಷಗಳನ್ನು ಟೀಕಿಸುವುದು ಮತ್ತು ಕಾಂಗ್ರೆಸ್ ನೇತೃತ್ವದ ಸರಕಾರವನ್ನು ಅಥವಾ ಕಾಂಗ್ರೆಸ್ ಪಕ್ಷವು ಸಹಭಾಗಿಯಾಗಿರುವ ಸಂಯುಕ್ತ ರಂಗವನ್ನು ಕೇಂದ್ರದಲ್ಲಿ ಸೂಚಿಸುವುದು.


ಲಾಭಕೋರರಿಗೆ ಮುದ ನೀಡುವ ಸಲಹೆ?

ಇಂತಹ ಸಂಕುಚಿತ ರಾಜಕೀಯವನ್ನು ಒಪ್ಪದ ಯಾರೇ ಆದರೂ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೇ, ಇದೀಗ ಇಳೀ ವಯಸ್ಸಿನಲ್ಲಿ ಯಾಕೆ ಇಂತಹ ಕಮ್ಯುನಿಸ್ಟ್ ವಿರೋಧಿ, ಜನಸಾಮಾನ್ಯರ ಹಿತಗಳನ್ನು ಬಲಿ ಕೊಡುವ ನೀತಿ ನಿರೂಪಣೆ ಎಂದು ಸಹಜವಾಗಿಯೇ ಪ್ರಶ್ನಿಸುತ್ತಾರೆ.

ಲಾಭವು ಸರಾಗವಾಗಿ ಯಾವುದೇ ರಾಜಕೀಯ ಅಡ್ಡಿ ಆತಂಕವಿಲ್ಲದೆ ತಮ್ಮ ತೆಕ್ಕೆಗೆ ಬೀಳುತ್ತಾ ಹೋಗಬೇಕೆಂಬುದೇ ಬಹುರಾಷ್ಟ್ರೀಯ ಕಂಪೆನಿಗಳ ಮತ್ತು ದೇಶದ ಒಳಗಿನ ಗುತ್ತೇದಾರಿ ಬಂಡವಾಳಶಾಹಿ ಕಂಪನಿಗಳ ಇಂಗಿತವಾಗಿರುವಾಗ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸಲಹೆ ಅವರಿಗೆ ಎಷ್ಟು ಸೂಕ್ತವಾಗಿದೆಯಲ್ಲವೇ? ದೇಶದ ಬಹುಭಾಗದ ಜನ ಸಾಮಾನ್ಯರ ಗತಿ ಏನಾದರೂ ಇಂತಹವರಿಗೆ ಏನಂತೆ? ಒಟ್ಟಿನಲ್ಲಿ ಎಡಪಕ್ಷಗಳು ದೇಶದಲ್ಲಿ ಬೆಳೆದು ಪ್ರಮುಖ ಪಾತ್ರ ವಹಿಸುವುದು ಮಾತ್ರ ಈ ಶಕ್ತಿಗಳಿಗೆ ಮತ್ತು ವ್ಯಕ್ತಿಗಳಿಗೆ ಬೇಡವಷ್ಟೇ-ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಟೀಕಿಸಿದ್ದಾರೆ.

ವಾರದ ವ್ಯಂಗ್ಯ ಚಿತ್ರ

ಕಾಂಗ್ರೆ ಅಧ್ಯಕ್ಷ ಕೇಸರಿಯವರ ಪತ್ರ ಸೃಷ್ಟಿಸಿದ ಬಿಕ್ಕಟ್ಟಿನ ಬಗ್ಗೆ ‘ಟೈಮ್ಸ್ ಆಫ್ ಇಂಡಿಯಾ’ದಲ್ಲಿ ಆರ್.ಕೆ.ಲಕ್ಷ್ಮಣ್‌ರವರ ವ್ಯಂಗ್ಯ



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು